14 December 2025 Sunday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಭಾವನಾ ಜೀವಿಗಳಿಗೆ
ಯಾವಾಗಲೂ ನೋವು ಜಾಸ್ತಿ,
ಅವರ ಸೂಕ್ಷ್ಮ ಮನಸ್ಸು ಅವರಿಗೆ
ನೋವನ್ನು ಕೊಡುತ್ತದೆ!
▸▸ ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಸುಳ್ಳು ಬೇಗನೆ
ಮಾರಾಟವಾಗುತ್ತೆ
ಯಾಕೆಂದರೆ ಸತ್ಯನ
ಖರೀದಿಸುವುದು ಯೋಗ್ಯತೆ
ಎಲ್ಲರಿಗೂ ಇರಲ್ಲ ಯಾಕೆ
ಅಂದ್ರೆ
ಅದರ ತೂಕ ಜಾಸ್ತಿ ಇರುತ್ತೆ
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 52 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಜ.6ಕ್ಕೆ ಡಿಕೆಶಿಗೆ 'ಪಟ್ಟಾಭಿಷೇಕ'

## ನಮ್ಮ ಬೇಡಿಕೆಗೆ ಹೈಕಮಾಂಡ್ ಸ್ಪಂದಿಸಿದೆ | ಶಾಸಕ ಇಕ್ಬಾಲ್ ಸ್ಫೋಟಕ ಹೇಳಿಕೆ

**ರಾಮನಗರ:** ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ಕುರ್ಚಿ ಕಿತ್ತಾಟಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ಡಿ.ಕೆ.ಶಿವಕುಮಾರ್ ಅವರಿಗೆ ಜನವರಿ 6ರಂದು ಪಟ್ಟಾಭಿಷೇಕ ಖಚಿತ ಎಂದು ಡಿಸಿಎಂ ಆಪ್ತ ಶಾಸಕ ಇಕ್ಬಾಲ್ ಹುಸೇನ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಬಿಟ್ಟುಕೊಡಬೇಕು. ಅವರಿಗೆ ಅವಕಾಶ ಸಿಗಬೇಕು. ಇದಕ್ಕೆ ಹೈಕಮಾಂಡ್ ಸ್ಪಂದಿಸುತ್ತಿದೆ. ಬಹುಶಃ ಜ.6ರಂದು ಸಿಎಂ ಸಿಗುವ ಸ್ಥಾನ ಸಿಗುವ ಸಾಧ್ಯತೆ ಇದೆ. ನನಗೆ ಶೇ.99ರಷ್ಟು ವಿಶ್ವಾಸ ಇದೆ ಎಂದು ಖಚಿತವಾಗಿ ಮಾತನಾಡಿದರು.

ಡಿ.ಕೆ.ಶಿವಕುಮಾರ್ ಅವರಿಗೆ ಜ.6 ಮತ್ತು ಜ.9 ಅದೃಷ್ಟ ಸಂಖ್ಯೆ. ನಮ್ಮಲ್ಲಿ ಯಾವುದೇ ಬಣ ಇಲ್ಲ. ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್ ಇಬ್ಬರೂ ರಾಜ್ಯದ ಆಸ್ತಿ. ಡಿಕೆಶಿ ಹೋರಾಟ, ಶ್ರಮಕ್ಕೆ ಪ್ರತಿಫಲ ಸಿಗಬೇಕು ಎನ್ನುವುದು ನಮ್ಮ ಬೇಡಿಕೆ ಎಂದು ತಿಳಿಸಿದರು.

ನಾಳೆ ನಾನು ಡಿಕೆಶಿವಕುಮಾರ್ ನೇತೃತ್ವದಲ್ಲಿ ದೆಹಲಿಗೆ ಹೋಗಿ ವೋಟ್ ಚೋರಿ ಪ್ರತಿಭಟನೆಯಲ್ಲಿ ಭಾಗಿಯಾಗುತ್ತೇನೆ. ದೆಹಲಿ ಭೇಟಿ ಸಮಯದಲ್ಲಿ ನಾವು ಯಾವುದೇ ವರಿಷ್ಠರನ್ನ ಭೇಟಿ ಮಾಡುವುದಿಲ್ಲ. ಈಗಾಗಲೇ ನಮ್ಮ ಮನವಿಯನ್ನ ವರಿಷ್ಠರಿಗೆ ತಿಳಿಸಿದ್ದೇವೆ. ಸ್ಪಂದನೆ ಸಿಗುವ ವಿಶ್ವಾಸವಿದೆ. ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಯತೀಂದ್ರ ಸಿದ್ದರಾಮಯ್ಯ ಅವರ ನಾಯಕತ್ವ ಬದಲಾವಣೆ ಇಲ್ಲ

ಪುಟ 2ಕ್ಕೆ





### ಆತನ ಮಾತು ನಂಬಬೇಡಿ: ಅವನಿಗೆ ಮಾತಾಡುವ ಚಟ! ; ಡಿಸಿಎಂ

**ಬೆಂಗಳೂರು:** ಶಾಸಕ ಇಕ್ಬಾಲ್ ಹುಸೇನ್ ಮಾತನ್ನು ಯಾರೂ ನಂಬಬೇಡಿ. ಅವನಿಗೆ ಮಾತನಾಡುವ ಚಟ ಇದೆ. ಅವನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ನಗರದಲ್ಲಿ ದೆಹಲಿಗೆ ತೆರಳುವ ಮುನ್ನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನದಲ್ಲಿ ತಮ್ಮ ಬೆಂಬಲಿಗ ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಡಿಕೆಶಿ ಅವರು, ಆತನ ಮಾತುಗಳನ್ನು ವಿಶೇಷವಾಗಿ ಪರಿಗಣಿಸಬೇಕಾದ ಅಗತ್ಯವಿಲ್ಲ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಅವರ ಆಪ್ತ ಶಾಸಕ ಇಕ್ಬಾಲ್ ಹುಸೇನ್ ಅವರು ಒಂದು ಹೆಜ್ಜೆ ಮುಂದೆ ಹೋಗಿ ಜನವರಿ 6ರಂದು ಡಿಕೆಶಿ ಮುಖ್ಯಮಂತ್ರಿಯಾಗಲಿದ್ದಾರೆ ಎಂದಿದ್ದರು. ಡಿಕೆ ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವುದೇ ನಮ್ಮ ಗುರಿ. ಅವರು ಜನವರಿ 6ರಂದು ಅಧಿಕಾರ ಸ್ವೀಕರಿಸುವರು ಎಂದು ಭವಿಷ್ಯ ನುಡಿದರು.

ಹೈಕಮಾಂಡ್ ಸೂಚನೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ

ಪುಟ 2ಕ್ಕೆ

# ಹೈಕಮಾಂಡ್ ಮುಂದೆ ಬಲ ಪ್ರದರ್ಶನ ಮಾಡಲ್ಲ: ಡಿಕೆಶಿ



**ಬೆಂಗಳೂರು:** ನವದೆಹಲಿಯಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಶಾಸಕರ ಬೆಂಬಲದ ಬಲಪ್ರದರ್ಶನ ನಡೆಯಲಿದೆ ಎಂಬ ವಿಷಯವನ್ನು ಉಪ ಮುಖ್ಯಮಂತ್ರಿ ಡಿ.ಕೆಶಿವಕುಮಾರ್ ನಿರಾಕರಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಾವು ಮತಕಳ್ಳತನ ವಿರುದ್ಧ ಪ್ರತಿಭಟನೆ ನಡೆಸಲು ನವದೆಹಲಿಗೆ ಹೋಗುತ್ತಿದ್ದೇವೆ. ಈ ಸಂದರ್ಭದಲ್ಲಿ ಬೆಂಬಲಿಗ ಶಾಸಕರನ್ನು ಹೈಕಮಾಂಡ್ ಬಳಿಗೆ ಕರೆದೊಯ್ಯುವುದಿಲ್ಲ ಎಂದು ಹೇಳಿದರು.

ತಮಗೆ ಅಧಿಕಾರವನ್ನು ಪ್ರದರ್ಶಿಸುವ ಅಗತ್ಯವಿಲ್ಲ ಅಥವಾ ಶಾಸಕರನ್ನು ತಮ್ಮ ಹಿಂದೆ ಒಗ್ಗೂಡಿಸಿ ಬೆಂಬಲ ತೋರಿಸಲು ಪ್ರಯತ್ನಿಸುವುದಿಲ್ಲ. ನಾನು ಯಾವುದೇ ಶಕ್ತಿ ಪ್ರದರ್ಶನವನ್ನು ಮಾಡುತ್ತಿಲ್ಲ. ನನಗೆ ಅದರ ಅಗತ್ಯವೂ ಇಲ್ಲ. ಯಾರೂ ನನ್ನ ಹಿಂದೆ ಬರಬೇಡಿ, ಯಾರೂ ನನ್ನ ಪರವಾಗಿ ಮಾತನಾಡಬೇಡಿ ಎಂದು ಹೇಳುತ್ತೇನೆ ಎಂದು ತಿಳಿಸಿದರು. ಎಲ್ಲಾ 140 ಶಾಸಕರು ಕಾಂಗ್ರೆಸ್ ಗೆ ಸೇರಿದವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲರೂ ಒಂದೇ ಎಂದು ಸ್ಪಷ್ಟಪಡಿಸಿದರು.

### ಇಂದು ಸಿದ್ದು ದೆಹಲಿಗೆ

**ಮತಕಳ್ಳತನ ಆರೋಪ ವಿರುದ್ಧ ಪ್ರತಿಭಟನೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ದೆಹಲಿಗೆ ಹೋಗುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಶನಿವಾರವೇ ದೆಹಲಿಗೆ ತೆರಳಿದರು. ಅಲ್ಲದೆ, ಡಿಕೆಶಿ ಬೆಂಬಲಿಗ 30ಕ್ಕೂ ಹೆಚ್ಚು ಶಾಸಕರು ಪ್ರತ್ಯೇಕವಾಗಿ ದೆಹಲಿಗೆ ತೆರಳಲಿದ್ದಾರೆ ಎನ್ನಲಾಗಿದೆ.**



### ಲಾರಿ ಡಿಕ್ಕಿ: ಚೆಕ್ಕಿಂಗ್ ಇನ್ಸ್ಪೆಕ್ಟರ್ ಸಾವು

**ಹಾಸನ:** ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ರಸ್ತೆ ದಾಟುವಾಗ ಲಾರಿ ಡಿಕ್ಕಿಯಾಗಿ ಕೆಎಸ್ಆರ್‌ಟಿಸಿ ಬಸ್ ಚೆಕ್ಕಿಂಗ್ ಇನ್ಸ್ಪೆಕ್ಟರ್ ಮೃತಪಟ್ಟಿರುವ ಘಟನೆ ಆಲೂರು ತಾಲೂಕಿನ ಪಾಳ್ಯ ಬಳಿ ನಡೆದಿದೆ.



ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಕ್ಯಾಂಟರ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಕರ್ತವ್ಯದಲ್ಲಿದ್ದ ಕೆಎಸ್ಆರ್‌ಟಿಸಿ ಬಸ್ ಟಿಕೆಟ್ ತಪಾಸಣೆ ಇನ್ ಸ್ಪೆಕ್ಟರ್ ಶಕುನಿಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಶನಿವಾರ ಬೆಳಗ್ಗೆ ಘಟನೆ ನಡೆದಿದೆ.

ನಲ್ಲೂರು-ಮಗ್ಗೆ ಮಾರ್ಗದಲ್ಲಿ ಸಂಚರಿಸುತ್ತಿದ್ದ ರಾಜ್ಯ ಸಾರಿಗೆ ಬಸ್ ಅನ್ನು ತಡೆದು, ಪ್ರಯಾಣಿಕರ ಟಿಕೆಟ್ ಪರಿಶೀಲನೆ ನಡೆಸುವ ಉದ್ದೇಶದಿಂದ ಶಕುನಿಗೌಡ ರಸ್ತೆ ದಾಟುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ವೇಗವಾಗಿ ಬಂದ ಲಾರಿ ಅವರಿಗೆ ಡಿಕ್ಕಿ ಹೊಡೆದು ನಿಲ್ಲಿಸದೆ ಪರಾರಿಯಾಗಿದೆ. ಗಂಭೀರವಾಗಿ ಗಾಯಗೊಂಡಿದ್ದ ಶಕುನಿಗೌಡ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಆಲೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

### ದೆಹಲಿಯಲ್ಲಿ 'ವೋಟ್ ಚೋರಿ' ಪ್ರತಿಭಟನೆ ಇಂದು: ಡಿಕೆಶಿ ಭಾಗಿ

ಬೆಂಗಳೂರು: ಭಾನುವಾರ ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ನಡೆಯಲಿರುವ ಚುನಾವಣಾ ಆಯೋಗ ವಿರುದ್ಧ ಮತಗಳ್ಳತನ ಪ್ರತಿಭಟನೆಯಲ್ಲಿ ಭಾಗವಹಿಸಲು ಇಂದು ದೆಹಲಿಗೆ ಹೋಗುತ್ತಿದ್ದೇನೆ. ಭಾನುವಾರ ಮುಖ್ಯಮಂತ್ರಿಗಳು ಬಂದು ಭಾಗಿಯಾಗುತ್ತಾರೆ ಎಂದು ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ತಿಳಿಸಿದ್ದಾರೆ.

ಶನಿವಾರ ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, "ನಾವೆಲ್ಲರೂ 'ವೋಟ್ ಚೋರಿ' ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇವೆ. ನಮ್ಮಲ್ಲಿಂದ 100ಕ್ಕೂ ಹೆಚ್ಚು ಶಾಸಕರು, ಬ್ಲಾಕ್ ಅಧ್ಯಕ್ಷರು, ಕಾರ್ಯಕರ್ತರು ಹಾಜರಾಗುವಂತೆ ನಾವು ಕೇಳಿಕೊಂಡಿದ್ದೇವೆ, ಇದು ರಾಷ್ಟ್ರವ್ಯಾಪಿ ಪ್ರತಿಭಟನೆಯಾಗಿರುತ್ತದೆ ಎಂದರು.

ಕರ್ನಾಟಕದಲ್ಲಿ ಮೊದಲು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಿಂದ ಈ ಮಹಾನ್ ಚಳವಳಿ ಪ್ರಾರಂಭವಾಯಿತು. ನಾವು ಮತದಾನದ ಹಕ್ಕಿಗಾಗಿ ಹೋರಾಡುತ್ತೇವೆ. ಕಾಂಗ್ರೆಸ್ ಪಕ್ಷವು ಯಾವಾಗಲೂ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಪರವಾಗಿ ನಿಂತಿದೆ. ಇಲ್ಲಿ ಪ್ರತಿಯೊಬ್ಬ ನಾಗರಿಕನ ಮತವು ಮುಖ್ಯವಾಗಿದೆ, ಆದ್ದರಿಂದ ಮತದಾರರ ಮತರಕ್ಷಣೆಗಾಗಿ ನಮ್ಮ ಹೋರಾಟವಾಗಿದೆ ಎಂದರು.

# ಆಹಾ... ಆಹಾ... ಅವರೇ ಕಾಯಿ!

*** ಸವಿಯ ಬನ್ನಿ ಅವರೆಕಾಳಿನ ತರಾವರಿ ತಿಂಡಿ ತಿನಿಸು**



**ಮೈಸೂರು:** ಅವರೆಕಾಳು ಉಪ್ಪಿಟ್ಟು, ಅವರೆಕಾಳು ದೋಸೆ, ಮುದ್ದೆ, ಹಿಚುಕು ಅವರೆಕಾಳು ಸಾರು, ಅವರೆಕಾಳು ಬಾತ್, ಅವರೆಕಾಳಿನ ಜಾಮೂನು ಬಾಯಿ ಚಪ್ಪರಿಸಲು ಸಿಗುತ್ತಿವೆ. ಉತ್ತರ ಕರ್ನಾಟಕದ ಜೋಳದ ರೊಟ್ಟಿ, ಕಾಳು ಪಲ್ಯದ ಅಡುಗೆಗಳನ್ನು ಕೂಡ ಸಹಜ ಸಮೃದ್ಧ ಮೇಳದಲ್ಲಿ ಸವಿಯಬಹುದು.

ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿರುವ ಅವರೆಕಾಯಿ ಮೇಳವನ್ನು ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಉಪ ಪ್ರಾಚಾರ್ಯ ಡಾ. ಶಿವಪ್ರಸಾದ್ ಹುಡೇದ್ ಉದ್ಘಾಟಿಸಿರು. ಎರಡು ದಿನಗಳ ಕಾಲ ನಡೆಯುವ ಮೇಳಾದಲ್ಲಿ ಅವರೆಕಾಯಿ, ತೊಗರಿಕಾಯಿ, ಹಸಿ ಕಡಲೆಕಾಯಿ, ಸುವರ್ಣಗೆಡ್ಡೆ, ಕೆಂಪು ಮುಸುಕಿನ ಜೋಳ, ಬಳ್ಳಿ ಆಲೂಗೆಡ್ಡೆ ಮೊದಲಾದ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ತಾಲೂಕು, ತುಮಕೂರು, ಧಾರವಾಡ, ಬೆಂಗಳೂರು ಜಿಲ್ಲೆಗಳಿಂದ ಕರಕುಶಲ ವಸ್ತುಗಳ ಪ್ರದರ್ಶನವಿದೆ. ದೇವಧಾನ್ಯ ರೈತ ಉತ್ಪಾದಕರ ಕಂಪನಿಯು ಸಿರಿಧಾನ್ಯ, ಜವಾರಿ ಬೇಳೆ ಕಾಳುಗಳು ಹಾಗೂ ಕೆಂಪಕ್ಕಿ, ಉದುರು

ಪುಟ 2ಕ್ಕೆ

# ಪರಮೇಶ್ವರ್ ರಾಜ್ಯದ ಸಿಎಂ ಆಗಲಿ

## ಹಣೆಬರಹ ಯಾರಿಗೆ ಗೊತ್ತು? | ಕೇಂದ್ರ ಸಚಿವ ವಿ.ಸೋಮಣ್ಣ ಆಶಯ

**ತುಮಕೂರು:** ಗೃಹ ಸಚಿವ ಜಿ.ಪರಮೇಶ್ವರ್ ರಾಜ್ಯದ ಮುಖ್ಯಮಂತ್ರಿ ಆಗಲಿ ಅನ್ನುವುದು ನನ್ನ ವೈಯಕ್ತಿಕ ಆಸೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಅಭಿಪ್ರಾಯಪಟ್ಟಿದ್ದಾರೆ.

ನಗರದ ಹೆಗ್ಗೆರೆಯಲ್ಲಿ ರೇಲ್ವೆ ಮೇಲ್ಸೆತುವೆ ಕಾಮಗಾರಿಗೆ ಗುದ್ದಲಿ ಪೂಜೆ ಬಳಿಕ ವೇದಿಕೆ ಭಾಷಣ ವೇಳೆ ಕೇಂದ್ರ ಸಚಿವ ವಿ.ಸೋಮಣ್ಣ ತಮ್ಮ ಇಂಗಿತ ಹೊರಹಾಕಿದರು. ಪರಮೇಶ್ವರ್ ಅದೃಷ್ಟದ ಗೃಹ ಮಂತ್ರಿ. ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಲಿ ಅನ್ನೋ ಆಸೆ ಇದೆ. ಇದನ್ನು ನಾನೊಬ್ಬನೇ ಹೇಳುತ್ತಿಲ್ಲ ಎಂದು ತಿಳಿಸಿದರು.

ಈ ವೇಳೆ ಮಧ್ಯಪ್ರವೇಶ ಮಾಡಿದ ಶಾಸಕ ಸುರೇಶ್ ಗೌಡ, ಡಿಕೆಶಿ ಕೂಡಾ ಇದ್ದಾರೆ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಸೋಮಣ್ಣ ಹಣೆಬರಹ ಯಾರಿಗೆ ಗೊತ್ತು? ಹಣೆ ಬರಹದಂತೆ ಆಗಲಿ ಎಂದರು.

ಬೆಂಗಳೂರು- ತುಮಕೂರು ಮೆಟ್ರೊ ಯೋಜನೆಗೆ ಕಾಂಗ್ರೆಸ್ ನಾಯಕರು ವಿರೋಧ ಮಾಡುತಿದ್ದಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಟೀಕಿಸಿದರು.

ನಗರದ ಪಂಡಿತನಹಳ್ಳಿಯಲ್ಲಿ ರೇಲ್ವೆ ಮೇಲ್ಸೆತುವೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿ ಮಾತನಾಡಿದ

ಪುಟ 2ಕ್ಕೆ



### ನನ್ನ ಗೆಲುವಿಗೆ ಕಾಂಗ್ರೆಸ್ ನಾಯಕರ ಸಹಕಾರವೂ ಇತ್ತು!

**ತುಮಕೂರು: ಕಳೆದ ಲೋಕಸಭೆ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ನನ್ನ ಗೆಲುವಿಗೆ ಕಾಂಗ್ರೆಸ್ ನಾಯಕರೂ ಸಹಕರಿಸಿದ್ದಾರೆ ಎಂಬ ಸ್ಫೋಟಕ ಮಾಹಿತಿಯನ್ನು ಕೇಂದ್ರ ಸಚಿವ ವಿ. ಸೋಮಣ್ಣ ಹಂಚಿಕೊಂಡಿದ್ದಾರೆ. ನಗರದಲ್ಲಿ ಶನಿವಾರ ಮಾತನಾಡಿದ ಅವರು,**

ಪುಟ 2ಕ್ಕೆ


### ಗಿಳಿ ರಕ್ಷಿಸಲು ಪ್ರಾಣ ಕಳೆದುಕೊಂಡ ಯುವಕ

ಬೆಂಗಳೂರು: ಹೈಟೆನ್ಷನ್ ವಿದ್ಯುತ್ ಮಾರ್ಗದ ಕಂಬದ ಮೇಲೆ ಕುಳಿತಿದ್ದ ಗಿಳಿಯನ್ನು ರಕ್ಷಿಸಲು ಯತ್ನಿಸಿದ ಯುವಕ ವಿದ್ಯುತ್ ಆಘಾತದಿಂದ ಮೃತಪಟ್ಟಿದ್ದಾನೆ.

ನಾಗಮಂಗಲದ ಅರುಣ್ ಕುಮಾರ್ (32) ಮೃತರು. ಅರುಣ್ ಕುಮಾರ್ ಅವರ ಸಂಬಂಧಿ ಲಿಖಿತಾ ಎಂಬುವರು ಸುಮಾರು 2 ಲಕ್ಷ ರೂ. ಬೆಲೆ ಬಾಳುವ ವಿದೇಶಿ ತಳಿಯ ಗಿಳಿಯೊಂದನ್ನು ಸಾಕಿದ್ದಾರೆ. ಆ ಗಿಳಿ ಶುಕ್ರವಾರ ಹೈಟೆನ್ಷನ್ ವಿದ್ಯುತ್ ಮಾರ್ಗದ ಕಂಬದ ಮೇಲೆ ಕುಳಿತಿತ್ತು. ವಿದ್ಯುತ್ ತಗುಲಿ ಗಿಳಿ ಮೃತಪಡಬಹುದು ಎಂಬ ಆತಂಕದಿಂದ ಅದರ ರಕ್ಷಣೆಗೆ ಅರುಣ್ ಕುಮಾರ್ ಮುಂದಾದರು. ಆ ವೇಳೆ ವಿದ್ಯುತ್ ತಾಗಿ ಮೃತಪಟ್ಟರು. ಗಿಳಿ ಅಪಾಯದಿಂದ ಪಾರಾಗಿದೆ.

### ಹಿಟ್ ಅಂಡ್ ರನ್‌ಗೆ ಇಬ್ಬರು ಮಹಿಳೆಯರು ಬಲಿ

**ಬೆಂಗಳೂರು:** ಹೊಸಕೆರೆಹಳ್ಳಿ ಬಳಿ ನೈಸ್ ರಸ್ತೆಯಲ್ಲಿ ಹಿಟ್ ಅಂಡ್ ರನ್‌ಗೆ ಇಬ್ಬರು ಮಹಿಳಾ ಕಾರ್ಮಿಕರು ಬಲಿಯಾಗಿದ್ದಾರೆ.



ಯಾದಗಿರಿಯ ರಂಗಮ್ಮ (45) ಹಾಗೂ ಚೌಡಮ್ಮ (55) ಮೃತ ಕಾರ್ಮಿಕರು. ಇಬ್ಬರು ಕಾರ್ಮಿಕರು ದಿನಗೂಲಿ ಕೆಲಸ ಮಾಡಿಕೊಂಡಿದ್ದರು.

ನೈಸ್ ರಸ್ತೆಯ ಪಕ್ಕದಲ್ಲಿರುವ ಹುಲ್ಲು ತೆರವು ಮಾಡುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಇಬ್ಬರನ್ನು ಗುದ್ದಿಕೊಂಡು ಹೋಗಿದೆ. ಕಾರು ಗುದ್ದಿದ ರಭಸಕ್ಕೆ ಇಬ್ಬರು ಹಾರಿ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಘಟನೆ ಬಳಿಕ ಕಾರು ನಿಲ್ಲಿಸದೆ ಚಾಲಕ ಪರಾರಿಯಾಗಿದ್ದಾನೆ. ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

### 16ರಂದು ಮಳವಳ್ಳಿಗೆ ರಾಷ್ಟ್ರಪತಿ ಮುರ್ಮು ಭೇಟಿ

**ಮೈಸೂರು:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿಸೆಂಬರ್ 16ರಂದು ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಡೆಯಲಿರುವ ಆದಿಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿಯಲ್ಲಿ ಭಾಗವಹಿಸಲಿದ್ದಾರೆ. ಪಟ್ಟಣದಲ್ಲಿ ಈ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗುತ್ತಿದೆ.



ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಡಿ.16ರಿಂದ 21ರವರೆಗೆ ಆದಿಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿ ಮಹೋತ್ಸವವನ್ನು ಆಯೋಜಿಸಲಾಗಿದೆ.

ಮಳವಳ್ಳಿಯ ಮುನ್ಸಿಪಲ್ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಡಿ.16ರಂದು ಮಧ್ಯಾಹ್ನ 2.10ಕ್ಕೆ ಮೈಸೂರಿನ ಏರ್ ಪೋರ್ಟ್‌ಗೆ ಆಗಮಿಸಲಿರುವ ದ್ರೌಪದಿ ಮುರ್ಮು ಅವರು, ಬಳಿಕ ಹೆಲಿಕಾಪ್ಟರ್‌ನಲ್ಲಿ ಮಳವಳ್ಳಿಗೆ ತೆರಳುವರು. ಮಳವಳ್ಳಿಯಲ್ಲಿ ನಡೆಯುವ ಸುತ್ತೂರು ಮಠದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅಂದು ಸಂಜೆ 5.25ಕ್ಕೆ ಮಳವಳ್ಳಿಯಿಂದ ಮೈಸೂರಿಗೆ ಹಿಂದಿರುಗುವ ರಾಷ್ಟ್ರಪತಿ, ಡಿ.16ರಂದು ರಾತ್ರಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಡಿ.17ರ ಬೆಳಗ್ಗೆ 9.25ಕ್ಕೆ ಮೈಸೂರಿನಿಂದ ತಿರುಪತಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ತೆರಳುತ್ತಾರೆ.

### ಮತಗಳ್ಳತನ: ಗುತ್ತೇದಾರ್ ವಿರುದ್ಧ ಸೂಕ್ತ ಕ್ರಮ-ಡಿಕೆಶಿ

**ಬೆಂಗಳೂರು:** ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತಗಳ್ಳತನ ನಡೆದಿರುವುದು ಸತ್ಯ. ಹೀಗಾಗಿ ಬಿಜೆಪಿ ಮಾಜಿ ಶಾಸಕ ಗುತ್ತೇದಾರ್ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಆಳಂದ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ ಸುಭಾಷ್ ಗುತ್ತೇದಾರ್ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಿರುವ ಪ್ರಶ್ನೆಗೆ, ಈ ಪ್ರಕರಣದಲ್ಲಿ ಯಾವುದೇ ಮುಚ್ಚುಮರೆಯಿಲ್ಲ. ಅಕ್ರಮ ನಡೆದಿರುವುದು ಸತ್ಯ. ಗಂಭೀರವಾದ ತನಿಖೆ ನಡೆಸಿದೆ. ಇದು ಕೇವಲ ಕರ್ನಾಟಕದ ದನಿಯಲ್ಲ. ಇಡೀ ಭಾರತದ ದನಿ. ರಾಹುಲ್ ಗಾಂಧಿ ಅವರ ಸಲಹೆಯಂತೆ ಲೀಗಲ್ ಬ್ಯಾಂಕ್ ಅನ್ನು ಪ್ರತಿ ಕ್ಷೇತ್ರದಲ್ಲೂ ಪ್ರಾರಂಭ ಮಾಡಬೇಕು. ಈ ವಿಚಾರದ ಬಗ್ಗೆ ನಾವು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಪುಟ 2ಕ್ಕೆ

# ಆಕ್ಷೇಪ ಸಲ್ಲಿಸದಿದ್ದರೆ ಬಿಪಿಎಲ್ ರದ್ದು


## ನಿಮ್ಮ ಅರ್ಹತೆ ಸಾಬೀತುಪಡಿಸಲು ಎರಡು ದಿನವಷ್ಟೇ ಬಾಕಿ

**ಬೆಂಗಳೂರು:** ಬಿಪಿಎಲ್ ಕಾರ್ಡ್ ಪರಿಷ್ಕರಣೆಗೆ ಆಕ್ಷೇಪ ಸಲ್ಲಿಸಲು ಇನ್ನು ಎರಡು ದಿನ ಮಾತ್ರ ಅವಕಾಶ ಇದೆ. ಬಿಪಿಎಲ್ ಪಡೆಯಲು ಅರ್ಹರು ಎಂದು ಕಾರ್ಡ್ದಾರರು ಸಾಬೀತು ಮಾಡಿಕೊಳ್ಳದಿದ್ದರೆ ಕಾರ್ಡ್ ಎಪಿಎಲ್‌ಗೆ ಬದಲಾಗಲಿದೆ.

ಬಿಪಿಎಲ್‌ನಿಂದ ಎಪಿಎಲ್‌ಗೆ ಶಿಫ್ಟ್ ಆಗಿರುವ ಸಾವಿರಾರು ಕಾರ್ಡ್ದಾರರು ಆಕ್ಷೇಪಣೆಗೆ ದಾಖಲಾತಿ ಸಲ್ಲಿಸುತ್ತಿದ್ದಾರೆ. ನಾವು ಯಾವುದೇ ತೆರಿಗೆ ಪಾವತಿಸುತ್ತಿಲ್ಲ. ಜಮೀನು ಇಲ್ಲ. ಸ್ವಂತ ಮನೆಯೂ ಇಲ್ಲ. ಆದರೂ ಕಾರ್ಡ್ ಡಿಲೀಟ್ ಆಗಿದೆ ಎಂದು ಬಿಪಿಎಲ್ ಕಾರ್ಡ್ದಾರರು ಆಕ್ರೋಶ ಹೊರಹಾಕಿದ್ದಾರೆ. ಸರ್ಕಾರ ದಾಖಲಾತಿ ಸಲ್ಲಿಸಿ ನಾವು ಬಿಪಿಎಲ್ ಮಾನದಂಡದ ಒಳಗಡೆ ಇದ್ದೇವೆ ಎಂದು ದೃಢಪಡಿಸಲು 45 ದಿನಗಳ ಕಾಲಾವಕಾಶ ನೀಡಿತ್ತು. ಕಳೆದ ಅಕ್ಟೋಬರ್ 30ರಿಂದ ಪರಿಷ್ಕರಣೆ ಕೆಲಸ ಆರಂಭಿಸಿತ್ತು.

ಗಡುವಿನ ಕೊನೆಯ ದಿನ ಹತ್ತಿರ ಬರುತ್ತಿದ್ದಂತೆ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಡ್ದಾರರು ಪರಿಷ್ಕರಣೆ ಮಾಡಲು ನ್ಯಾಯಬೆಲೆ ಅಂಗಡಿಯತ್ತ ಬರುತ್ತಿದ್ದಾರೆ.

ಪುಟ 2ಕ್ಕೆ



### ಯಾರ ಕಾರ್ಡ್ ರದ್ದಾಗಿದೆ

**ಕುಟುಂಬದ ವಾರ್ಷಿಕ ಆದಾಯ 1.20 ಲಕ್ಷ ರೂ. ಮೀರಿದವರು, ಆದಾಯ ತೆರಿಗೆ ಪಾವತಿ ಮಾಡಿದ್ದರೆ, ನಿಗದಿಗಿಂತ ಹೆಚ್ಚು ಜಮೀನು ಹೊಂದಿದ್ದರೆ, ನಗರಗಳಲ್ಲಿ 1000 ಚದರಡಿಗಿಂತ ಹೆಚ್ಚಿನ ಪಕ್ಕಾ ಮನೆ ಇದ್ದಲ್ಲಿ, ವೈಟ್ ಬೋರ್ಡ್ 4 ಚಕ್ರದ ವಾಹನ ಇದ್ದರೂ ಬಿಪಿಎಲ್ ಕಾರ್ಡ್ ಮಾಡಿಸಿದವರ ಕಾರ್ಡ್ ರದ್ದಾಗಲಿದೆ.**

ಪುಟ 2ಕ್ಕೆ

# ಟ್ರಾಮಾ ಕೇರ್ ಸೆಂಟರ್‌ಗೆ ಜಾಗ ನೀಡಲು ಸಿದ್ಧ

## ಸಂಸದರು ಈಗ ಜಾಗ ಕೇಳಲಿ | ಎಚ್‌ಡಿಕೆಗೆ ಶಾಸಕ ಗಣಿಗ ತಿರುಗೇಟು

**ಬೆಂಗಳೂರು:** ಮಂಡ್ಯದಲ್ಲಿ ಟ್ರಾಮಾ ಕೇರ್ ಸೆಂಟರ್‌ಗೆ ಜಾಗ ಕೊಡಲು ನಾವು ಸಿದ್ಧರಿದ್ದೇವೆ ಎಂದು ಶಾಸಕ ಪಿ.ರವಿಕುಮಾರ್ ಗಣಿಗ ಪರೋಕ್ಷವಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಟಾಂಗ್ ನೀಡಿದರು.

ಟ್ರಾಮಾ ಕೇರ್ ಸೆಂಟರ್ ಸ್ಥಾಪನೆಗೆ ಜಾಗ ಕೊಡುವಂತೆ ಜಿಲ್ಲಾಧಿಕಾರಿಗೆ ಎಚ್.ಡಿ. ಕುಮಾರಸ್ವಾಮಿ ಪತ್ರ ಬರೆದಿದ್ದಾರೆ. ಈಗ ಮಂಡ್ಯದಲ್ಲೇ ಟ್ರಾಮಾ ಕೇರ್ ಸೆಂಟರ್ ಮಾಡಲು ಸಂಸದರು ಜಾಗ ಕೇಳಿದರೆ ಕೊಡಲು ತಯಾರಿದ್ದೇವೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಮೂಲತಃ ಮಂಡ್ಯಕ್ಕೆ ಲೆವೆಲ್-2 ಟ್ರಾಮಾ ಸೆಂಟರ್ ಮಂಜೂರು ಮಾಡಿತ್ತು. ಆದರೆ ಭೂಮಿ ಲಭ್ಯವಿಲ್ಲದ ಕಾರಣ ಅವರು ಅದನ್ನು ಸುಮಾರು 35-40 ಕಿ.ಮೀ ದೂರದಲ್ಲಿರುವ ಮೈಸೂರಿಗೆ ಸ್ಥಳಾಂತರಿಸಲಾಗಿದೆ. ಈ ನಿರ್ಧಾರದಿಂದಾಗಿ ಹೆಚ್ಚು ಜೀವಗಳನ್ನು ಬಲಿಯಾಗುತ್ತಿವೆ ಎಂದು ರವಿಕುಮಾರ್ ಟೀಕಿಸಿದ್ದಾರೆ.



ಎಕ್ಸ್ ಪ್ರೆಸ್ ಹೆದ್ದಾರಿಯು ಕರ್ನಾಟಕದ ಬೇರೆ ಎಲ್ಲಾ ರಸ್ತೆಗಿಂತ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದೆ. ಹೀಗಾಗಿ ಸುವರ್ಣ ಸಮಯ ಕಳೆದುಹೋಗುತ್ತಿದೆ. ಇದರಿಂದ ರೋಗಿಗಳನ್ನು ಮೈಸೂರು ಅಥವಾ ಬೆಂಗಳೂರಿಗೆ ಕರೆದೊಯ್ಯಲಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಎಕ್ಸ್ ಪ್ರೆಸ್ ವೇ ಆದ ಮೊದಲ ವರ್ಷದಲ್ಲಿ 550 ಅಪಘಾತಗಳು ಸಂಭವಿಸಿವೆ. ಅವುಗಳಲ್ಲಿ 188 ಮಾರಕವಾಗಿವೆ. ಮೊದಲ ಆರು ತಿಂಗಳಲ್ಲಿ 132 ಸಾವುಗಳು ಸಂಭವಿಸಿವೆ. ಅಪಘಾತಗಳು ಶೇ.60 ರಷ್ಟು ಕಡಿಮೆಯಾಗಿ 50ಕ್ಕಿಂತ ಕಡಿಮೆ ಸಾವುಗಳು ಸಂಭವಿಸಿವೆ. 2025ರಲ್ಲಿ ಇಲ್ಲಿಯವರೆಗೆ, ಕ್ಯಾಮೆರಾಗಳು ಮತ್ತು ಸುಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಗಳಿಂದಾಗಿ ಯಾವುದೇ ಸಾವುನೋವುಗಳು ಸಂಭವಿಸಿಲ್ಲ. ಆದರೆ ಗಂಭೀರವಾಗಿ ಗಾಯಗೊಂಡವರು ಇನ್ನೂ ರಸ್ತೆಯಲ್ಲೇ ಸಾವನ್ನಪ್ಪುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 2023ರ ಮೊದಲಾರ್ಧದಲ್ಲಿ 65 ಸಾವುಗಳು ಸಂಭವಿಸಿವೆ. ಇಂದಿಗೂ, ಅಪಘಾತದಲ್ಲಿ ಗಾಯಗೊಂಡವರು ಮೈಸೂರಿಗೆ ಪ್ರಯಾಣಿಸುವ ವೇಳೆ ಸುವರ್ಣ ಸಮಯವನ್ನು ಕಳೆದುಕೊಳ್ಳುತ್ತಾರೆ ಎಂದು ಅವರು ಹೇಳಿದರು.

ರಾಜ್ಯವು ಭೂಮಿ ನೀಡುವವರೆಗೆ ಕೇಂದ್ರ ಸರ್ಕಾರ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದರು. ಅದಕ್ಕೆ

ಪುಟ 2ಕ್ಕೆ

## ಮೊದಲ ಪುಟದಿಂದ

### ಜ.6ಕ್ಕೆ ಡಿಕೆಶಿಗೆ 'ಪಟ್ಟಾಭಿಷೇಕ'

ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ಯಾರು ಏನೇ ಹೇಳಿಕೊಳ್ಳಲಿ. ರಾಜ್ಯದ ಜನ ಹಾಗೂ ಈ ಭಾಗದ ಶಾಸಕರು ಡಿಕೆಶಿಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಡಿ.ಕೆ ಶಿವಕುಮಾರ್ ಸಿಎಂ ಆಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

### ಅವನಿಗೆ ಮಾತಾಡುವ ಚಟ!

ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿ ನಮ್ಮಲ್ಲಿ ಯಾವುದೇ ಭಿನ್ನಮತವಿಲ್ಲ. ನಾವು ಸಹೋದರರಿದ್ದಂತೆ ಎಂದು ಹೇಳಿದ್ದರೂ ಕಾಂಗ್ರೆಸ್ ನಲ್ಲಿ ಕುರ್ಚಿ ಕದನ ವಿರಾಮ ಮಾತ್ರ ಮೇಲಿಂದ ಮೇಲೆ ಉಲ್ಲಂಘನೆ ಆಗುತ್ತಲೇ ಇದೆ.

### ನಾಯಕರ ಸಹಕಾರವೂ ಇತ್ತು!

ಬಿಜೆಪಿ– ಜೆಡಿಎಸ್ ನಾಯಕರು ನನ್ನ ಗೆಲುವಿಗೆ ಎಷ್ಟು ಸಹಕರಿಸಿದ್ದಾರೋ ಹಾಗೆಯೇ ಕಾಂಗ್ರೆಸ್‌ನ ಬಹುಕಾಲದ ಗೆಳೆಯರು, ನಾಯಕರು ಸಾಥ್ ನೀಡಿದ್ದಾರೆ ಎಂದು ಹೇಳಿದರು. ಈ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಮುದ್ದಹನುಮೇಗೌಡ ಅವರ ಸೋಲಿಗೆ ಪರೋಕ್ಷವಾಗಿ ಕಾಂಗ್ರೆಸ್ ನಾಯಕರೇ ಕಾರಣ ಅನ್ನೋದನ್ನ ಜಿ.ಪರಮೇಶ್ವರ್ ಇರುವ ವೇದಿಕೆಯಲ್ಲೇ ಸೋಮಣ್ಣ ಬಹಿರಂಗಪಡಿಸಿದರು.

### ಪರಮೇಶ್ವರ್ ರಾಜ್ಯದ ಸಿಎಂ ಆಗಲಿ

ಅವರು, ನಿನ್ನೆ ಒಬ್ಬ ಕಾಂಗ್ರೆಸ್ ನಾಯಕರು ನನ್ನ ಬಳಿ ಬಂದು ತುಮಕೂರು ಮೆಟ್ರೋಗೆ ವಿರೋಧ ವ್ಯಕ್ತಪಡಿಸಿದರು. ಪರಮೇಶ್ವರ್ ಯಾಕೆ ತುಮಕೂರಿಗೆ ಮೆಟ್ರೋ ತೆಗೆದುಕೊಂಡು ಹೋಗುತ್ತಾರೆ ಎಂದು ಕೇಳಿದರು. ಅದಕ್ಕೆ ನಾನು ಇಲ್ಲ ಇಲ್ಲ. ಪರಮೇಶ್ವರ್ ಒಳ್ಳೆ ಕೆಲಸ ಮಾಡುತಿದ್ದಾರೆ. ನಾನು ಅದಕ್ಕೆ ಸಹಕಾರ ಕೊಡುತ್ತೇನೆ ಎಂದು ಹೇಳಿದ್ದೇನೆ. ಅದಕ್ಕೆ ಕಾಂಗ್ರೆಸ್ ನಾಯಕ ಸುಮ್ಮನಾದರು ಎಂದರು.

### ಬೈಕ್‌ಗಳ ಡಿಕ್ಕಿ: ಮೂವರು ಸಾವು

ನಾಗೇಂದ್ರ, ಲೋಕೇಶ್ ಮತ್ತು ಗಣೇಶ್ ಪ್ರಯಾಣಿಸುತ್ತಿದ್ದ ಬೈಕ್ ಗೆ ಡಿಕ್ಕಿ ಹೊಡೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

### ಆಹಾ... ಆಹಾ... ಅವರೇ ಕಾಯಿ!

ಸಾಳಿ ಮೊದಲಾದ ದೇಸಿ ಅಕ್ಕಿಗಳನ್ನು ಕೂಡ ಮಾರಾಟಕ್ಕೆ ತಂದಿದೆ. ಪ್ರದರ್ಶನಕ್ಕೆ ಬಂದಿರುವ ವಿವಿಧ ಗಾತ್ರ ಮತ್ತು ಆಕಾರದ ವೈವಿಧ್ಯಮಯ ಸೋರೆಗಳು ನೋಡುಗರನ್ನು ಆಕರ್ಷಿಸುತ್ತಿವೆ.

ಕ್ರಿಸ್‌ಮಸ್ ಹಬ್ಬಕ್ಕೆ ಆಕರ್ಷಕ ಬೊಂಬೆಗಳು ಹಾಗೂ ವೈವಿಧ್ಯಮಯ ಸೋರೆ ಕಲಾಕೃತಿಗಳನ್ನು ಮಾರಾಟಮಾಡಲಾಗುತ್ತಿದೆ. ಧಾರವಾಡದ ಮಹಿಳಾ ಸ್ವಸಹಾಯ ಸಂಘ ವತಿಯಿಂದ ಬ್ಯಾಡಗಿ ಮೆಣಸಿನ ಕಾಯಿಯ ಕಾರದಪುಡಿ, ಮಸಾಲ ಪುಡಿ ಮಾರಾಟ, ನಿರ್ಲಕ್ಷಿತ ಹಣ್ಣಿನ ಬೇಲದ ಜ್ಯೂಸ್, ಹುಣಸೇ ಜ್ಯೂಸ್ ಲಭ್ಯವಿದೆ. ಚಳಿಗಾಲದ ತರಕಾರಿ ಬೀಜ, ಬಳ್ಳಿ ಆಲೂಗಡ್ಡೆ, ಪರ್ಪಲ್ ಯಾಮ್, ಬಿಳಿ ಕಾಚಲ್ , ಬಿತ್ತನೆಯ ಬೇಸಿಗೆ ಭತ್ತ ಮತ್ತು ರಾಗಿಯನ್ನು ಮಾರಾಟಕ್ಕೆ ಇಡಲಾಗಿದೆ. ಹೆಚ್.ಡಿ ಕೋಟೆಯ ನಾಡ ತೊಗರಿ, ಅವರೆ, ಗೆಡ್ಡೆ ಗೆಣಸು, ರಾಗಿ ಮತ್ತು ದಿನ ಬಳಕೆಯ ಅಕ್ಕಿಯನ್ನು ಮೇಳದಲ್ಲಿ ಇಡಲಾಗಿದೆ. ಸಿರಿಧಾನ್ಯ ಮತ್ತು ಸಾವಯವ ಪದಾರ್ಥ, ಮೌಲ್ಯವರ್ಧಿತ ಉತ್ಪನ್ನ, ಶೃಂಗಾರ ವರ್ಧಕಗಳು, ಕೋತಿ ಓಡಿಸುವ ಬಂದೂಕು, ಬಿದಿರಿನ ಉತ್ಪನ್ನಗಳು ಮತ್ತು ದೇಸಿ ಅಕ್ಕಿಗಳು ಇವೆಲ್ಲವೂ ಮೇಳದಲ್ಲಿ ಖರೀದಿಗೆ ಸಿಗಲಿವೆ.

### ಜಾಗ ನೀಡಲು ಸಿದ್ಧ

ಪ್ರತಿಕ್ರಿಯಿಸಿರುವ ರವಿಕುಮಾರ್, ಭೂಮಿ ಸಿದ್ಧವಾಗಿದೆ. ದಯವಿಟ್ಟು ಟ್ರಾಮಾ ಕೇಂದ್ರವನ್ನು ಸ್ಥಾಪಿಸಬಹುದೇ? ಕಡತಗಳು ಟೇಬಲ್‌ನಿಂದ ಟೇಬಲ್‌ಗೆ ಚಲಿಸುವ ಸಮಯದಲ್ಲೇ ಜನರು ಸಾಯುತ್ತಿದ್ದಾರೆ ಎಂದು ಟೀಕಿಸಿದ್ದಾರೆ. ಮಿಮ್ಸ್ ಪಕ್ಕದಲ್ಲಿರುವ ತಮಿಳು ಕಾಲೋನಿ ಜಾಗ ವಿವಾದ ನ್ಯಾಯಾಲಯದಲ್ಲಿದೆ. ಡಿಎಚ್‌ಓ ಕಚೇರಿ ಆವರಣದಲ್ಲಿ ಟ್ರಾಮಾ ಕೇರ್ ಸೆಂಟರ್ ತೆರೆಯಲು ಜಾಗದ ಲಭ್ಯತೆ ಇದೆ. ಹಾಗಾಗಿ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಆವರಣದಲ್ಲಿ ಜಾಗ ನೀಡುತ್ತೇವೆ ಎಂದು ಹೇಳಿದರು.

### ಯಾರ ಕಾರ್ಡ್ ರದ್ದಾಗಿದೆ

ಬಿಪಿಎಲ್ ಕಾರ್ಡಿಗೆ ಕೆಲವೊಂದು ಷರತ್ತು ಹಾಕುವ ಮೂಲಕ 25,000 ಕೋಟಿ ರೂ. ಉಳಿತಾಯಕ್ಕೆ ಸರ್ಕಾರ ಪ್ಲ್ಯಾನ್ ಮಾಡಿದೆ.

### ಆಕ್ಷೇಪ ಸಲ್ಲಿಸದಿದ್ದರೆ ಬಿಪಿಎಲ್ ರದ್ದು

ರಾಜ್ಯಾದ್ಯಂತ ಏಳು ಲಕ್ಷಕ್ಕೂ ಹೆಚ್ಚು ಕಾರ್ಡ್ ಪರಿಷ್ಕರಣೆ ಆಗುತ್ತಿದೆ. ಡಿಲೀಟ್ ಆಗಿರುವ ಕಾರ್ಡ್ದಾರರು ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ದಾಖಲಾತಿ ನೀಡಬೇಕು. ಅವರು ದಾಖಲಾತಿ ಸಂಗ್ರಹಿಸಿ ಆಹಾರ ಇಲಾಖೆಗೆ ರವಾನೆ ಮಾಡುತ್ತಾರೆ. ಅಹಾರ ಇಲಾಖೆಗೆ ನೀಡಿರುವ ದಾಖಲೆ ಸರಿಯಿದ್ದರೆ ಮಾತ್ರ ಬಿಪಿಎಲ್ ಕಾರ್ಡ್ ಸಿಗಲಿದೆ.

ರಾಜ್ಯದಲ್ಲಿ ಬಡವರಿಗಿಂತಲೂ ಬಡತನ ರೇಖೆಗಿಂತ ಮೇಲಿದ್ದವರಿಗೆ ಹೆಚ್ಚಿನ ಪ್ರಮಾಣದ ಕಾರ್ಡ್ಗಳನ್ನು ವಿತರಿಸಲಾಗಿತ್ತು. ಅದರಲ್ಲೂ ಬಡತನ ಪ್ರಮಾಣ ಕಡಿಮೆ ಇರುವ ಜಿಲ್ಲೆಗಳಲ್ಲಿ ಅತಿ ಹೆಚ್ಚು ಬಿಪಿಎಲ್ ಕಾರ್ಡ್ ಹಂಚಿಕೆ ಆಗಿತ್ತು. ಜಿಲ್ಲಾವಾರು ಬಡವರ ಸಂಖ್ಯೆಗಿಂತಲೂ ಹತ್ತಾರು ಪಟ್ಟು ಹೆಚ್ಚು ಕಾರ್ಡ್ಗಳ ಹಂಚಿಕೆ ಆಗಿದ್ದವು. ಹೀಗಾಗಿ ಗ್ಯಾರಂಟಿ ಜಾರಿ ಮಾಡಿ ಕಂಗೆಟ್ಟಿದ್ದ ಸರ್ಕಾರ ಬಿಪಿಎಲ್ ಕಾರ್ಡ್ ಪರಿಷ್ಕರಣೆಗೆ ಮುಂದಾಗಿದೆ.

### ಮತಗಳ್ಳತನ: ಗುತ್ತೇದಾರ್ ವಿರುದ್ಧ ಸೂಕ್ತ ಕ್ರಮ–ಡಿಕೆಶಿ

ಡಿ.14ರಂದು ದೆಹಲಿಯಲ್ಲಿ ಮತದಾರರ ಹಕ್ಕಿನ ರಕ್ಷಣೆಗಾಗಿ ಮತಗಳ್ಳತನ ವಿರುದ್ಧದ ಹೋರಾಟ ಆರಂಭಿಸಿದ್ದೇವೆ. ಮತಗಳ್ಳತನ ವಿರುದ್ಧದ ಹೋರಾಟ ನಮ್ಮ ರಾಜ್ಯದಿಂದಲೇ ಆರಂಭವಾಗಿದೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಹೀಗಾಗಿ ನಮ್ಮ ನಾಯಕರಾದ ರಾಹುಲ್ ಗಾಂಧಿ ಅವರು ಈ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ ಎಂದು ಹೇಳಿದರು.

## 16ಕ್ಕೆ ಅನಂತಸ್ವಾಮಿ ಟ್ರಸ್ಟ್ ವಾರ್ಷಿಕೋತ್ಸವ



ಮೈಸೂರು: ಮಂಡಿ ಮೊಹಲ್ಲಾದ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ಡಿ.16 ಸಂಜೆ 4.30ಕ್ಕೆ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಟ್ರಸ್ಟ್ 4 ನೇ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸುದರ್ಶನ್, ವಿಕ್ರಂ ಅಯ್ಯಂಗಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯಶಸ್ವಿ ಲೋಕೇಶ್, ಲಯನ್ ಗೋಲ್ಡನ್ ಟಿ.ಸುರೇಶ್, ರಘುರಾಂ ವಾಜಪೇಯಿ ಅತಿಥಿಗಳಾಗಿರುವರು. ತಾವು ಉದ್ಘಾಟಿಸಲಿದ್ದು, ಅಧ್ಯಕ್ಷ ಎ. ಕಾಂತರಾಜು ಅಧ್ಯಕ್ಷತೆ ವಹಿಸುವರೆಂದರು. ಬಳಿಕ ಹಂಸ ಧ್ವನಿ ಭಜನಾ ಮಂಡಳಿಯ ಭುವನೇಶ್ವರಿ ಮಂಜುನಾಥ್, ವಿದುಷಿ ಡಾ.ಎಂ.ಟಿ. ಶ್ರುತಿ ರಂಜಿನಿ, ಧನುರ್ ವೀಣಾ ಪೀಠ ತಂಡದಿಂದ ಎಚ್.ಎಸ್. ತಾಂಡವಮೂರ್ತಿ ನಿರ್ದೇಶನ ದಲ್ಲಿ ಪಿಟೀಲು ವಾದನ ಮೊದಲಾದ ಕಾರ್ಯಕ್ರಮಗಳಿರಲಿವೆ. ಕರ್ನಾಟಕ ಪೊಲೀಸ್ ವಾದ್ಯವೃಂದದ ಆರ್. ದಾಸಪ್ಪ ಅವರಿಗೆ ಸನ್ಮಾನವಿದೆ ಎಂದರು. ಎ.ಕಾಂತರಾಜು, ಚಂದ್ರು, ಸುಗುಣ ಕಾಂತರಾಜು, ಚಂದ್ರು, ಮಂಜುನಾಥ್ ಇದ್ದರು.

## ಇಂದು ಮನಸ್ಸಿದ್ದರೆ ಮಾರ್ಗ ಮುಹೂರ್ತ

ಮೈಸೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಮ.ನ.ಲತಾ ಮೋಹನ್ ನಿರ್ದೇಶನದಲ್ಲಿ ಮಕ್ಕಳಿಗಾಗಿ ಮನಸ್ಸಿದ್ದರೆ ಮಾರ್ಗ ಹೆಸರಿನ ಚಲನ ಚಿತ್ರ ನಿರ್ಮಾಣವಾಗುತ್ತಿದ್ದು, ಡಿ.14 ರ ಬೆಳಗ್ಗೆ 11ಕ್ಕೆ ಶಿವರಾಂ ಪೇಟೆಯ ದಿವಾನ್ಸ್ ರಸ್ತೆಯಲ್ಲಿನ ಅಮೃತೇಶ್ವರ ದೇವಾಲಯದಲ್ಲಿ ಮುಹೂರ್ತ ಕಾರ್ಯಕ್ರಮ ನಡೆಯಲಿದೆ ಎಂದು ಸಾಹಿತಿ ಎನ್.ವಿ. ರಮೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ದೇವಸ್ಥಾನದ ಮೈಸೂರು ಕುಮಾರ್ ಗುರೂಜಿ ಸಾನ್ನಿಧ್ಯ ವಹಿಸುವರು. ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಯಶಸ್ವಿ ಎಸ್. ಸೋಮಶೇಖರ್, ನಾಗರಾಜ್ ವಿ. ಭೈರಿ ಹಾಜರಿರುವರು. ಮೈಸೂರಿನ ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ತಾಂತ್ರಿಕ ವರ್ಗ ಸಹಾ ಮೈಸೂರಿನವರೇ ಆಗಿರುವುದು ವಿಶೇಷ ಎಂದರು.

ನಿರ್ಮಾಪಕರಾದ ಮ.ನ. ಲತಾ ಮೋಹನ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಡಾ.ವಿ. ರಂಗನಾಥ್ ಇದ್ದರು.




# ಅದ್ಧೂರಿ ಹನುಮ ಜಯಂತಿ

## ಎಲ್ಲೆಡೆ ಕೇಸರಿ ಶಾಲು ಹನುಮನಿಗೆ ಜೈಕಾರ । ಹನುಮನ ಮೂರ್ತಿಗಳ ಮೆರವಣಿಗೆ



ಮೈಸೂರು: ಎಲ್ಲೆಡೆ ಕೇಸರಿ ಶಾಲು ಹನುಮನಿಗೆ ಜೈಕಾರ ಮತ್ತೊಂದೆಡೆ ಶಾಸಕರೂ ಸೇರಿ ಗಣ್ಯರ ಭರ್ಜರಿ ಕುಣಿತದೊಂದಿಗೆ ಹನುಮನ ಮೂರ್ತಿಗಳ ಮೆರವಣಿಗೆ ಅದ್ದೂರಿಯಾಗಿ ಸಾಗುವ ಮೂಲಕ ಎಲ್ಲರ ಆಕರ್ಷಿಸಿತು.

ಮೈಸೂರು ಹನುಮಂತೋತ್ಸವ ಸಮಿತಿಯಿಂದ ಆಯೋಜಿಸಿದ್ದ ಹನುಮ ಜಯಂತಿ 7ನೇ ವರ್ಷದ ಜಯಂತಿ ಅಂಗವಾಗಿ ಆಯೋಜಿಸಿದ್ದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡ ಪೂಜೆ ಸಲ್ಲಿಸಿ ಹಾಗೂ ನಂದಿ ಧ್ವಜ ಕಂಬಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಬಳಿಕ ಭಕ್ತರೊಡನೇ ತಾವು ಸಹ ಕುಣಿದು ಹೆಜ್ಜೆಹಾಕಿ ಸಂಭ್ರಮಿಸಿದರು. ಬಳಿಕ ಮಾದ್ಯಮಗಳೊಂದಿಗೆ ಮಾತನಾಡಿ, ಸಾಂಸ್ಕೃತಿಕ ನಗರಿಯಲ್ಲಿ ಸಂಜಯ್ ತಂಡ ಅದ್ದೂರಿ, ಭಕ್ತಿ ಹಾಗೂ ವಿಶೇಷವಾಗಿ ಹನುಮನ ಉತ್ಸವವನ್ನು ಆಚರಿಸುತ್ತಿದ್ದಾರೆ. ಶ್ರೀರಾಮನ ಭಕ್ತ ಆಂಜನೇಯನಾಗಿದ್ದು, ರಾಮನ ಪಟ್ಟಾಭಿಷೇಕ ಮಾಡಲು ತನ್ನ ಶಕ್ತಿಯನ್ನು ತೋರಿದ್ದಾನೆಂಬುದು ಜಗತ್ತಿಗೆ ಗೊತ್ತಿದೆ. ಅಂತಹ ಆಂಜನೇಯನ ಜಯಂತೋತ್ಸವ ನಡೆಯುತ್ತಿರುವುದು ಸಂತಸದ ಸಂಗತಿ ಎಂದರು.



> ಆಳಂದ ಮತಗಳ್ಳತನ ವಿಚಾರವಾಗಿ ಪ್ರತಿಕ್ರಿಯಿಸಿ, ಒಂದು ಗಾದೆ ಇದೆ ಹುಚ್ಚು ಬಿಡೋ ತನಕ ಮದುವೆ ಆಗಲ್ಲ, ಮದುವೆ ಆಗೋ ತನಕ ಹುಚ್ಚು ಬಿಡಲ್ಲ ಅಂತ. ಇದೇ ರೀತಿ ರಾಹುಲ್ ಗಾಂಧಿ ಪ್ರಧಾನಿ ಆಗೋವರೆಗೂ ಇಂಥ ಹುಚ್ಚು ಬಿಡಲ್ಲ.
>
> ▸▸ **ಪ್ರತಾಪಸಿಂಹ** ಮಾಜಿ ಸಂಸದ



> ಸಿಎಂ ಬದಲಾವಣೆ ವಿಚಾರ ನಿಮ್ಮ, ನಮ್ಮ ಕೈನಲ್ಲಿ ಇಲ್ಲ. ಅಧಿವೇಶನ ಸಂಧ ರ್ಭದಲ್ಲಿ ಇಂತಹ ಚರ್ಚೆ ಒಳ್ಳೆಯ ಬೆಳವಣಿಗೆ ಅಲ್ಲ. ಅಧಿವೇಶನ ನಡೆಸೋದು ರಾಜ್ಯದ ಅಭಿವೃದ್ಧಿ ಗಾಗಿ. ಅಧಿವೇಶನದಲ್ಲಿ ಅಧಿಕಾರ ಹಂಚಿಕೆ ಚರ್ಚೆ ಬಿಟ್ಟು ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಆಗಲಿ. ಎಲ್ಲಾ 224 ಶಾಸಕರೂ ಒಗ್ಗಟ್ಟಾಗಿ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ. ನಾನು ಬೇರೆ ಬೇರೆ ಕಾರಣಗಳಿಂದ ಅಧಿವೇಶನದಲ್ಲಿ ಭಾಗಿಯಾಗಿಲ್ಲ.
>
> ▸▸ **ಜಿ.ಟಿ.ದೇವೇಗೌಡ** ಶಾಸಕ

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ಹಿಂದುತ್ವ ಹೆಸರು ಬಂದಾಗ ಮುನ್ನಲೆಗೆ ಬರುವ ಹೆಸರು ಸಂಜಯ್ ಆಗಿದ್ದಾರೆ. ಭಕ್ತಿ, ನಿಷ್ಠೆಗೆ ಹೆಸರಾದ ಹನುಮಂತ ನಮ್ಮಲ್ಲೆರಲ್ಲೂ ರಾಷ್ಟ್ರಪ್ರೇಮವನ್ನು ಬೆಳಸಬೇಕು. ಮೈಸೂರಿನಲ್ಲಿ ಕುಸ್ತಿ ಪೈಲ್ವಾನರ ಸಂಖ್ಯೆ ಹೆಚ್ಚಾಗಿದೆ. ಭಕ್ತ ಪೈಲ್ವಾನ್ ಆಗಿದ್ದರೆ ದೇವರು ಹನುಮನೇ ಆಗಿರುತ್ತಾನೆ. ಅಂತಹ ಹನುಮಂತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಹಿಂದೂಗಳ ಪವಿತ್ರ ದೇವರಲ್ಲಿ ಒಬ್ಬನು ಹನುಮನಾಗಿದ್ದಾನೆ. ಅಂತಹ ಮಹಾನ್ ಶಕ್ತಿಯ ಮೆರವಣಿಗೆ ಮಾಡುತ್ತಿರುವುದು ಶ್ಲಾಘನೀಯ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ಸೇರಿ ಅನೇಕರು ಉಪಸ್ಥಿತರಿದ್ದರು. ಮೈಸೂರು ಅರಮನೆಯ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಬೃಹತ್ ಮೆರವಣಿಗೆಯ ಶೋಭಾಯಾತ್ರೆ ಪ್ರಾರಂಭವಾಯಿತು. ಗುತ್ತದೆ. ಈ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು "ಜೈ ಶ್ರೀ ರಾಮ್" ಮತ್ತು "ಜೈ ಹನುಮಾನ್" ಎಂದು ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಮೆರವಣಿಗೆಯು ಅಶೋಕ ರಸ್ತೆ, ಇರ್ವಿನ್ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಕೆ.ಆರ್. ಸರ್ಕಲ್, ಡಿ.ಡಿ. ಅರಸ್ ರಸ್ತೆ ಮತ್ತು ಚಾಮರಾಜ ಡಬಲ್ ರಸ್ತೆಯಂತಹ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ಗನ್‌ಹೌಸ್ ವೃತ್ತದ ಬಳಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ಹನುಮಾನ್, ದತ್ತಾತ್ರೇಯ ಮತ್ತು ಭಾರತ ಮಾತೆ ಸೇರಿದಂತೆ ವಿವಿಧ ದೇವಾನುದೇವತೆಗಳ ವಿಗ್ರಹಗಳು ಮತ್ತು ಸ್ತಬ್ಧಚಿತ್ರಗಳು ಸಾಗಿದರೆ, ನಂದಿ ಕಂಬ, ವೀರಗಾಸೆ, ಡೊಳ್ಳು ಕುಣಿತ, ಮಂಗಳವಾದ್ಯ ಮತ್ತು ಭಜನಾ ತಂಡಗಳು ಸೇರಿ ಭಾಗವಹಿಸಿದ್ದವು.

## ಸರ್ಕಾರ ಬ್ರಾಹ್ಮಣರ ಕಡೆಗಣಿಸಲ್ಲ: ದಿನೇಶ್ ಗುಂಡೂರಾವ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಂದಿಗೂ ಬ್ರಾಹ್ಮಣರನ್ನು ಕಡೆಗಣಿಸುವುದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಕರೆ ನೀಡಿದರು.

ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ನಗರದ ಶಾರದಾ ವಿಲಾಸ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವಾಮಿತ್ರ ಪ್ರತಿಭಾ ಪುರಸ್ಕಾರ ಮತ್ತು ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆಯ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧವಾಗಿದ್ದು, ಸಮುದಾಯದ ಪ್ರತಿಯೊಬ್ಬರು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಬೇಕು. ಬ್ರಾಹ್ಮಣ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ ಎಂಬ ಭಾವನೆ ಸಮುದಾಯದವರಲ್ಲಿ ಇದೆ. ಆದರೆ, ಸಮುದಾಯದವರು ಬೇಸರ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಸರ್ಕಾರ ಇರುವಾಗ ಅಂತಹ ಬೇಸರ ಹಾಗೂ ಆತಂಕ ಪಡುವ ಅವಶ್ಯಕತೆ ಇಲ್ಲ. ಸರ್ಕಾರ ಬ್ರಾಹ್ಮಣ ಸಮುದಾಯದ ಅಭಿವೃದ್ಧಿ ಪರವಾಗಿ ಸದಾ ಇರುತ್ತದೆ ಎಂದು ಹೇಳಿದರು.

ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ರಾಜ್ಯ ಬ್ರಾಹ್ಮಣ ಅಭಿವೃದ್ಧಿ



ಮಂಡಳಿಯನ್ನು ರಚಿಸಿ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಸಮುದಾಯದವರು ಸರ್ಕಾರ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಲು ಮುಂದೆ ಬರಬೇಕು. ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಪ್ರತಿ ವರ್ಷ 10 ಕೋಟಿ ರೂ. ಅನುದಾನ ನೀಡಲಾಗುತ್ತಿದೆ. ಈ ಬಾರಿ ಇನ್ನೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಲು ಕ್ರಮ ವಹಿಸಲಾಗುವುದು. ಮುಂದಿನ ಬಜೆಟ್‌ನಲ್ಲಿ ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವ ಯೋಜನೆಗಳು, ಅನುದಾನವನ್ನು ಸೇರಿಸಲು ಮುಖ್ಯಮಂತ್ರಿಯೊಂದಿಗೆ ಚರ್ಚಿಸಲಾಗುವುದು. ಅಸಂಘಟಿತ ವಲಯದಲ್ಲಿರುವ ಬ್ರಾಹ್ಮಣ ಸಮುದಾಯದ ಪುರೋಹಿತರು, ಅರ್ಚಕರು ಮತ್ತು ಜೋತಿಷ್ಯರಿಗೆ ಸಾಮಾಜಿಕ ಭದ್ರತೆ ಕಲ್ಪಿಸುವ ಯೋಜನೆ ರೂಪಿಸಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿ, ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಸ್ಥಾಪನೆಯಾಗಿರುವ ಮಂಡಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು. ಅನುದಾನ ನೀಡಿದಷ್ಟು ಸಮಾಜದ ಜನರಿಗೆ ಹೆಚ್ಚು ಪ್ರಯೋಜನವಾಗಲಿದೆ. ಸಚಿವ ದಿನೇಶ್ ಗುಂಡೂರಾವ್ ಅವರು ಈ ಬಗ್ಗೆ ಮುಖ್ಯಮಂತ್ರಿ ಅವರ ಗಮನ ಸೆಳೆಯಬೇಕು ಎಂದು ಮನವಿ ಮಾಡಿದರು. ಈ ಸಂದರ್ಭ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿಶ್ವಾಮಿತ್ರ ಪ್ರತಿಭಾರ ಪುರಸ್ಕಾರ ಮತ್ತು ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆಯ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷ ಡಾ.ಕೆ.ವಿ.ಲಕ್ಷ್ಮೀದೇವಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠ ಕುಮಾರ್, ಮಂಡಳಿ ನಿರ್ದೇಶಕರಾದ ಪಿ.ಎಂ.ಮಾಲತೇಶ. ಸಿ. ಎನ್.ನಾಗೇಶ್, ಬೆಳ್ಳೂರು ಎಸ್.ಶ್ರೀಧರ್, ಪಿ.ಶ್ರೀನಿವಾಸ ಮೂರ್ತಿ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕಿ ಕೆ.ದೀಪಶ್ರೀ ಇದ್ದರು.

## ಫಿಟ್ ಮೈಸೂರು ಮ್ಯಾರಥಾನ್ ಯಶಸ್ಸಿಗೆ ಪೂರ್ವ ತಯಾರಿ

**ಮೈಸೂರು:** ಮೈಸೂರಿನ ಜಿಎಸ್‌ಎಸ್ ಯೋಗ ಸಂಸ್ಥೆ ನೇತೃತ್ವದಲ್ಲಿ ನಡೆಸಲಾಗುತ್ತಿರುವ "ಫಿಟ್ ಮೈಸೂರು ಮ್ಯಾರಥಾನ್" ಕಾರ್ಯಕ್ರಮದ ರೂಪುರೇಷೆಗಳ ಕುರಿತು ಗುರುವಾರ ಪೂರ್ವಭಾವಿ ಸಭೆ ನಡೆಸಲಾಯಿತು.

> ▸▸ **ವಿವಿ ಕುಲಪತಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ**
>
> ▸▸ **ಜ.11, 2026ಕ್ಕೆ ಪ್ರಧಾನ ಕಾರ್ಯಕ್ರಮ ಆಯೋಜನೆ**

ನಗರದ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಹಾಲ್‌ನಲ್ಲಿ ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಫಿಟ್ ಮೈಸೂರು ಮ್ಯಾರಥಾನ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯವಿರುವ ಕ್ರಮಗಳ ಕುರಿತು ಪ್ರಸ್ತಾಪಿಸಲಾಯಿತು.

ಸಭೆಯ ಆರಂಭದಲ್ಲಿ ಮಾತನಾಡಿದ ಜಿಎಸ್‌ಎಸ್ ಯೋಗ, ಜಿಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಆರೋಗ್ಯಕರ ಮತ್ತು ಸದೃಢ ಮೈಸೂರು ನಿರ್ಮಾಣದ ಉದ್ದೇಶದೊಂದಿಗೆ 2026ರ ಜನವರಿ 11ಕ್ಕೆ ಫಿಟ್ ಮೈಸೂರು ಮ್ಯಾರಥಾನ್ ನಡೆಸಲಾಗುತ್ತಿದೆ. ಮೈಸೂರು ವಿವಿ, ಜಿಮ್ ಅಸೋಸಿಯೇಷನ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಡೆಯುತ್ತಿರುವ ಮ್ಯಾರಥಾನ್‌ನಲ್ಲಿ ಅಂದಾಜು 10 ಸಾವಿರಕ್ಕೂ ಹೆಚ್ಚಿನ ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್, ಬೃಹತ್ ಮ್ಯಾರಥಾನ್‌ನಲ್ಲಿ ನಗರದ ಪ್ರತಿಯೊಂದು ಕಾಲೇಜುಗಳ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಿದೆ. ಅಲ್ಲದೇ ವಿವಿಯ ಹಾಸ್ಟೆಲ್‌ಗಳಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಗಳು ಕೂಡ ಇದರಲ್ಲಿ ಭಾಗವಹಿಸಬೇಕಿದ್ದು, ವಾರ್ಡನ್‌ಗಳು




ಎಲ್ಲ ವಿದ್ಯಾರ್ಥಿಗಳು ಭಾಗವಹಿಸುವಂತೆ ಕ್ರಮವಹಿಸುವುದರ ಜತೆಗೆ ಮ್ಯಾರಥಾನ್ ಸಾಗುವ ಮಾರ್ಗದ ಆಯ್ಕೆ, ಪ್ರತ್ಯೇಕವಾಗಿ ಗುಂಪುಗಳು ನಡಿಗೆ ಆರಂಭಿಸಲು ಕ್ರಮವಹಿಸುವುದು, ಮ್ಯಾರಥಾನ್‌ಗೆ ಘೋಷವಾಕ್ಯ ಬಳಸುವುದರ ಬಗ್ಗೆಯೂ ಚರ್ಚಿಸಲಾಯಿತು.

ಅಲ್ಲದೇ ಬೃಹತ್ ಮ್ಯಾರಥಾನ್‌ನಲ್ಲಿ ಹೆಚ್ಚಿನ ಜನರು ಭಾಗವಹಿಸುವಂತೆ ಮಾಡಲು ಕ್ಯೂ–ಆರ್ ಕೋಡ್ ಬಳಸಿ, ಗೂಗಲ್ ಫಾರ್ಮ್ ಮೂಲಕವಾಗಿ ನೋಂದಣಿ ಮಾಡಿಕೊಳ್ಳುವುದು. ಕುಕ್ಕರಹಳ್ಳಿ ಕೆರೆಯಲ್ಲಿ ವಾಯುವಿಹಾರ ಮಾಡುವವರನ್ನು ಇದರಲ್ಲಿ ಭಾಗವಹಿಸುವಂತೆ ಮಾಡಲು, ಕುಕ್ಕರಹಳ್ಳಿ ಕೆರೆಯ ಪ್ರವೇಶ ದ್ವಾರಗಳಲ್ಲಿ ಫಿಟ್ ಮೈಸೂರು ಮ್ಯಾರಥಾನ್‌ನ ಬ್ಯಾನರ್ ಅಳವಡಿಸಿ, ಪ್ರಚಾರ ನೀಡುವುದು. ಮ್ಯಾರಥಾನ್ ಕಾರ್ಯಕ್ರಮದ

> **ಡಿ.21ಕ್ಕೆ ಪೂರ್ವಭಾವಿ ಕಾರ್ಯಕ್ರಮ**
>
> **ಫಿಟ್ ಮೈಸೂರು ಮ್ಯಾರಥಾನ್ ಪ್ರಧಾನ ಕಾರ್ಯಕ್ರಮ 2026ರ ಜನವರಿ 11ಕ್ಕೆ ನಡೆಯಲಿದೆ. ಇದಕ್ಕೆ ಪ್ರಚಾರ ನೀಡಲು ಡಿ.21ಕ್ಕೆ ಮಾನಸಗಂಗೋತ್ರಿಯ ಕ್ಲಾಕ್ ಟವರ್ ಆವರಣದಲ್ಲಿ ಪೂರ್ವಭಾವಿ ಕಾರ್ಯಕ್ರಮ ನಡೆಸುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

ಮಾಹಿತಿ ನೀಡುವ ಪ್ರಮೋಷನ್ ವಿಡಿಯೋಗಳ ಮಾಡುವುದು, ಡ್ರೆಸ್‌ಕೋಡ್ ನಿಗದಿ, ಭದ್ರತಾ ವ್ಯವಸ್ಥೆ ಇತರ ವಿಷಯಗಳ ಬಗ್ಗೆ ಹಲವರು ತಮ್ಮ ಸಲಹೆಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಚಿರಾಗ್ ಆರ್ಟ್ಸ್‌ನ ಮುಖ್ಯಸ್ಥ ವಿವೇಕ್ ಸೇರಿದಂತೆ ಮೈಸೂರು ವಿವಿಯ ಪ್ರಮುಖರು, ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು, ಸದಸ್ಯರು ಭಾಗವಹಿಸಿದ್ದರು.

**ವಂದೇ ಮಾತರಂ ಗಾಯನ:** ಫಿಟ್ ಮೈಸೂರು ಮ್ಯಾರಥಾನ್‌ನಲ್ಲಿ ಸಾವಿರಾರು ಜನರು ಭಾಗವಹಿಸಲಿದ್ದು, ಮ್ಯಾರಥಾನ್ ಆರಂಭಕ್ಕೂ ಮುನ್ನ ನಾಡಗೀತೆ ಹಾಡುವುದರ ಬಗ್ಗೆ ಕೆಲವರು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಎಂ.ಕೆ.ಸವಿತಾ, ನಾಡಗೀತೆಗೆ ನೂರು ವರ್ಷಗಳು ಪೂರೈಸಿದ ಕಾರಣಕ್ಕೆ ಈಗಾಗಲೇ ಬೃಹತ್ ಕಾರ್ಯಕ್ರಮ ನಡೆಸಲಾಗಿದೆ. ಹೀಗಾಗಿ ವಂದೇ ಮಾತರಂ ಗೀತೆಗೆ 150 ವರ್ಷವಾಗುತ್ತಿರುವ ಹಿನ್ನೆಲೆಯಲ್ಲಿ ವಂದೇ ಮಾತರಂ ಸಮೂಹ ಗಾಯನ ಕಾರ್ಯಕ್ರಮ ಆಯೋಜಿಸುವಂತೆ ಸಲಹೆ ನೀಡಿದರು.

## ಹನುಮ ಜಯಂತಿ ಹಿನ್ನೆಲೆ ಪೊಲೀಸ್ ಪಥಸಂಚಲನ



**ಮೈಸೂರು:** ನಗರದಲ್ಲಿ ನಡೆಯುವ ಹನುಮ ಜಯಂತಿ ಹಿನ್ನೆಲೆಯಲ್ಲಿ ನಗರ ಪೊಲೀಸರು ಗುರುವಾರ ಪೂರ್ವಸಿದ್ಧತೆ ಮತ್ತು ಭದ್ರತಾ ದೃಷ್ಟಿಯಿಂದ ಪಥಸಂಚಲನ ನಡೆಸಿದರು. ನಗರದ ಕೋಟೆ ಆಂಜನೇಸ್ವಾಮಿ ದೇವಸ್ಥಾನದ ಆವರಣದಿಂದ ಗನ್‌ಹೌಸ್ ವೃತ್ತದವರೆಗೆ ಒಟ್ಟು ಐದು ಕಿ.ಮೀ ಪಥಸಂಚಲನ ನಡೆಸಿದ ನಗರ ಪೊಲೀಸರು, ಹನುಮ ಜಯಂತಿ ಮೆರವಣಿಗೆಯ ಸಂಭ್ರಮಾಚರಣೆ ವೇಳೆ ಕಾನೂನು ಸುವ್ಯವಸ್ಥೆಗೆ ಅಡ್ಡಿಪಡಿಸದಂತೆ ಜಾಗೃತಿ ಮೂಡಿಸಿದರು. ಉಪ ಪೊಲೀಸ್ ಆಯುಕ್ತರುಗಳಾದ ಸುಂದರ್ ರಾಜ್, ಬಿಂದುಮಣಿ ಅವರುಗಳ ನೇತೃತ್ವದಲ್ಲಿ ನಡೆದ ಪಥಸಂಚಲನದಲ್ಲಿ ವಿವಿಧ ಪೊಲೀಸ್ ತುಕಡಿಗಳ ಒಟ್ಟು 485 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿ ಹೆಜ್ಜೆಹಾಕಿದರು.

# ಕೌಟಿಲ್ಯ ಸಾಂಸ್ಕೃತಿಕ ಪರ್ವ ಸಂಪನ್ನ



ಮೈಸೂರು: ಕೌಟಿಲ್ಯ ಶಾಲೆ ವತಿಯಿಂದ ಆಯೋಜಿಸಿದ್ದ 'ಕೌಟಿಲ್ಯ ಸಾಂಸ್ಕೃತಿಕ ಪರ್ವ' ಹಾಗೂ 'ಕಿರಿಯರ ಕೀರ್ತಿಗೆ, ಹಿರಿಯರ ಸ್ಫೂರ್ತಿ' ಕಾರ್ಯಕ್ರಮ ಶನಿವಾರ ಯಶಸ್ವಿಯಾಗಿ ಸಂಪನ್ನಗೊಂಡಿತು.

ಕೌಟಿಲ್ಯ ವಿದ್ಯಾಲಯದ ವತಿಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನದಲ್ಲಿ ಪ್ರಸಕ್ತ ಸಾಲಿನ ವಾರ್ಷಿಕೋತ್ಸವ ಏರ್ಪಡಿಸಲಾಗಿತ್ತು. ಸಮೂಹ ನೃತ್ಯ ಸೇರಿದಂತೆ ವಿದ್ಯಾರ್ಥಿಗಳ ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಸಭಿಕರ ಸಾಲಿನಲ್ಲಿ ಕುಳಿತಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ಹರ್ಷೋದ್ಗಾರ, ಚಪ್ಪಾಳೆಯ ಮೂಲಕ ಸಂಭ್ರಮಿಸಿದರು. ಕೌಟಿಲ್ಯ ವಿದ್ಯಾಲಯದ ಅಧ್ಯಕ್ಷ ಟಿ.ಬಾಬು ಅಧ್ಯಕ್ಷತೆ ವಹಿಸಿದ್ದರು. ಶಾಲೆಯಲ್ಲಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದ ಬೋಧಕ, ಬೋಧಕೇತರ ಸಿಬ್ಬಂದಿಗೆ 'ಕೌಟಿಲ್ಯ ವಿದ್ಯಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಳೆದ ಶೈಕ್ಷಣಿಕ ಸಾಲಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ವೇದಿಕೆಯಲ್ಲಿ ಪುರಸ್ಕರಿಸಲಾಯಿತು..

# ಜಾಗತೀಕರಣದ ಭರಾಟೆಯಲ್ಲಿ ಕನ್ನಡ ಬಳಕೆ ಕ್ಷೀಣ

▸▸ ಜೆಎಸ್ಎಸ್ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಸಿ. ಬಸವಣ್ಣ ಕಳವಳ

▸▸ ಜೆಎಸ್ಎಸ್ ಮಹಿಳಾ ಕಾಲೇಜು ಕನ್ನಡ ವಿಭಾಗದಿಂದ ರಾಜ್ಯೋತ್ಸವ

ಚಾಮರಾಜನಗರ, ಜಾಗತೀಕರಣದ ಭರಾಟೆಯಲ್ಲಿ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದೆ ಎಂದು ಜೆಎಸ್ಎಸ್ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಸಿ. ಬಸವಣ್ಣ ಕಳವಳ ವ್ಯಕ್ತಪಡಿಸಿದರು.

ನಗರದ ಜೆಎಸ್ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ 70ನೇ 'ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಯನ್ನು ಹೆಚ್ಚೆಚ್ಚು ಬಳಸಿದಂತೆ ಭಾಷೆ ಜೀವಂತವಾಗಿ ಉಳಿಯುತ್ತದೆ. ಕನ್ನಡ ಭಾಷೆಯನ್ನು ಹೆಚ್ಚೆಚ್ಚು ಬಳಸಿದಂತೆ ಭಾಷೆ ಜೀವಂತವಾಗಿ ಉಳಿಯುತ್ತದೆ. ಹೊಟ್ಟೆಪಾಡಿಗೆ ಬೇರೆ ಬೇರೆ ಭಾಷೆಗಳನ್ನು ಕಲಿತರು ಹೃದಯದ ಭಾಷೆಯನ್ನಾಗಿ ಕನ್ನಡವನ್ನೇ ಸ್ವೀಕರಿಸಬೇಕು, ಆಗ ಮಾತ್ರ ಭಾಷೆ ಉಳಿಯುತ್ತದೆ.. ಭಾಷೆ ಎಂದರೆ ಒಂದು ಸಂಸ್ಕೃತಿಯ ಮೊತ್ತ. ಭಾಷೆ ನಶಿಸಿದರೆ ಒಂದು ಸಂಸ್ಕೃತಿಯೇ ನಶಿಸಿ ಹೋಗುತ್ತದೆ ಎಂದು ಬಸವಣ್ಣ ತಿಳಿಸಿದರು. 2024–25 ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ರಾಮೇಗೌಡರು ಸನ್ಮಾನ ಸ್ವೀಕರಿಸಿ ಮಾತನಾಡಿ, ಹಸಿರೇ ಉಸಿರು, ಮರಗಿಡಗಳನ್ನು ಸಂರಕ್ಷಣೆ ಮಾಡುವ ಮೂಲಕ ಪ್ರಕೃತಿಯನ್ನು ಕಾಪಾಡಬೇಕು. ಮರಗಿಡಗಳು ಪ್ರಕೃತಿ ದೇವಿಯ ಆಶೀರ್ವಾದ ವಿದ್ದಂತೆ. ಮನುಷ್ಯನ ರೋಗ ರುಜಿನೆಗಳನ್ನು ವಾಸಿ ಮಾಡುವ ಶಕ್ತಿ ಪ್ರಕೃತಿಗಿದೆ. ಆದ್ದರಿಂದ ಪ್ರಕೃತಿಯನ್ನು ಉಳಿಸಿ ಬೆಳೆಸುವ ಹೊಣೆ ನಮ್ಮ ನಿಮ್ಮೆಲ್ಲರದ್ದು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್ ಮಹದೇವಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಕನ್ನಡ ಏಕೀಕರಣ ಚಳುವಳಿಯ ಇತಿಹಾಸ ತಿಳಿಸುವ ಜೊತೆಗೆ ಕನ್ನಡ ನಾಡು ನುಡಿಗಾಗಿ ಶ್ರಮಿಸಿದ ಸಾಹಿತಿಗಳು ಮತ್ತು ರಾಜಕೀಯ ಮಹನೀಯರನ್ನು ಸ್ಮರಿಸಿಕೊಂಡರು. ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಸಾಗಿ ಬಂದ ಏಕೀಕರಣ ಚಳುವಳಿ ಕೊನೆಗೆ ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಕರ್ನಾಟಕ ಏಕೀಕರಣಗೊಂಡ ಬಗೆಯನ್ನು ಕುರಿತು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಜಾನಪದ ಗಾಯಕ ನರಸಿಂಹಮೂರ್ತಿ ನಾಡು ನುಡಿಗೆ ಸಂಬಂಧಿಸಿದ ಗೀತ ಗಾಯನದ ಮೂಲಕ ಎಲ್ಲರ ಮನಸ್ಸನ್ನು ಸೂರೆಗೊಂಡರು. ಕಾರ್ಯಕ್ರಮದಲ್ಲಿ ಜೆಎಸ್ಎಸ್ ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ. ಸ್ವಾಮಿ, ಕನ್ನಡ ವಿಭಾಗದ ಉಪನ್ಯಾಸಕ ಜಮುನಾ, ಇದ್ದರು.



# ಮತ್ತೇ ಮುಂದುವರೆದ ಹುಲಿ ದಾಳಿ ಪ್ರಕರಣ

ಗುಂಡ್ಲುಪೇಟೆ: ತಾಲೂಕಿನಲ್ಲಿ ಹುಲಿ ದಾಳಿ ಪ್ರಕರಣ ಮತ್ತೇ ಮುಂದುವರೆದಿದ್ದು ಮೇಯುತ್ತಿದ್ದ ಹಸುವಿನ ಮೇಲೆ ದಾಳಿ ಮಾಡಿದ ವ್ಯಾಘ್ರ ರಕ್ತ ಹೀರಿ ಕೊಂದ ಘಟನೆ ತಾಲೂಕಿನ ದೇಪಾಪುರದಲ್ಲಿ ನಡೆದಿದೆ.

ತಾಲೂಕಿನ ದೇಪಾಪುರದ ಗ್ರಾಮದ ಗುರುಮಲ್ಲಪ್ಪ ಎಂಬವರು ಹಸು ಕಳೆದುಕೊಂಡ ರೈತ. ವೀರಭದ್ರಪ್ಪ ಎಂಬುವವರ ಜಮೀನಿನಲ್ಲಿ ಹಸು ಮೇಯಿಸುವಾಗ ದೈತ್ಯಾಕಾರದ ಹುಲಿ ದಾಳಿ ನಡೆಸಿದ್ದು, ಕುತ್ತಿಗೆಗೆ ಬಾಯಿ ಹಾಕಿ ರಕ್ತ ಹೀರಿದ ಹಿನ್ನಲೆ ಸ್ಥಳದಲ್ಲೇ ಹಸು ಅಸುನೀಗಿದೆ.

ಕೂಡಲೇ ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ಕೊಟ್ಟಿದ್ದಾರೆ.

## ಪರಿಹಾರ ಬೇಡ ಹಸು ತೆಗೆದುಕೊಡಿ

ಹುಲಿ ದಾಳಿ ವಿಚಾರ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ ವೇಳೆ ರೈತರು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. ಹುಲಿ ದಾಳಿಗೆ ಮೃತಪಟ್ಟ ಹಸು ನಿತ್ಯ 10 ಲೀ. ಹಾಲು ಕೊಡುತ್ತಿತ್ತು. ಹೈನುಗಾರಿಕೆಯಿಂದ ಜೀವನ ಸಾಗಿಸುತ್ತಿದ್ದೆವು. ಈಗ, ಹಸು ಕಳೆದುಕೊಂಡು ನಷ್ಟ ಉಂಟಾಗಿದ್ದು ತಮಗೆ ಪರಿಹಾರ ಬೇಡ ಹಸುವನ್ನು ಖರೀದಿಸಿ ಕೊಡಿ, ನೀವು ಪ್ರಾಣಿಗಳನ್ನು ರಕ್ಷಣೆ ಮಾಡಿದಂತೆ ರೈತರನ್ನು ರಕ್ಷಿಸಿ ಎಂದು ರೈತರು ಕಿಡಿಕಾರಿದ್ದಾರೆ.



# ಚಿಕ್ಕಲ್ಲೂರು ಜಾತ್ರೆ: ಸಿದ್ಧತೆ ಕೈಗೊಳ್ಳಿ

## ಶಾಸಕ ಎಂ.ಆರ್.ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪಾನಾಗ್ ಸೂಚನೆ



ಚಾಮರಾಜನಗರ, ಕರ್ನಾಟ ಪ್ರಮುಖ ಯಾತ್ರಾ ಕ್ಷೇತ್ರ ಚಿಕ್ಕಲ್ಲೂರಿನಲ್ಲಿ ಜನವರಿ 3 ರಿಂದ 7ರ ವರೆಗೆ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಅಗತ್ಯ ಸಿದ್ದತೆ ಕೈಗೊಳ್ಳುವಂತೆ ಶಾಸಕರಾದ ಎಂ. ಆರ್. ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರು ಕ್ಷೇತ್ರದ ಸಿದ್ದಾಪ್ಪಾಜಿ ದೇವಸ್ಥಾನದ ಆವರಣದ ಪಕ್ಕದಲ್ಲಿ ಚಿಕ್ಕಲ್ಲೂರು ಜಾತ್ರಾ ಮಹೋತ್ಸವ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಚಿಕ್ಕಲ್ಲೂರು ಜಾತ್ರೆಯು 5 ದಿನಗಳ ಕಾಲ ನಡೆಯಲಿದೆ. ಪ್ರತಿವರ್ಷ ಲಕ್ಷಾಂತರ ಭಕ್ತರು ಕ್ಷೇತ್ರಕ್ಕೆ ಜಾತ್ರಾ ಸಂದರ್ಭದಲ್ಲಿ ಭೇಟಿ ನೀಡುತ್ತಾರೆ. ಹೆಚ್ಚು ಸಂಖ್ಯೆಯಲ್ಲಿ ಸೇರುವ ಭಕ್ತಾದಿಗಳಿಗೆ ಮೂಲ ಸೌಲಭ್ಯಗಳಿಗೆ ಕೊರತೆಯಾಗದಂತೆ ಎಲ್ಲ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ತ್ವರಿತವಾಗಿ ಸಿದ್ದತೆಗೆ ಮುಂದಾಗಬೇಕು ಎಂದು ಶಾಸಕರು, ಜಿಲ್ಲಾಧಿಕಾರಿಯವರು ತಿಳಿಸಿದರು.

ಶಾಸಕ ಎಂ.ಆರ್. ಮಂಜುನಾಥ್ ಅವರು ಮಾತನಾಡಿ ಭಕ್ತಾದಿಗಳಿಗೆ ಸರಬರಾಜು ಮಾಡುವ ಕುಡಿಯುವ ನೀರಿನ ಶುದ್ದತೆಯನ್ನ ಪರೀಕ್ಷಿಸಿಕೊಳ್ಳಬೇಕು. ಜಾತ್ರಾ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಉಪಹಾರ ಹೋಟೆಲ್‌ಗಳನ್ನು ತೆರೆಯುವವರಿಗೆ ಶುಚಿತ್ವ ಕಾಪಾಡಿಕೊಳ್ಳುವಂತೆ ಸೂಚಿಸಬೇಕು. ಪರಿಕರಗಳು, ಕುಡಿಯುವ ನೀರು, ಶುದ್ದತೆಯಿಂದ ಇರುವಂತೆ ತಿಳಿಸಬೇಕು. ಕಟ್ಟುನಿಟ್ಟಾಗಿ ಆರೋಗ್ಯ ಪೂರಕ ಕ್ರಮಗಳನ್ನು ವಹಿಸುವಂತೆ ಪರವಾನಗಿ ನೀಡುವ ಹಂತದಲ್ಲಿಯೇ ಹೇಳಬೇಕು ಎಂದರು.

ಲಾರ್ಡ್ ಕ್ಷೇತ್ರ ಸಂಪರ್ಕಿಸುವ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಈಗಾಗಲೇ ಕೆಲವೆಡೆ ಡಾಂಬರೀಕರಣ ಆಗುತ್ತಿದೆ. ಇನ್ನೂ 6 ಕಿ.ಮೀ ರಸ್ತೆಯು ಆಗಲಿದೆ. ಹಂತ ಹಂತವಾಗಿ ಇನ್ನೂ 6 ತಿಂಗಳಲ್ಲಿ ಎಲ್ಲ ರಸ್ತೆ ನಿರ್ಮಾಣ ಕಾರ್ಯ ಪೂರ್ಣವಾಗಲಿದೆ. ಆದರೂ ಜಾತ್ರಾ ಸಂದರ್ಭದಲ್ಲಿ ಭಕ್ತಾದಿಗಳಿಗೆ ತೊಂದರೆಯಾಗದಂತೆ ರಸ್ತೆ ಸರಿಪಡಿಸುವ ಕೆಲಸ ಮಾಡಲು ಸೂಚಿಸಲಾಗುತ್ತದೆ ಎಂದು ತಿಳಿಸಿದರು. ಚಿಕ್ಕಲ್ಲೂರು ಕ್ಷೇತ್ರಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ವರ್ಷವಿಡೀ ಭಕ್ತರು ಭೇಟಿ ಕೊಡುತ್ತಿದ್ದಾರೆ. ಇವರಿಗೆ ಮೂಲ ಸೌಕರ್ಯಗಳ ವ್ಯವಸ್ಥೆಯನ್ನು ಶಾಶ್ವತವಾಗಿ ಕಲ್ಪಿಸಲು ಮಾಸ್ಟರ್ ಪ್ಲಾನ್ ಆಗಬೇಕಿದೆ. ಜಾತ್ರೆ ಮುಗಿದ ನಂತರ ಕ್ಷೇತ್ರದ ಸಮಗ್ರ ಅಭಿವೃದ್ಧಿ ಸಂಬಂಧ ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳೋಣ. ಪ್ರಸ್ತುತ ಬರಲಿರುವ ಜತ್ರೆಗೆ ಯಾವುದೇ ತೊಂದರೆಯಾಗದಂತೆ ಎಲ್ಲ ಸೌಕರ್ಯಗಳನ್ನು ಕಲ್ಪಿಸೋಣ ಎಂದು ಶಾಸಕರಾದ ಎಂದು ತಿಳಿಸಿದರು..

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ ಜಾತ್ರಾ ಸಂದರ್ಭದಲ್ಲಿ ವಿದ್ಯುತ್ ಸೇವೆ ನಿರಂತರವಾಗಿರಬೇಕು. ಮುಂಜಾಗ್ರತಾ ಕ್ರಮಗಳನ್ನು ವಹಿಸಲು ತಂಡ ನಿಯೋಜನೆ ಮಾಡಬೇಕು. ಭಕ್ತಾದಿಗಳ ಸಂಖ್ಯೆಗೆ ಅನುಗುಣವಾಗಿ ಕೆ.ಎಸ್.ಆರ್.ಟಿ.ಸಿ ವತಿಯಿಂದ ಹೆಚ್ಚು ಬಸ್‌ಗಳ ನಿಯೋಜನೆ ಮಾಡಬೇಕು. ಜಾತ್ರೆ ಅವಧಿಯಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು ವೈದ್ಯರು ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಪಂಚಾಯಿತಿ ವತಿಯಿಂದ ಕುಡಿಯುವ ನೀರು ಪೂರೈಕೆ ನಿರ್ವಹಣೆ, ಅಂಗಡಿ ಮಳಿಗೆಗಳು, ವಾಹನಗಳ ನಿಲುಗಡೆ ಸಂಬಂಧ ನಿಯಮಾನುಸಾರ ಟೆಂಡರ್ ಗೆ ಕ್ರಮ ವಹಿಸಲಾಗುತ್ತದೆ. ಪಂಚಾಯಿತಿ ವತಿಯಿಂದ ಕೈಗೊಳ್ಳಬೇಕಿರುವ ಎಲ್ಲ ಕೆಲಸಗಳಿಗೆ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗುತ್ತದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಮಾತನಾಡಿ ಶ್ರೀ ಮಠದ ಭರತರಾಜೇ ಅರಸ್, ಮುಖಂಡರಾದ ಉಗ್ರನರಂಸಿಹೇಗೌಡ, ಗ್ರಾಮದ ಇನ್ನಿತರ ಮುಖಂಡರು ಮಾತನಾಡಿದರು.

ಕೊಳ್ಳೇಗಾಲ ತಹಶೀಲ್ದಾರ್ ಬಸವರಾಜು, ಹನೂರು ತಹಶೀಲ್ದಾರ್ ಚೈತ್ರ, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ರಾಜ್ಯಮಟ್ಟದ ನೆಟ್ ಬಾಲ್ ಪಂದ್ಯಾವಳಿಗೆ ವಿದ್ಯುಕ್ತ ಚಾಲನೆ



ಚಾಮರಾಜನಗರ, – ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ನೆಟ್ ಬಾಲ್ ಅಸೋಸಿಯೇಷನ್ ಇವರ ಸಂಯುಕ್ತಾಶ್ರಯದಲ್ಲಿ 14 ಮತ್ತು 17 ವರ್ಷ ವಯೋಮಿತಿಯ ಬಾಲಕ ಬಾಲಕಿಯರ ರಾಜ್ಯಮಟ್ಟದ ಮೂರು ದಿನಗಳ ನೆಟ್ ಬಾಲ್ ಪಂದ್ಯಾವಳಿಗೆ ಇಂದು ನಗರದಲ್ಲಿ ಚಾಲನೆ ದೊರೆಯಿತು.

ನಗರದ ಡಾ. ಬಿ.ಆರ್ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿನಿಂದ ಡಿಸೆಂಬರ್ 14ರವರೆಗೆ ನಡೆಯಲಿರುವ ನೆಟ್ ಬಾಲ್ ಪಂದ್ಯಾವಳಿಗೆ ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ಚೆಂಡು ಎಸೆಯುವ ಮೂಲಕ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸಮಾರಂಭ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ನೆಟ್ ಬಾಲ್ ಅಂತರಾಷ್ಟ್ರೀಯ ಮಟ್ಟದ ಕ್ರೀಡೆಯಾಗಿದ್ದು, ಇದನ್ನು ಆಡುವುದೇ ಒಂದು ರೋಮಾಂಚನಕಾರಿ. 128 ವರ್ಷಗಳ ಹಿಂದೆ ಇಂಗ್ಲೇಡ್ ನಲ್ಲಿ ಆರಂಭವಾಯಿತು. ನೆಟ್ ಬಾಲ್ ಅಸೋಸಿಯೇಷನ್ ನಲ್ಲಿ 2 ಕೋಟಿ ಸದಸ್ಯರು ಇದ್ದಾರೆ ಎಂಬುದು ಗಮನಾರ್ಹ ಎಂದರು. ಜಿಲ್ಲಾ ಕೇಂದ್ರದಲ್ಲಿ ಆಯೋಜನೆಯಾಗಿರುವ ನೆಟ್ ಬಾಲ್ ಪಂದ್ಯಾವಳಿಯಲ್ಲಿ ರಾಜ್ಯದ 25 ಜಿಲ್ಲೆಗಳಿಂದ 1200 ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಕ್ರೀಡಾ ಮನೋಭಾವದಿಂದ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡುವ ಮೂಲಕ ಕೀರ್ತಿ ತರಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಹಾರೈಸಿದರು.

ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ ಅವರು ಮಾತನಾಡಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ರಾಜ್ಯಮಟ್ಟದ ನೆಟ್ ಬಾಲ್ ಪಂದ್ಯಾವಳಿ ಆಯೋಜನೆ ಮಾಡಿರುವುದು ಹೆಮ್ಮೆಯ ಸಂಗತಿ. ಆತಿಥ್ಯ ವಹಿಸಿರುವ ನಮ್ಮ ಜಿಲ್ಲೆಯಲ್ಲಿ ಕ್ರೀಡಾ ಸ್ಪರ್ಧಿಗಳಿಗೆ ಯಾವುದೇ ಕೊರತೆಯಾಗದಂತೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕಿದೆ. ಕ್ರೀಡೆಯಲ್ಲಿ ಭಾಗವಹಿಸಿರುವ ಮಕ್ಕಳು ಸ್ಪರ್ಧಾ ಮನೋಭಾವದಿಂದ ಭಾಗವಹಿಸಬೇಕು ಎಂದರು. ಜಿಲ್ಲಾ ಪಂಚಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಎಸ್. ಚಂದ್ರಪಾಟೀಲ್, ಡಯಟ್ ಪ್ರಾಂಶುಪಾಲರಾದ ಕಾಶಿನಾಥ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಆರ್. ಶಂಕರ್, ಜಿಲ್ಲಾ ನೆಟ್ ಬಾಲ್ ಅಸೋಸಿಯೇಷನ್‌ನ ಗೌರವ ಅಧದ್ಯಕ್ಷರದ ನರ್ಗೀಸ್ ಬಾನು, ಇದ್ದರು.

# ಡಿ.16ರಿಂದ ರಾಷ್ಟ್ರೀಯ ಗೊಂಬೆಯಾಟ ಉತ್ಸವ



ಮೈಸೂರು: ಭಾರತೀಯ ಶೈಕ್ಷಣಿಕ ರಂಗ ಭೂಮಿ ಸಂಸ್ಥೆ ವತಿಯಿಂದ ಡಿ.16ರಿಂದ 21 ರವರೆಗೆ ರಾಷ್ಟ್ರೀಯ ಗೊಂಬೆಯಾಟ ಉತ್ಸವವನ್ನು ಹಾರ್ಡ್ವಿಕ್ ಶಾಲೆ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಪ್ರಸನ್ನ ತಿಳಿಸಿದರು.

ಡಿ.16ರಿಂದ 20ರವರೆಗೆ ನಡೆಯುವ ಕಾರ್ಯಾ ಗಾರವನ್ನು ಹಿರಿಯ ಲೇಖಕ ಜಿ.ಕೆ. ಜಯರಾಮ್, ಗೊಂಬೆಯಾಟ ವಿನ್ಯಾಸಕಾರ ಶಶಿಧರ್ ಅಡಪ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ನಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮಾ ವಹಿಸಲಿದ್ದಾರೆ. ಡಿ.19ರಿಂದ 21ರ ವರೆಗೆ ಬೊಂಬೆಯಾಟ ಪ್ರದರ್ಶನ ನಡೆಯಲಿದ್ದು, ಡಿ.19ರಂದು ಸಂಜೆ 6 ಗಂಟೆಗೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಆಗಮಿಸಲಿದ್ದಾರೆ ಎಂದರು.

ಡಿ.20ರಂದು ಸಂಜೆ 4 ಗಂಟೆಗೆ ಗೊಂಬೆಯಾಟ ಕಾರ್ಯಾಗಾರದ ಸಮಾರೋಪ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ವೀನರ್ ಬರ್ಗರ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮೊನ್ನಂಡ ಅಪ್ಪಯ್ಯ ಆಗಮಿಸಲಿದ್ದಾರೆ. ಡಿ.21ರಂದು ಉತ್ಸವದ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಉದ್ಯಮಿ ಆರ್.ಗುರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಮಕ್ಕಳಿಗೆ ಕೇವಲ ಪುಸ್ತಕದಲ್ಲಿರುವುದನ್ನು ಮಾತ್ರ ಕಲಿಸಲಾಗುತ್ತಿದೆ. ಇದ್ದರಿಂದ ಮಕ್ಕಳು ಪುಸ್ತಕದ ಬದನೆ ಕಾಯಿಯಂತೆ ಆಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ಶೈಕ್ಷಣಿಕ ರಂಗ ಭೂಮಿ ಸಂಸ್ಥೆಯೂ ಶಿಕ್ಷಕರಿಗೆ ಮೊದಲು ಗೊಂಬೆಯಾಟ ಕಲಿಸಿ, ನಂತರ ಆ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸುವ ಕಾರ್ಯಕ್ಕೆ ಮುಂದಾಗಿದೆ. ಈ ಮೂಲಕ ನಮ್ಮ ಮೂಲ ಕಲೆಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಸಂಸ್ಥೆ ಮಾಡುತ್ತಿದೆ. ಕೇರಳಾ ಸೇರಿದಂತೆ ವಿದೇಶದಲ್ಲಿ ಗೊಂಬೆಯಾಟಕ್ಕೆ ಉತ್ತಮ ಪ್ರತಿಕ್ರಿಯೆ ಜೊತೆಗೆ ಬೆಂಬಲವು ಇದೆ. ಇಲ್ಲಿ ಸರ್ಕಾರಕ್ಕೆ ಈ ಕಲೆ ಬಗ್ಗೆ ಅರಿವು ಕಡಿಮೆ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೀವನ್ ಮುಕ್ತ, ಸುಂದರೀಶ್, ಜಾನ್ ಪ್ರೇಮ್ ಕುಮಾರ್, ಅಲ್ಕನಂದ, ಚೆಲುವರಾಜು ಉಪಸ್ಥಿತರಿದ್ದರು.

# ಡಿ.21ಕ್ಕೆ ರಾಷ್ಟ್ರೀಯ ಯೋಗ ಚಾಂಪಿಯನ್ ಶಿಪ್



ಮೈಸೂರು: ವಿಶ್ವಮಾನವ ಯೋಗ ಶಿಕ್ಷಣ ಸಂಸ್ಥೆಯ ಬೆಳ್ಳಿ ಹಬ್ಬದ ಅಂಗವಾಗಿ ಡಿ.21ರಂದು ಬೆಳಗ್ಗೆ 11 ಗಂಟೆಗೆ ಜಗನ್ಮೋಹನ ಅರಮನೆಯಲ್ಲಿ ರಾಷ್ಟ್ರೀಯ ಮಟ್ಟದ ಯೋಗಾಸನ ಚಾಂಫಿಯನ್ ಶಿಫ್ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಯೋಗ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಶಿರಡಿ ಸಾಯಿಬಾಬ ಭಿಕ್ಷಾ ಕೇಂದ್ರದ ಡಾ.ಲಕ್ಷ್ಮೀ ಶ್ರೀನಿವಾಸ ಗುರೂಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉದ್ಯಮಿ ಗೋವಿಂದೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಜಿ.ಟಿ.ದೇವೇಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಜೆಎಸ್‌ಎಸ್ ಪ್ರತಿಷ್ಠಾನದ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಅಂದು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಬೇಬಿ ಮಠದ ಪೀಠಾಧಿಪತಿಗಳಾದ ಡಾ.ಶ್ರೀತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಉದ್ಯಮಿ ನಾರಾಯಣರಾವ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಂ.ಶಿವಣ್ಣ, ಕಾವೇರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ದಯಾನಂದ್, ಯೋಗ ಒಕ್ಕೂಟದ ಗೌರವ ಅಧ್ಯಕ್ಷ ಟಿ. ಜಲೇಂದ್ರಕುಮಾರ್ ಸೇರಿದಂತೆ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಯೋಗಾಸನ ಸ್ಪರ್ಧೆಯೂ 8 ವರ್ಷದಿಂದ 56 ವರ್ಷ ಮೇಲ್ಪಟ ಹಿರಿಯ ಪುರುಷರು ಮತ್ತು ಮಹಿಳೆಯರಿಗೆ ಸೇರಿದಂತೆ 8 ವಿಭಾಗದಲ್ಲಿ ನಡೆಯಲಿದೆ. ಚಾಂಪಿಯನ್ ಆಫ್ ಚಾಂಪಿಯನ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ, ಟ್ರೋಫಿ ಜೊತೆಗೆ ವಿಶ್ವಮಾನವ ಚಾಂಪಿಯನ್ ಎಂಬ ಬಿರುದು ನೀಡಿ ಗೌರವಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 9900154552, 9916099190 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಕಿರಣ್ ದೇವಯ್ಯ, ಕೆ.ಪಿ.ಗೀತಾ, ಕೆ.ಜೆ.ದೇವರಾಜ್, ಬಿ.ಪಿ.ಮೂರ್ತಿ, ಎನ್.ಅನಂತ್ ಉಪಸ್ಥಿತರಿದ್ದರು.

# ಗ್ರಾಪಂ 15ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಗೆ ಒತ್ತಾಯ

ಚಾಮರಾಜನಗರ, ಗ್ರಾಮ ಪಂಚಾಯತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನವನ್ನು ಬಿಡುಗಡೆ ಮಾಡುವಂತೆ ಸಾಗಡೆ ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ಬಿಜೆಪಿ ಜಿಲ್ಲಾ ಯುವ



ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಸ್. ಆರ್.ಗುರುಪ್ರಸಾದ್ ಒತ್ತಾಯಿಸಿದರು.

ನಗರದಲ್ಲಿ ಪತ್ರಿಕಾ ಹೇಳಿಕೆ ಮೂಲಕ ಮಾತನಾಡಿದ ಅವರು, ಗ್ರಾಮ ಪಂಚಾಯಿತಿಗಳಿಗೆ ನೀಡಬೇಕಾದ 2025 –26 ನೇ ಸಾಲಿನ 15ನೇ ಹಣಕಾಸಿನ ಆಯೋಗದ ಅನುದಾನವನ್ನು ಈ ಕೂಡಲೇ ಸರ್ಕಾರ ಬಿಡುಗಡೆ ಮಾಡಬೇಕು. ಪಕ್ಕದ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರ ಪ್ರದೇಶಕ್ಕೆ ಈ ಅನುದಾನ ಬಿಡುಗಡೆಯಾಗಿದೆ ಅದರಂತೆ ನಮ್ಮ ರಾಜ್ಯಕ್ಕೆ ಅನುದಾನ ಬಿಡುಗಡೆಯಾಗಬೇಕು. ಉದ್ಯೋಗ ಖಾತ್ರಿ ಯೋಜನೆಯ ಸಾಮಾಗ್ರಿ ಹಾಗೂ ನರೇಗಾ ಯೋಜನೆಯ ಕಾಮಗಾರಿಗಳ ಸಾಮಾಗ್ರಿಯ ವೆಚ್ಚ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು. ಇದರ ಜೊತೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಹಾಗೂ ಗ್ರಂಥಾಲಯ ಮೇಲ್ವಿಚಾರಕರಿಗೆ ಹಾಗೂ ಕೂಸಿನ ಮನೆ ಕಾರ್ಯಕರ್ತೆಯರ ಮಾಸಿಕ ವೇತನವನ್ನು ಸರ್ಕಾರವೇ ಭರಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಮೈಸೂರಿನ ಜಂಟಿ ಕೃಷಿ ನಿರ್ದೇಶಕರಿಗೆ ದೂರು

# ಕಳಪೆ ಕೀಟನಾಶಕ: ಲಕ್ಷಾಂತರ ರೂ. ಮೌಲ್ಯದ ಶುಂಠಿ ಹಾಳು



ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಕೊಪ್ಪ ಗ್ರಾಮದ ಖಾಸಗಿ ಕೀಟನಾಶಕ ಮಾರಾಟ ಮಳಿಗೆಯಲ್ಲಿ ಶುಂಠಿ ಬೆಳೆಗೆ ಖರೀದಿಸಿದ ಕ್ರಿಮಿನಾಶಕ ನಕಲಿಯಾಗಿದ್ದು, 15ಲಕ್ಷ ರೂ. ಬೆಲೆಬಾಳುವ ಶುಂಠಿ ಹಾಳಾಗಿದೆ. ಈ ಬಗ್ಗೆ ಪಿರಿಯಾಪಟ್ಟಣ ಸಹಾಯಕ ಕೃಷಿ ನಿರ್ದೇಶಕರಿಗೆ ಮತ್ತು ಮೈಸೂರಿನ ಜಂಟಿ ಕೃಷಿ ನಿರ್ದೇಶಕರಿಗೆ ದೂರು ನೀಡಲಾಗಿದ್ದು, ಕ್ರಿಮಿನಾಶಕ ಮಾರಾಟಗಾರನ ಅಂಗಡಿ ಲೈಸೆನ್ಸ್ ರದ್ದು ಮಾಡಿ ಆತನ ವಿರುದ್ಧ ಕಾನೂನು ಕ್ರಮ ಜರುಗಿಸಿ ರೈತನಿಗೆ ಪರಿಹಾರ ಒದಗಿಸಬೇಕೆಂದು ಕರ್ನಾಟಕ ರಾಜ್ಯ ರೈತಸಂಘದ(ರೈತಬಣ) ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ಒತ್ತಾಯಿಸಿದ್ದಾರೆ.

ಶುಕ್ರವಾರ ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಮಾಧ್ಯಮದವರೊಂದಿಗೆ ಅವರು ಮಾತನಾಡಿ, ಕಳೆದ 6 ತಿಂಗಳ ಹಿಂದೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಚೆನ್ನಕಲ್ ಕಾವಲ್ ಗ್ರಾಮದ ರೈತರಾದ ಮಣಿ, ಸಿ.ಪಿ, ಎಂಬವರು ಸರ್ವೇ ನಂ.30ರ ಮೂರು ಎಕರೆಯ ಗುತ್ತಿಗೆ ಜಮೀನಿನಲ್ಲಿ ಶುಂಠಿ ಬೆಳೆಯನ್ನು ನಾಟಿ ಮಾಡಿದ್ದು, ಜಮೀನಿಗೆ ಬೆಳೆಯ ಪೋಷಣೆ ಮತ್ತು ಸಸ್ಯ ಸಂರಕ್ಷಣೆಗೆ ಜೂ.25ರಂದು ಪಿರಿಯಾಪಟ್ಟಣ ತಾಲ್ಲೂಕು ಕೊಪ್ಪ ಗ್ರಾಮದ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಅವರಿಂದ ವಿವಿಧ ಉತ್ಪನ್ನಗಳನ್ನು ಖರೀದಿಸಿ ಮಾರಾಟಗಾರರ ಶಿಫಾರಸಿನಂತೆಯೇ ಜೂನ್ 26 ರಂದು ಕೀಟನಾಶಕ ಸಿಂಪಡಣೆ ಮಾಡಿರುತ್ತಾರೆ, ಸಿಂಪಡಣೆ ಮಾಡಿದ ನಂತರ ಎರಡು ದಿನದಲ್ಲಿ ಎಲೆಗಳು ಸುಟ್ಟಂತಾಗಿ ಬೆಳೆಯು ಹಾಳಾಗಿರುತ್ತದೆ. ಈ ವಿಚಾರವನ್ನು ರೈತರು. ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕರ ಗಮನಕ್ಕೆ ತಂದಿದ್ದು, ಅವರ ಪ್ರತಿನಿಧಿಗಳು ಸಹ ಜಮೀನಿಗೆ ಭೇಟಿ ನೀಡಿ, ಪರಿಶೀಲನೆ ಮಾಡಿ, ರೈತರಿಗೆ ಉಚಿತವಾಗಿ ಬೇರೆ ಉತ್ಪನ್ನಗಳನ್ನು ನೀಡಿ, ಇವುಗಳನ್ನು ಸಿಂಪಡಿಸಿ 12 ದಿನಗಳಲ್ಲಿ ಸರಿ ಹೋಗುತ್ತದೆ ಎಂದು ಸೂಚಿಸಿರುತ್ತಾರೆ. ತದನಂತರ ಅವರು ಬೆಳೆಯು ಚೇತರಿಕೆಯಾಗುವುದಿಲ್ಲ. ಇದೀಗ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕ ರೈತನಿಗೆ ಸಬೂಬು ಹೇಳುತ್ತಿದ್ದಾನೆ. ಕೂಡಲೇ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲೀಕನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು, ಆತನ ಲೈಸೆನ್ಸ್ ರದ್ದು ಮಾಡಿ, ರೈತನಿಗೆ ಪರಿಹಾರ ಕೊಡಿಸಬೇಕು ಇಲ್ಲದಿದ್ದಲ್ಲಿ ಪಿರಿಯಾಟಪಟ್ಟಣ ಕೃಷಿ ಇಲಾಖೆ ಎದುರು ಬೃಹತ್ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ರೈತ ಮಣಿ ಮಾತನಾಡಿ, ಕಳೆದ ಆರು ತಿಂಗಳಿನಿಂದಲೂ ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಅಂಗಡಿ ಮಾಲೀಕರು ನಮಗೆ ಪರಿಹಾರ ನೀಡುವುದಾಗಿ ಹೇಳಿ ಅಲೆದಾಡಿಸಿ ಇದೀಗ ಪರಿಹಾರ ನೀಡಲು ನಿರಾಕರಣೆ ಮಾಡುತ್ತಿದ್ದಾರೆ. ಕೂಡಲೇ ಕೃಷಿ ಅಧಿಕಾರಿಗಳು ಮಧ್ಯ ಪ್ರವೇಶಿಸಿ ನಮಗೆ ಪರಿಹಾರ ಕೊಡಿಸಬೇಕು. ನಾನು ಲಕ್ಷಾಂತರ ರೂ ಸಾಲ ಮಾಡಿ, ಜಮೀನು ಗುತ್ತಿಗೆಗೆ ಪಡೆದು ಅದರಲ್ಲಿ ಮತ್ತೆ ಲಕ್ಷಾಂತರ ರೂ ಖರ್ಚು ಮಾಡಿ ಕೃಷಿ ಮಾಡಿದ್ದೇನೆ. ರೈತರಿಗೆ ಉತ್ತಮ ಗುಣಮಟ್ಟದ ಕೀಟನಾಶಕ ಕೊಡುವ ಬದಲು ಕಳಪೆ ಕೀಟನಾಶಕ ನೀಡಿ ನನ್ನ ಬೆಳೆ ಹಾಳಾಗಲು ಶ್ರೀ ನಂಜುಂಡೇಶ್ವರ ಫರ್ಟಿಲೈಸರ್ ಮಾಲಿಕರು ಮತ್ತು ಕಳಪೆ ಗುಣಮಟ್ಟದ ಕೀಟನಾಶಕ ಮಾರಾಟ ಮಾಡುತ್ತಿದ್ದರೂ ಅದನ್ನು ಪರಿಶೀಲಿಸದೆ ಅವರ ಅಕ್ರಮಕ್ಕೆ ಕೃಷಿ ಅಧಿಕಾರಿಗಳೂ ಬೆಂಬಲ ನೀಡಿದ್ದು, ಅವರ ವಿರುದ್ಧವೂ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಕರ್ನಾಟಕ ರಾಜ್ಯ ರೈತಸಂಘದ ಮೈಸೂರು ಜಿಲ್ಲಾ ಅಧ್ಯಕ್ಷ ಮಾಲಿಕ್ ಆವರ್ತಿ, ಅರಸಿನಕೆರೆ ಕೆಂಪರಾಜು, ಪಿರಿಯಾಪಟ್ಟಣದ ಮಂಜುನಾಥ್, ಚಂಗಪ್ಪ, ಸತೀಶ, ಬೆಣಗಾಲು ಮಣಿ, ಚನ್ನಕಲ್ ಷಣ್ಮುಖ, ಕಾವೇರಿ, ಮೋಹನ, ಸಿ.ಆರ್.ಪ್ರಕಾಶ್ ಮತ್ತಿತರರು ಇದ್ದರು.

# 17ರಿಂದ ನಿರಂತರ ರಂಗ ಉತ್ಸವ



ಮೈಸೂರು: ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಲಯ, ನವದೆಹಲಿಯ ಸಂಸ್ಕೃತಿ ಸಚಿವಾಲಯ ಸಹಯೋಗದಲ್ಲಿ ನಿರಂತರ ಫೌಂಡೇಶನ್ ಆಯೋಜಿಸಿರುವ ನಿರಂತರ ರಂಗ ಉತ್ಸವ ಡಿ.17 ರಿಂದ 21ರವರಗೆ ನಗರದ ಕಲಾಮಂದಿರ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ನಡೆಯಲಿದೆ.

ಡಿ.17 ರಂದು ಸಂಜೆ 5.30ಕ್ಕೆ ಹಾಸನ ಮಾನವ ತಂಡದಿಂದ ಜಡೆ ಕೋಲಾಟ ನಡೆಯಲಿದೆ. ಸಂಜೆ 6.15ಕ್ಕೆ ಉದ್ಘಾಟನಾ ಸಮಾರಂಭದಲ್ಲಿ ಸಂಸ್ಕೃತಿ ಚಿಂತಕ ಎಸ್.ಜಿ.ಸಿದ್ದರಾಮಯ್ಯ, ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಭಾಗವಹಿಸುವರು ಎಂದು ನಿರಂತರದ ಅಧ್ಯಕ್ಷ ಎಂ.ಎಂ. ಸುಗುಣ ಹಾಗೂ ಪ್ರಸಾದ್ ಕುಂದೂರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅದೇ ದಿನ ಸಂಜೆ ಸಂಜೆ 7ಕ್ಕೆ ರಾಜೇಶ್ವರಿ ತೇಜಸ್ವಿ ಅವರ ಆತ್ಮಕಥೆ ಆಧಾರಿತ ನಾಟಕ "ನನ್ನ ತೇಜಸ್ವಿ"ಯನ್ನು ಬೆಂಗಳೂರಿನ ಕಲಾಮಾಧ್ಯಮ ತಂಡ ಪ್ರದರ್ಶಿಸಲಿದೆ. ಡಿ.18ರಂದು ಸಂಜೆ 5 5:30ಕ್ಕೆ ಬಿ.ವಿ.ಕಾರಂತರ ರಂಗ ಗೀತೆಗಳನ್ನು ದೇವಾನಂದ್ ವರಪ್ರಸಾದ್ ಮತ್ತು ನಿರಂತರ ಗೆಳೆಯರರು ಪ್ರಸ್ತುತಪಡಿಸುವರು. ಸಂಜೆ 6.15ಕ್ಕೆ ಸಭಾ ಕಾರ್ಯಕ್ರಮದಲ್ಲಿ ಕವಿ ಜಿ.ಪಿ.ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ..ಎಂ.ಡಿ..ಸುದರ್ಶನ ಭಾಗವಹಿಸುವರು. ಸಂ.7ಕ್ಕೆ ನಾದಸಂಜೆ– ರವಿಶಂಕರ್ ಮಿಶ್ರಾ ಅವರ ಕೊಳಲು ಹಾಗೂ ಜುನ್ನೈನ್ ಖಾನ್ ಸಿತಾರ್ ಜುಗಲ್ ಬಂದಿ ನಡೆಯಲಿದೆ. ಡಿ.19 ರಂದು ಸಂ.5.30ಕ್ಕೆ ಶ್ರೀನಿವಾಸ್ ಭಟ್ ಚೀನಿ ಅವರ ರಂಗ ಗೀತೆಗಳನ್ನು ದೇವಾನಂದ್ ವರಪ್ರಸಾದ್ ಮತ್ತು ನಿರಂತರ ಗೆಳೆಯರು ಹಾಡುವರು. ಸಂ.6.15ಕ್ಕೆ ಸಭಾ ಕಾರ್ಯಕ್ರಮದಲ್ಲಿ ನಾಟಕಕಾರ ರಾಜಪ್ಪ ದಳವಾಯಿ, ನಿರಂತರದ ಶ್ರೀನಿವಾಸು ಪಾಲಹಳ್ಳಿ ಭಾಗವಹಿಸುವರು.

ಸಂ.7ಕ್ಕೆ ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದಿಂದ "ಪ್ರತಿ ಗಂಧರ್ವ" ನಾಟಕ ಪ್ರದರ್ಶನ ಇರುತ್ತದೆ. ಡಿ.20ರಂದು ಸಂ.5.30ಕ್ಕೆ ಜನಪದ ಮತ್ತು ತತ್ವಪದ ಗಾಯನವನ್ನು ದೇವಾನಂದ್ ವರಪ್ರಸಾದ್ ಮತ್ತು ನಿರಂತರ ಗೆಳೆಯರು ನಡೆಸಿಕೊಡುವರು. 6.15ಕ್ಕೆ ಸಭಾ ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ಡಾ.ಡಿ. ವಿಜಯಲಕ್ಷ್ಮಿ, ಕನ್ನಡ ಮತ್ತು ಸಂಸ್ಕೃಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಭಾಗವಹಿಸುವರು. ನಂತರ ನಿರಂತರ ರಂಗತಂಡವು ಗೊರೂರು ನಾಟಕ ಪ್ರದರ್ಶಿಸಲಿದೆ. ಡಿ.21ರಂದು ಸಂಜೆ 5.30ಕ್ಕೆ ಕಡೂರಿನ ನವೀನ್ ಕುಮಾರ್ ಮತ್ತು ತಂಡದವರು ವೀರಗಾಸೆ ಪ್ರದರ್ಶಿಸುವರು. ಸಂಜೆ 6:15ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಜಿಲ್ಲಾಧಿಕಾರಿ ಜಿ. ಲಕ್ಷಿಕಾಂತ ರೆಡ್ಡಿ, ಹಿರಿಯ ರಂಗಕರ್ಮಿ ಎ.ಜಿ. ಚಿದಂಬರರಾವ್ ಜಂಬೆ., ಸಂಸ್ಕೃತಿ ಚಿಂತಕ ದೇವನೂರ ಬಸವರಾಜು ನಿರಂತರದ ಎಂ.ಎಂ. ಸುಗುಣ ಭಾಗವಹಿಸುವರು. ನಂತರ ಶ್ರೀರಂಗಪಟ್ಟಣ ಶೆಟ್ಟಿಹಳ್ಳಿಯ ನಿರ್ದಿಂಗತ ತಂಡವು "ಕೊಡಲ್ಲ ಅಂದ್ರೆ ಕೊಡಲ್ಲ" ನಾಟಕ ಪ್ರದರ್ಶಿಸಲಿದೆ.

ಇದೇ ಸಂದರ್ಭದಲ್ಲಿ ನಿರಂತರ ರಂಗ ಉತ್ಸವವನ್ನು ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು. ಶ್ರೀನಿವಾಸು ಪಾಲಹಳ್ಳಿ ಕೆಂಪರಾಜು ಮೊದಲಾದವರು ಇದ್ದರು.

## ಚಿರತೆ ದಾಳಿಗೆ ಕರು ಸಾವು



ಗುಂಡ್ಲುಪೇಟೆ: ಚಿರತೆ ದಾಳಿ ನಡೆಸಿ ಕರುವನ್ನು ಕೊಂದು ಹಾಕಿರುವ ಘಟನೆ ತಾಲೂಕಿನ ಕರಕಲಮಾದಹಳ್ಳಿ ಗ್ರಾಮದಲ್ಲಿ ನಡೆದಿದೆ.

ಕರಕಲಮಾದಹಳ್ಳಿ ಗ್ರಾಮದ ಸೋಮೇಶ್ ಎಂಬುವವರಿಗೆ ಸೇರಿದ ಕರು ಇದಾಗಿದ್ದು, ಜಮೀನಿನಲ್ಲಿ ಕಟ್ಟಿ ಹಾಕಿದ್ದ ವೇಳೆ ಚಿರತೆ ಏಕಾಏಕಿ ದಾಳಿ ನಡೆಸಿ ಕರುವನ್ನು ಕೊಂದು ಹಾಕಿದೆ. ಇದರಿಂದ ಮಾಲೀಕರು ಬೆಚ್ಚಿ ಬಿದ್ದಿದ್ದಾರೆ.

ಹೆಚ್ಚಿದ ಚಿರತೆ–ಹುಲಿ ಉಪಟಳ: ಕುಂದಕೆರೆ ಅರಣ್ಯ ವಲಯ ವ್ಯಾಪ್ತಿಯ ಕರಕಲಮಾದಹಳ್ಳಿ, ಕುಂದಕೆರೆ ಗ್ರಾಮದ ಸುತ್ತಮುತ್ತಲು ಚಿರತೆ ಉಪಟಳ ಹೆಚ್ಚಿದೆ. ಗ್ರಾಮಗಳು ಕಾಡಂಚಿನಲ್ಲಿರುವ ಕಾರಣ ನಿರಂತರವಾಗಿ ಜಾನುವಾರುಗಳ ಮೇಲೆ ದಾಳಿ ನಡೆಸಿ ಕೊಂದು ಹಾಕುತ್ತಿದೆ. ಕಳೆದ ಎರಡು ದಿನ ಹಿಂದೆ ಕುಂದಕೆರೆ ಗ್ರಾಮದ ಮಲಿಯಪ್ಪ ಎಂಬ ರೈತನ ಮೇಲೆ ಹುಲಿ ದಾಳಿ ನಡೆಸಿದ ಪರಿಣಾಮ ಸ್ವಲ್ಪದರಲ್ಲೆ ಪಾರಾಗಿ ಕೆನ್ನೆ, ಹಣೆ ಹಾಗು ತಲೆ ಹಿಂಬದಿಯಲ್ಲಿ ಗಾಯವಾಗಿತ್ತು. ಇದೀಗ ಶನಿವಾರ ಚಿರತೆ ದಾಳಿಯಿಂದ ಕರು ಸಾವನ್ನಪ್ಪಿರುವುದು ರೈತರಲ್ಲಿ ಆತಂಕ ಉಂಟು ಮಾಡಿದೆ. ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಬೋನ್ ಇರಿಸಿ ಚಿರತೆ ಹಾಗೂ ಹುಲಿ ಎರಡನ್ನು ಸೆರೆ ಹಿಡಿದು ಕರು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ಕೊಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಿದರೆ ರಾಷ್ಟ್ರದ ಅಭಿವೃದ್ಧಿ

ಗುಂಡ್ಲುಪೇಟೆ ಯುವಕರು ದೇಶದ ಆಸ್ತಿಯಾಗಿದ್ದು, ಅವರಲ್ಲಿರುವ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಿದರೆ ರಾಷ್ಟ್ರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದ ಡಾ ನವೀನ್ ಮೌರ್ಯ

ತಾಲೂಕಿನ ರಾಘವಾಪುರ ಗ್ರಾಮದಲ್ಲಿ ಡಾ ನವೀನ್ ಮೌರ್ಯ ಅಭಿಮಾನಿ ಬಳಗದಿಂದ ಅಯೋಜಿಸಿದ್ದ ಜೈ ಭೀಮ್ ರೆವಲ್ಯೂಷನರಿ ಕ್ರಿಕೆಟ್ ಪಂದ್ಯಾವಳಿ ಎರಡು ದಿನಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬರಲ್ಲೂ ಪ್ರತಿಭೆ ಅಡಗಿರುತ್ತದೆ. ಸ್ಥಳೀಯವಾಗಿ ಕ್ರೀಡಾಕೂಟ ಆಯೋಜನೆ ಮಾಡುವ ಮೂಲಕ ಯುವಕರಲ್ಲಿರುವ ಕ್ರೀಡಾ ಪ್ರತಿಭೆಗೆ ಉತ್ತೇಜನ ನೀಡಬೇಕಿದೆ. ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಯುವಕರಲ್ಲಿ ಸ್ಫೂರ್ತಿದಾಯಕ ನಾಯಕತ್ವದ ಗುಣ ಪುಟಿದೇಳಬೇಕಾಗಿದೆ. ಎಂದರು

ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಕ್ರೀಡಾ ಮನೋಭಾವದಿಂದ ಆಟವಾಡಿದರೆ ಗೆಲುವು ಸಿಕ್ಕೇ



ಸಿಗುತ್ತದೆ' ಎಂದು ತಿಳಿಸಿದರುವಿಶೇಷ ಆಹ್ವಾನಿತರಾಗಿ ಗುರು ಪ್ರಸಾದ್ ಮಾತನಾಡಿ ದೇಶ, ಸಮಾಜ ನಮಗೇನು ನೀಡಿದೆ ಎಂದು ಪ್ರಶ್ನಿಸುವುದಕ್ಕಿಂತ, ದೇಶ, ಸಮಾಜಕ್ಕೆ ನಾವೇನು ಮಾಡಿದ್ದೇವೆ ಎಂಬುದು ಪ್ರಮುಖ. ಯಾವದೇ ಒಬ್ಬ ವ್ಯಕ್ತಿ ತನ್ನ ವೈಯಕ್ತಿಕ ಜೀವನಕ್ಕಾಗಿಯೇ ಮೀಸಲಾದರೆ ಯಾವುದೇ ಪ್ರಯೋಜನೆಯಿಲ್ಲ. ವೈಯಕ್ತಿಕ ಜೀವನದ ಜೊತೆಗೆ ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರು ತಮ್ಮಿಂದಾದ ಏನಾದರು ಒಳಿತು ಮಾಡುವುದು, ಸಮಾಜ ಸೇವೆ ಸಲ್ಲಿಸುವ ಮನೋಭಾವನೆಯಿಂದ ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ರಾಘವಾಪುರ ಗ್ರಾಮ ಪಂಚಾಯತಿ ಅಧ್ಯಕ್ಷ. ಕೆ ಗೋವಿಂದ ರಾಜ್ ಉಪಾಧ್ಯಕ್ಷೆ ಸುಧಾರಣಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಅರ್ ಡಿ ಉಲ್ಲಾಸ್. ಮಾನವ ಒಂದುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ಮಾಜಿ ಗ್ರಾಮ ಪಂಚಾಯತಿ ಸದಸ್ಯ ದೇವಯ್ಯ ಅರ್ ಎಸ್ ನವೀನ್ ಅರ್ ಜಿ ಗೋವಿಂದರಾಜ್..ಬಿನಾಗೇಂದ್ರ.ಶಂಕರಶೆಟ್ಟಿ.ಬೆಳ್ಳಶೆಟ್ಟಿ ಡಾ..ಪ್ರಸಾದ್.ಸುಂದರ್ ಸ್ವಾಮಿ. ಸಿ, ಶಂಭುಲಿಂಗಸ್ವಾಮಿ,ಶಿವಮಲ್ಲಪ್ಪ, ಪುಟ್ಟಸ್ವಾಮಿ, ಲೋಕೇಶ್ ಬಿ ಎಂ, ಅಭಿಷೇಕ್ ಪಾಳ್ಯಗಾರ್. ಜಲೇಂದ್ರ ,ಮಹದೇವಶೆಟ್ಟಿ. ಹರೀಶ್. ನಾಗುಸ್ವಾಮಿ. ಶಿವು ನಾಗರಾಜ್ ಮದ್ದಯ್ಯನ ಹುಂಡಿ ನಂಜುಂಡ ಸ್ವಾಮಿ ಇನ್ನು ಇತರರು ಹಾಜರಿದ್ದರು

# ಶೋಭಾ ಯಾತ್ರೆಯಲ್ಲಿ ನಟರ ಫೋಟೋ ಪ್ರದರ್ಶನ ಸಲ್ಲದು

## ಡಿವೈಎಸ್ಪಿ ಶ್ರೀಕಾಂತ್ ಖಡಕ್ ಸೂಚನೆ । ಹನುಮ ಜಯಂತಿ ಸಭೆ

ಹೆಚ್ ಡಿ ಕೋಟೆ : ಶ್ರೀ ಹನುಮ ಸೇವಾ ಸಮಿತಿ ವತಿಯಿಂದ ಇದೇ 20ರಂದು ನಡೆಯಲಿರುವ ಶ್ರೀ ಹನುಮ ಜಯಂತೋತ್ಸವ ಶೋಭಾಯಾತ್ರೆಯಲ್ಲಿ ದರ್ಶನ್, ಕಿಚ್ಚ ಸುದೀಪ್, ಪುನೀತ್ ರಾಜ್ ಕುಮಾರ್, ಬಿಗ್ ಬಾಸ್ ಸ್ಪರ್ಧಿ ಗಿಲ್ಲಿ ನಟ ಸೇರಿದಂತೆ ಸ್ಟಾರ್ ನಟರ ಫ್ಲೆಕ್ಸ್ ಅಥವಾ ಭಾವಚಿತ್ರಗಳನ್ನು ಪ್ರದರ್ಶಿಸಬಾರದು ಎಂದು ಡಿವೈಸ್ಪಿ ಶ್ರೀಕಾಂತ್ ಮನವಿ ಮಾಡಿದ್ದಾರೆ. ಒಂದು ವೇಳೆ ಪ್ರದರ್ಶಿಸಿದರೆ ಅಂತವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಖಡಕ್ ಎಚ್ಚರಿಕೆ ನೀಡಿದ್ದಾರೆ.

ತಾಲೂಕಿನ ಮಿನಿ ವಿಧಾನಸೌಧದ ತಹಸೀಲ್ದಾರ್ ಕಚೇರಿಯಲ್ಲಿ ಹನುಮ ಜಯಂತಿ ಸಂಬಂಧ ಎಲ್ಲಾ ಸಮಾಜದ ಮುಖಂಡರು, ಜಯಂತಿ ಆಯೋಜಕರು, ವರ್ತಕರ ಸಂಘದವರು, ಆಟೋ ಚಾಲಕರು ಮತ್ತು ಮಾಲೀಕರ ಸಂಘದದವರ ಜೊತೆ ಸಭೆಯಲ್ಲಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಸ್ಟಾರ್ ನಟರ ಹೆಸರಿನಲ್ಲಿ ವಾರ್ ನಡೆಯುತ್ತಿರುವುದು ಕಂಡುಬಂದಿದೆ. ಹನುಮ ಜಯಂತಿ ಶೋಭಾಯಾತ್ರೆಯಲ್ಲೂ ಅವರವರ ನೆಚ್ಚಿನ ಸ್ಟಾರ್ ನಟರ ಫೋಟೋ ಪ್ರದರ್ಶಿಸುವುದು, ವೈಯಕ್ತಿಕ ದ್ವೇಷಕ್ಕೆ ಕಿತ್ತಾಡುವ ಮೂಲಕ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುವ ಪ್ರವೃತಿ ಜಾಸ್ತಿಯಾಗಿದೆ. ಹೀಗಾಗಿ ಯಾರು ಕೂಡ ಶೋಭಾಯಾತ್ರೆಯಲ್ಲಿ ನಟರ ಫೋಟೋ ಹಿಡಿದು ಕಿರುಚಾಡುವುದು, ಮತ್ತೊಬ್ಬರನ್ನು ಹೀಯಾಳಿಸುವುದು ಮಾಡಬಾರದು. ಒಂದು ವೇಳೆ ಇಂತಹ ಅಹಿತಕರ ಘಟನೆ ಕಂಡುಬಂದರೆ ಅಂತವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಶ್ರೀ ಹನುಮ ಸೇವಾ ಸಮಿತಿ ವತಿಯಿಂದ ನಡೆಸುತ್ತಿರುವ ಹನುಮ ಜಯಂತಿಗೆ ಪೊಲೀಸ್ ಭದ್ರತೆ ಕಲ್ಪಿಸಲಾವುದು. ವೈಯಕ್ತಿಕ ದ್ವೇಷಕ್ಕೆ ಪ್ರಸಾದಕ್ಕೆ ವಿಷ ಹಾಕುವ ಘಟನೆ ಕೂಡ ನಡೆದಿದೆ. ಹೀಗಾಗಿ ಅಂದು ಫುಡ್ ಇನ್ಸ್ಪೆಕ್ಟರ್ ಬಂದು ಪ್ರಸಾದ ಪರೀಕ್ಷೆ



ಮಾಡಲಿದ್ದಾರೆ. ಇದಕ್ಕೆ ಆಯೋಜಕರು ಸಹಕರಿಸಬೇಕು. ಇನ್ನು ಶೋಭಾಯಾತ್ರೆಯಲ್ಲಿ ಭಾಗಿಯಾಗುವ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡುತ್ತೇವೆ. ಜೊತೆಗೆ ಯಾವುದೇ ಅಡ್ಡಿ–ಆತಂಕ ಆಗದಂತೆ ಮುನ್ನಚ್ಚರಿಕೆ ಕ್ರಮವಾಗಿ ಫುಟ್ ಪಾತ್ ವ್ಯಾಪಾರ ತೆರವು ಮಾಡುವುದಾಗಿ ಶ್ರೀಕಾಂತ್ ಅವರು ಹೇಳಿದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ. ಹನುಮ ಜಯಂತಿ ವೇಳೆ ಎಲ್ಲರೂ ಶಾಂತಿ ಕಾಪಾಡಬೇಕು. ಯಾವುದೇ ಅಹಿತಕರ ಘಟನೆಗೆ ಆಸ್ಪದ ಕೊಡಬಾರದು. ಪ್ರಸಾದ ಮತ್ತು ಪಾನಕ ವಿತರಣೆ ಮಾಡುವುದಕ್ಕಿಂತ ಮುಂಚೆ ಫುಡ್ ಇನ್ಸ್ಪೆಕ್ಟರ್ ಪರೀಕ್ಷೆ ಕಡ್ಡಾಯವಾಗಿದೆ. ಹೀಗಾಗಿ ಎಲ್ಲರೂ ಹನುಮ ಜಯಂತಿ ಯಶಸ್ವಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ಶ್ರೀ ಹನುಮ ಸೇವಾ ಸಮಿತಿ ಅಧ್ಯಕ್ಷ ರಾಜು ಬಿಡುಗಲು ಮಾತನಾಡಿ, ಇದೇ 20 ರಂದು ಬೆಳ್ಳಗ್ಗೆ 10 ಗಂಟೆಗೆ ಹನುಮ ಶೋಭಾಯಾತ್ರೆ ಆರಂಭವಾಗಲಿದೆ. ಸರಗೂರು ಹಾಗೂ ಹೆಚ್ ಡಿ ಕೋಟೆ ತಾಲೂಕಿನ ಎಲ್ಲಾ ಮಠಾಧೀಶರು, ಸ್ವಾಮೀಜಿಗಳು, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕರು, ರಾಜಕೀಯ ನಾಯಕರು ಭಾಗವಹಿಸಲಿದ್ದಾರೆ. ಅಂದಾಜು 8–10 ಸಾವಿರ ಹನುಮ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ನಮ್ಮ ಸಂಸ್ಕೃತಿ ಬಿಂಬಿಸುವ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ ಎಂದು ಹೇಳಿದರು.

ಸಭೆಯಲ್ಲಿ ಸಬ್ ಇನ್ಸ್ಪೆಕ್ಟರ್ ಚಿಕ್ಕನಾಯಕ, ಚಂದ್ರಮೌಳಿ, ಶ್ರೀಕಾಂತ್, ಮುತ್ತಣ್ಣ, ಸುಧಾಕರ್, ನಾಗೇಶ್, ಮೋಹನ್, ಪ್ರಮೋದ್, ರೂಪೇಶ್, ಮಹೇಶ್, ಸುರೇಶ್, ಪ್ರಶಾಂತ್, ಸಂತೋಷ್, ನಾಗೇಶ್, ಅಶೋಕ್, ಜಾಮೀಯಾ ಮಸೀದಿ ಅಧ್ಯಕ್ಷ ನಜೀರ್ ಅಹಮದ್, ಶಫೀ, ತಾಲೂಕು ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಶಫೀ, ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಸದಸ್ಯ ಶರ್ಫುದ್ದೀನ್ ಸೇರಿದಂತೆ ರೈತರು ಭಾಗವಹಿಸಿದರು.

### ಮದ್ಯ ಮಾರಾಟ ಬಂದ್

**ಸರ್ಕಲ್ ಇನ್ಸ್ಪೆಕ್ಟರ್ ಎಸ್.ಗಂಗಾಧರ್ ಮಾತನಾಡಿ, ಜಾತಿ, ಧರ್ಮಗಳನ್ನು ಒಗ್ಗೂಡಿಸಿಕೊಂಡು ಹೋಗುವುದೇ ನಮ್ಮ ಸಂಸ್ಕೃತಿ. ಹೀಗಾಗಿ ಎಲ್ಲಾ ಧರ್ಮದವರು ಹನುಮ ಜಯಂತಿ ಆಚರಣೆಗೆ ಸಹಕಾರ ನೀಡಬೇಕು . ಯಾರು ಕೂಡ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರುವಂತ ಕೆಲಸ ಮಾಡಬಾರದು. ಶೋಭಾ ಯಾತ್ರೆ ದಿನದಂದು ಮದ್ಯ ಮಾರಾಟ ಬಂದ್ ಮಾಡಲಾಗುವುದು ಎಂದು ಹೇಳಿದರು.**

# ದಿಕ್ಕು ತಪ್ಪಿಸುತ್ತಿರುವ ಸರ್ಕಾರ: ಯಧುವೀರ್

ಮೈಸೂರು: ಯುನಿಟಿ ಮಾಲ್ ತೆರೆಯಲು ನಮ್ಮ ವಿರೋಧ ಇಲ್ಲ. ಆದರೆ, ಸರ್ಕಾರ ಗೊಂದಲವಿಲ್ಲದ ಸ್ಥಳ ನೀಡದೆ ದಿಕ್ಕು ತಪ್ಪಿಸುವ ಕೆಲಸ ಮಾಡಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರು ಯುನಿಟಿ ಮಾಲ್ ನಿರ್ಮಾಣಕ್ಕೆ ಹೈಕೋರ್ಟ್ ತಡೆ ಕುರಿತು ಮಾತನಾಡಿದ ಅವರು, ಯುನಿಟಿ ಮಾಲ್ ಸ್ಥಳ ನಾನು ಉದ್ಘಾಟಿಸಿರಲಿಲ್ಲ. ಆ ಸ್ಥಳಕ್ಕೆ ನಾನು ಗುದ್ದಲಿ ಪೂಜೆಯನ್ನೂ ಮಾಡಿರಲಿಲ್ಲ. ನಾನು ಆ ಸ್ಥಳದ ಕಾಮಗಾರಿ ಪರಿಶೀಲನೆ ಮಾಡಿದ್ದಷ್ಟೆ. ಕೇಂದ್ರ ಸರ್ಕಾರದ ಯೋಜನೆಗೆ ರಾಜ್ಯಸರ್ಕಾರ ಯಾವುದೇ ಗೊಂದಲವಿಲ್ಲದ ಸ್ಥಳ ನೀಡಬೇಕು. ಆದರೆ, ಸರ್ಕಾರ ದಿಕ್ಕು ತಪ್ಪಿಸುವ ಕೆಲಸ ಮಾಡಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟಪಡಿಸಿದ್ದಾರೆ. ಈ ವಿಚಾರ ಸದ್ಯ ನ್ಯಾಯಾಲಯದಲ್ಲಿದೆ. ಈ ಹಂತದಲ್ಲಿ ಇದರ ಬಗ್ಗೆ ಹೆಚ್ಚು ಮಾತನಾಡಲ್ಲ ಎಂದರು.

ಸರ್ಕಾರ ಹಣದ ಪರಿಹಾರ ನೀಡಿ ಬಿಕ್ಕಟ್ಟು ನಿವಾರಿಸಿದರೆ ಒಪ್ಪಿಗೆ ಇದೆಯಾ ಎಂಬ ವಿಚಾರ ಕುರಿತು ಪ್ರತಿಕ್ರಿಯಿಸಿ, ಈ ಕುರಿತು ಜನಪ್ರತಿನಿಧಿಯಾಗಿ ಪ್ರಮೋದಾದೇವಿ ಅವರ ಜೊತೆ ಮಾತನಾಡಿರುವೆ. ಮುಂದಿನ ಹಂತದಲ್ಲಿ ಇದರ ಬಗ್ಗೆ ಮತ್ತಷ್ಟು ಚರ್ಚಿಸಿ ಕ್ರಮಕೈಗೊಳ್ಳಲಾಗುವುದು. ಯುನಿಟಿ ಮಾಲ್ ತೆರೆಯಲು ನಮ್ಮ ವಿರೋಧ ಇಲ್ಲ. ಆದರೆ, ಸೂಕ್ತ ಸ್ಥಳ ನೀಡದೆ ಗೊಂದಲ ಮಾಡಿರುವ ರಾಜ್ಯಸರ್ಕಾರವನ್ನ ಪ್ರಶ್ನಿಸುವೆ. ಈ ರೀತಿಯ ಸರ್ಕಾರದ ಯೋಜನೆಗೆ ಖಾಸಗಿ ಜಮೀನು ನೀಡಲೇಬಾರದು. ಆದರೆ, ಈ ರೀತಿ ರಾಜ್ಯ ಸರ್ಕಾರ ಮಾಡಿದ್ದು ಏಕೆ ಎಂಬುದು ಪ್ರಶ್ನೆ. ನಮ್ಮ ಹಾಗೂ ಅಮ್ಮನ ನಡುವೆ ಯಾವುದೇ ಗೊಂದಲ ಎಂಬುದೇ ಅಪ್ರಸ್ತುತ ಎಂದು ಹೇಳಿದರು.



ಪೊಲೀಸರ ಕಾರ್ಯಾಚರಣೆ

# ಇಬ್ಬರ ಬಂಧನ, 17ಲಕ್ಷ ಮೌಲ್ಯದ ಮಾದಕ ವಶ

ಮೈಸೂರು: ನಗರದ ಸಿಸಿಬಿ ಪೊಲೀಸರು ಭರ್ಜರಿ ಕಾರ್ಯಾಚರಣೆ



ನಡೆಸಿ 17ಲಕ್ಷ ರೂ. ಮೌಲ್ಯದ ಹೈಡ್ರೋ ಗಾಂಜಾವನ್ನು ವಶಕ್ಕೆ ಪಡೆದು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯ ನಾಯ್ಡುನಗರದಲ್ಲಿ ಸಿಸಿಬಿ ಪೊಲೀಸರು ಮಾಹಿತಿ ಮೇರೆಗೆ ದಾಳಿ ಮಾಡಿ 17ಲಕ್ಷ ರೂ. ಮೌಲ್ಯದ 176ಗ್ರಾಂ. ಹೈಡ್ರೋ ಗಾಂಜಾ ವಶಕ್ಕೆ ಪಡೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಫ್ತಾಬ್ ಅಲಿ ಬೇಗ್ ಮತ್ತು ಪ್ರತಾಪ್ ಕುಮಾರ್ ಎಂಬುವರರನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಗೆ ಸಂಬಂಧಿಸಿದಂತೆ ಎನ್.ಆರ್.ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯ 1989 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಅಭಿಮಾನದ ಜೊತೆಗೆ ಬದುಕು ಕಟ್ಟಿಕೊಳ್ಳಿ

ಎಚ್.ಡಿ.ಕೋಟೆ: ಇತ್ತೀಚಿನ ಯುವ ಪೀಳಿಗೆ ಹೀರೋಗಳ ಅಭಿಮಾನಿಗಳಾಗುವುದರ ಜೊತೆಗೆ ತಮ್ಮ ಸ್ವಯಂ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ. ನಾಗರಾಜು ಯುವಕರಿಗೆ ಸಲಹೆ ನೀಡಿದರು.

ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳ ವತಿಯಿಂದ ಸರ್ಕಾರಿ ಶಾಲೆಯ ಮಕ್ಕಳಿಗೆ ಪುಸ್ತಕ, ಪೆನ್, ಸಿಹಿ ಹಂಚುವುದರ ಮೂಲಕ ಡೆವಿಲ್ ಚಿತ್ರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿ ಮಾತನಾಡಿ, ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರು ಜೈಲಿನಲ್ಲಿದ್ದರೂ ಕೂಡ ಅಭಿಮಾನಿಗಳು ಡೆವಿಲ್ ಚಿತ್ರ ಯಶಸ್ವಿಯಾಗಲಿ ಎಂದು ಹಲವಾರು ರೀತಿಯ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವುದು ಸಂತೋಷದ ವಿಷಯ ಎಂದರು. ಅಭಿಮಾನ ಒಂದು ಕಡೆಯಾದರೆ ನಮಗೆ ಮೀಸಲಾತಿ



ನೀಡಿದ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಜಗಜೀವನ್ ರಾಮ್ ಅವರ ಜಯಂತಿಗಳನ್ನು ಗ್ರಾಮಗಳಲ್ಲಿ ಆಚ ರಣೆ ಮಾಡಬೇಕು.ಇತ್ತೀಚಿನ ದಿನಗಳಲ್ಲಿ ಯುವಕರು ದಾರಿ ತಪ್ಪುವ ಬದಲು ತಮ್ಮ ಬದುಕು ಕಟ್ಟಿಕೊಳ್ಳಿ ಶಿಕ್ಷಣವನ್ನು ಪಡೆದು ಕೊಂಡು ಸರ್ಕಾರಿ ಉದ್ಯೋಗವನ್ನು ಪಡೆದುಕೊಳ್ಳಬೇಕು ಎಂದು ಯುವಕರಿಗೆ ಸಲಹೆ ನೀಡಿದರು.

ಮುಖಂಡ ಸಿ. ಕಾಳಪ್ಪಾಜಿ ಮಾತನಾಡಿ, ದರ್ಶನ್ ಅವರ ಡೇವಿಲ್ ಚಿತ್ರ ನೂರು ದಿನ ಪೂರೈಸಲಿ ಎಂದು ಅಭಿಮಾನಿಗಳು ದರ್ಶನ್ ಅವರ ಹೆಸರಿನಲ್ಲಿ ಸರ್ಕಾರಿ ಶಾಲೆಗೆ ಪುಸ್ತಕ, ಪೆನ್ ಕೊಡುವುದರ ಮೂಲಕ ಚಿತ್ರದ ಯಶಸ್ವಿಗೆ ಸಾಮಾಜಿಕ ಕೆಲಸವನ್ನು ಮಾಡುತ್ತಿರುವುದು ಸಂತೋಷದ ವಿಷಯ ಚಿತ್ರವು ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು. ಗ್ರಾಮದ ಯಜಮಾನರಾದ ಪುಟ್ಟಸ್ವಾಮಿ, ರಾಮಚಂದ್ರ, ಹನುಮಂತರಾಜು, ಚಂದ್ರ, ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿಗಳಾದ ಸಿದ್ದು, ರಘು, ಹನುಮಂತರಾಜು, ವಿಷಕಂಠ, ಹೇಮಂತ್, ಚೇತು, ಚಂದು, ಸಂತೋಷ್, ಕುಮಾರ್, ಗೋವಿಂದ್ ರಾಜ್, ಮಾದೇಶ್, ಆಕಾಶ, ರವಿನಂದನ್, ಷೇಟು, ಮನು, ಪ್ರೀತು, ಸಂತು ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಗ್ರಾಮದ ಯುವಕರು ಇದ್ದರು.

# ನರೇಗಾ: ನಾಗವಳ್ಳಿ ಗ್ರಾಮಸ್ಥರಿಂದ ಪ್ರತಿಭಟನೆ

ಚಾಮರಾಜನಗರ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕೆಲಸ ನೀಡುವಂತೆ ಒತ್ತಾಯಿಸಿ ನಾಗವಳ್ಳಿ ಗ್ರಾಮಸ್ಥರಿಂದ ಪ್ರತಿಭಟನೆ ನಡೆಸಲಾಯಿತು.

ತಾಲ್ಲೂಕಿನ ನಾಗವಳ್ಳಿ ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಜಮಾಹಿಸಿದ ಪ್ರತಿಭಟನಾಕಾರರು ಪಂಚಾಯಿತಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ 100 ದಿನಗಳವರೆಗೆ ಕೂಲಿ ಕೆಲಸವನ್ನು ನೀಡಬೇಕು. ಈ ಕೂಲಿ ಕೆಲಸದಲ್ಲಿ ತಾರತಮ್ಯ ಮಾಡದೇ ಸರ್ಕಾರದ ಆದೇಶದಂತೆ ಎಲ್ಲರಿಗೂ ಕೆಲಸ ನೀಡಬೇಕು ಇಲ್ಲದಿದ್ದರೆ ಪ್ರತಿಭಟನಾ ಧರಣಿಯನ್ನು ಮುಂದುವರಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಳೆದ 15 ದಿನಗಳ ಹಿಂದೆ ಗ್ರಾಮಸಭೆಯಲ್ಲಿ ನಿರುದ್ಯೋಗಿಗಳಿಗೆ ನರೇಗಾ ಯೋಜನೆಯಡಿ ಕೆಲಸ ಕೊಡುವಂತೆ ಗ್ರಾಮ ಪಂಚಾಯಿತಿಗೆ ಮುಖಂಡರು ಮನವಿ ಸಲ್ಲಿಸಿದ್ದರು. ಗ್ರಾಮ ಪಂಚಾಯಿತಿ ಅಧಿಕಾರಿಗಳು ನರೇಗಾ ಯೋಜನೆಯಡಿ ಯಾವುದೇ ಕಾಮಗಾರಿ ಪ್ರಗತಿಯಲ್ಲಿಲ್ಲ. ಕಾಮಗಾರಿ ಆರಂಭವಾದಾಗ ಕೆಲಸ ಕೊಡುವುದಾಗಿ ಭರವಸೆ



ನೀಡಿದ್ದರು. ಆದರೆ ಇದೀಗ ನರೇಗಾ ಯೋಜನೆಯಡಿ ಕೊಕ್ಕನಹಳ್ಳಿ ಭಾಗದಲ್ಲಿ ಬೇರೆಯವರಿಗೆ ಕೂಲಿ ಕೆಲಸ ನೀಡಿರುವುದನ್ನು ಖಂಡಿಸಿ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು. ನರೇಗಾ ಯೋಜನೆಯಡಿ ಈ ಕೂಡಲೇ ಕೆಲಸವನ್ನು ನೀಡಬೇಕು ಸ್ಥಳಕ್ಕೆ ಮೇಲಾಧಿಕಾರಿಗಳು ಬರಬೇಕು. ಇಲ್ಲದಿದ್ದರೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಬಳಿಕ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕುಮಾರ್ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಕೂಲಿ ಕೆಲಸ ಕೊಡಿಸಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು. ಪ್ರತಿಭಟನೆಯಲ್ಲಿ ಗ್ರಾಮದ ಹಿರಿಯ ಮುಖಂಡರು, ರೈತರು, ಯುವಕರು, ಮಹಿಳೆಯರು ಹಾಗೂ ಇತರರು ಭಾಗವಹಿಸಿದರು.

## ನಾಲ್ವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ನಂತರ ನ್ಯಾಯಾಂಗ ಬಂಧನ

# ಆನೆ ದಂತ ಮಾರಾಟ: ಆರೋಪಿಗಳ ಬಂಧನ

ಕೊಳ್ಳೇಗಾಲ: ಆನೆ ದಂತವನ್ನು ಕಾನೂನು ಬಾಹಿರವಾಗಿ ಸಂಗ್ರಹಿಸಿ ನಂತರ ಅವುಗಳನ್ನು ಮಾರಾಟ ಮಾಡಲು ಯೋಜನೆ ಹಾಕಿಕೊಂಡಿದ್ದ ನಾಲ್ವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೊಳ್ಳೇಗಾಲ ತಾಲ್ಲೂಕಿನ ಮುಳ್ಳೂರು ಗ್ರಾಮದ ನಿವಾಸಿ ವಿನ್ಸನ್ ಹಾಗೂ ಕಲಿಯೂರು ಗ್ರಾಮದ ನಿವಾಸಿ ಡಿ.ವಸಂತ್‌ಕುಮಾರ್ ಹಾಗೂ ಮಾಂಬಳ್ಳಿ ಗ್ರಾಮ ಚೇತನ್‌ಕುಮಾರ್, ಮೈಸೂರಿನ ಅಶೋಕಪುರಂ ನಿವಾಸಿ ನಿತಿನ್‌ಕುಮಾರ್ ಈ ನಾಲ್ವರು ಬಂಧಿತ ಆರೋಪಿಗಳು. ಯಳಂದೂರು ವನ್ಯಜೀವಿ ಉಪವಿಭಾಗ ವ್ಯಾಪ್ತಿಯ ಕೊಳ್ಳೇಗಾಲ ವನ್ಯಜೀವಿ ವಲಯದ ಅಧಿಕಾರಿಗಳಿಗೆ ಸಿಕ್ಕಿದ ಖಚಿತ ಮಾಹಿತಿ ಆಧರಿಸಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ತುರ್ತು ಕಾರ್ಯಾಚರಣೆ ನಡೆಸಿ ಮೊದಲನೇ ಆರೋಪಿಯಾದ ವಿನ್ಸನ್‌ಅನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಆತ ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಎರಡನೇ



ಆರೋಪಿ ಡಿ.ವಸಂತ್‌ಕುಮಾರ್ ಎಂಬಾತನು ತನ್ನ ಮನೆಯಲ್ಲಿ ಬಚ್ಚಿಟ್ಟಿದ್ದ ಎರಡು ಆನೆ ದಂತಗಳನ್ನು ಹಾಗೂ ಮೊಬೈಲ್‌ಗಳನ್ನು ವಶಪಡಿಸಿ ಆತನನ್ನು ಬಂಧಿಸಲಾಯಿತು. ಈ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ ನ್ಯಾಯಾಧೀಶರು ಇವರನ್ನು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದರು. ಕೊಳ್ಳೇಗಾಲ ವನ್ಯಜೀವಿ ವಲಯದ ಆರ್‌ಎಫ್‌ಒ ಬಿ.ಎಸ್.ವಾಸು, ಬೈಲೂರು ವನ್ಯಜೀವಿ ವಲಯದ ಆರ್‌ಎಫ್‌ಒ ಎ.ಪ್ರಮೋದ್, ಉಪವಲಯ ಅರಣ್ಯಾಧಿಕಾರಿ ಜಗದೀಶ್ ಶಿರೂರ, ಅಮರನಾಥ್, ಜೆ.ಎಸ್.ರಘುರಾಮ್, ಗಸ್ತು ಅರಣ್ಯ ಪಾಲಕ ಸುನೀಲ ಬಸಪ್ಪ ಬೆಳವಿ, ಮಹೇಶ, ಬಸವರಾಜ ಹಬ್ಬದ, ಎನ್.ರಾಜು, ವಾಹನ ಚಾಲಕರಾದ ಪರಶಿವ, ಲಿಂಗರಾಜು, ಡಿ.ಬಿ.ಜಯದೇವ, ಸಿಬ್ಬಂದಿ ಆಕಾಶ್ ಸೋಪಾನ ಜೋಷಿ, ಎನ್.ಮಹೇಶ, ಸತೀಶ್ ಕುಮಾರ್, ಸಂತೋಷ್ ಕುಮಾರ್, ಎಸ್. ೦ಸ್ವಾಮಿ, ಮಹೇಶ್‌ಕುಮಾರ್, ಅಮಿತ್ ಮತ್ತಿತರಿದ್ದರು.

# ಡಿ.16ರಂದು ಮಳವಳ್ಳಿಗೆ ರಾಷ್ಟ್ರಪತಿಗಳ ಆಗಮನ

## ಭದ್ರತಾ ವ್ಯವಸ್ಥೆಗಳ ಪರಿಶೀಲನೆ, ಸಿದ್ಧತೆಗಳ ಬಗ್ಗೆ ಎ.ಎಸ್.ಎಲ್ ಸಭೆ



**ಮಂಡ್ಯ:** ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಸುತ್ತೂರಿನ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವ ಯೋಗಿಗಳರವರ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮಕ್ಕೆ ಡಿಸೆಂಬರ್ 16 ರಂದು ಮಳವಳ್ಳಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ದೆಹಲಿಯ ಭದ್ರತಾ ವಿಭಾಗದ ಅಧಿಕಾರಿ ಧನಂಜಯ್ ಕುಮಾರ್, ಕೇಂದ್ರ ಗುಪ್ತಚರ ಅಧಿಕಾರಿಗಳಾದ ವಿಶಾಲ್ ಅವರ ನೇತೃತ್ವದಲ್ಲಿ ಇಂದು ಮಳವಳ್ಳಿ ಪುರಸಭೆ ಸಭಾಂಗಣದಲ್ಲಿ ಎಎಸ್ಎಲ್ ಸಭೆ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ ಕುಮಾರ ಮಳವಳ್ಳಿ ಯಲ್ಲಿ ನಿರ್ಮಾಣ ಮಾಡಿರುವ ಹೆಲಿಪ್ಯಾಡ್ ಸ್ಥಳದಲ್ಲಿ ಗ್ರೀನ್ ರೂಮ್, ಹೆಲಿಪ್ಯಾಡ್ ಸುತ್ತಾ ಬ್ಯಾರಿಕೇಡ್ ನಿರ್ಮಾಣ ಹಾಗೂ ರೆಡ್ ಕಾರ್ಪೆಟ್ ಹಾಕಲು ಅಗತ್ಯ ಕ್ರಮ ಕೈಗೊಳ್ಳಲು ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ರಾಷ್ಟ್ರಪತಿಗಳು ಬರುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಲೋಪದೋಷ ಎದುರಾಗದಂತೆ ನಾನಾ ಇಲಾಖೆಗಳ ಅಧಿಕಾರಿಗಳು ಸಮನ್ವಯತೆ ಸಾಧಿಸಬೇಕು.

ಕಾರ್ಯಕ್ರಮ ಸಂಪೂರ್ಣವಾಗಿ ಮುಗಿಯುವವರೆಗೂ ಎಲ್ಲಿಯೂ ವಿದ್ಯುತ್ ಸಂಪರ್ಕಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸಿಸಿ ಕ್ಯಾಮರಾ ಅಳವಡಿಸಬೇಕು. ಹೆಲಿಪ್ಯಾಡ್ ಮತ್ತು ಕಾರ್ಯಕ್ರಮ ನಡೆಯುವ ಜಾಗಗಳಲ್ಲಿ ಅಗ್ನಿಶಾಮಕ ದಳದ ವಾಹನಗಳು ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು. ಗಣ್ಯರು ಸಂಚರಿಸುವ ಮಾರ್ಗದ ರಸ್ತೆಗಳು ಸ್ವಚ್ಚತೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸುಸಜ್ಜಿತ ಅಂಬ್ಯುಲೆನ್ಸ್ ನೊಂದಿಗೆ ನುರಿತ ಆರೋಗ್ಯ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಬೇಕು. ಉಪಹಾರ, ಕುಡಿಯುವ ನೀರು ಹಾಗೂ ಸ್ನಾಕ್ಸ್ ಗಳನ್ನು ನೀಡುವ ಮೊದಲು ಆಹಾರ ಸುರಕ್ಷತಾ ಅಧಿಕಾರಿಗಳಿಂದ ತಪಾಸಣೆ ಮಾಡಬೇಕು ಎಂದು ಅವರು ತಿಳಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ಯಾವುದೇ ಲೋಪದೋಷ ಆಗದಂತೆ ಪ್ರೋಟೋಕಾಲ್ ನಿಯಮದಂತೆ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ, ಜೆಎಸ್ ಎಸ್ ವಿದ್ಯಾಪೀಠದ ನಿರಂಜನ್ ಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜನೌಷಧಿ ಕೇಂದ್ರಗಳಿಗೆ ಶಕ್ತಿ ತುಂಬಿದ ಕರ್ನಾಟಕ, ಕೇರಳ, ತಮಿಳುನಾಡು!

**ಮಂಗಳೂರು:** ದಕ್ಷಿಣ ರಾಜ್ಯಗಳು ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಯೋಜನೆಯ(ಪಿಎಂಬಿಜೆಪಿ) ಪರಿಣಾಮಕಾರಿಯಾಗಿ ಬೆಳವಣಿಗೆ ಸಾಧಿಸುತ್ತಿದೆ. ಆದರೆ ಇತರ ರಾಜ್ಯಗಳು ಗಮನಾರ್ಹವಾಗಿ ಕಡಿಮೆ ವ್ಯಾಪಾರ ಕಾರ್ಯಕ್ಷಮತೆಯನ್ನು ತೋರಿಸುತ್ತವೆ. ಇದರಿಂದ ಕೈಗೆಟುಕುವ ಜೆನೆರಿಕ್ ಔಷಧಿಗಳ ಲಭ್ಯತೆ ಮತ್ತು ಬಳಕೆಯಲ್ಲಿ ದೇಶದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ಜನೌಷಧಿ ಕೇಂದ್ರ(ಎಂಎ) ಸಾಂದ್ರತೆ ಮತ್ತು ವ್ಯವಹಾರದ ಪ್ರಮಾಣದಲ್ಲಿ ಮುಂಚೂಣಿಯಲ್ಲಿವೆ. ಆದರೆ ಮಧ್ಯಪ್ರದೇಶ ಮತ್ತು ತೆಲಂಗಾಣದಂತಹ ರಾಜ್ಯಗಳು ಜನಸಂಖ್ಯಾ ಅಥವಾ ಆರ್ಥಿಕ ಬಲದ ಹೊರತಾಗಿಯೂ ಹಿಂದುಳಿದಿವೆ.

ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಮಾಹಿತಿಯ ಪ್ರಕಾರ, ದೇಶದ ಒಟ್ಟು 17,610 ಕೇಂದ್ರಗಳಲ್ಲಿ ದಕ್ಷಿಣದ ಐದು ರಾಜ್ಯಗಳು 5,196 ಕೇಂದ್ರಗಳನ್ನು ಹೊಂದಿವೆ. ಇದು ರಾಷ್ಟ್ರೀಯ ಒಟ್ಟು ಮೊತ್ತದ ಸುಮಾರು ಶೇ. 30 ರಷ್ಟಿದೆ ಮತ್ತು ಇತ್ತೀಚಿನ ಹಣಕಾಸು ವರ್ಷದಲ್ಲಿ ದೇಶದ ವ್ಯವಹಾರದ ಪರಿಮಾಣದ ಮೂರನೇ ಒಂದು ಭಾಗದಷ್ಟು ಕೊಡುಗೆ ನೀಡುತ್ತಿವೆ. 1,543 ಕೇಂದ್ರಗಳನ್ನು ಹೊಂದಿರುವ ಕರ್ನಾಟಕ 2020–21ರಲ್ಲಿ 148.56 ಕೋಟಿ ರೂ.ಗಳಿಂದ 2024–25ರಲ್ಲಿ 222.85 ಕೋಟಿ ರೂ. ವಹಿವಾಟು ನಡೆದಿದ್ದು, ಭಾರೀ ಪ್ರಮಾಣದಲ್ಲಿ ಹೆಚ್ಚಳವನ್ನು ತೋರಿಸಿದೆ. ಇದೇ ಅವಧಿಯಲ್ಲಿ ಕೇರಳವು 107.49 ಕೋಟಿ ರೂ.ಗಳಿಂದ 264.37 ಕೋಟಿ ರೂ.ಗಳಿಗೆ ವಿಸ್ತರಿಸಿದೆ. ತಮಿಳುನಾಡು ಸ್ಥಿರವಾದ ಲಾಭವನ್ನು ದಾಖಲಿಸಿದ್ದು, ಮಾರಾಟವು 51.48 ಕೋಟಿ ರೂ.ಗಳಿಂದ 180.35 ಕೋಟಿ ರೂ.ಗಳಿಗೆ ಏರಿದೆ.

ಕಡಿಮೆ ಕಾರ್ಯಕ್ಷಮತೆ ಹೊಂದಿರುವ ದೊಡ್ಡ ರಾಜ್ಯಗಳ ಜೊತೆಗೆ ಹೋಲಿಸಿದಾಗ ಈ ವ್ಯತ್ಯಾಸ ಇನ್ನಷ್ಟು ತೀಕ್ಷ್ಣವಾಗುತ್ತದೆ. 597 ಕೇಂದ್ರಗಳನ್ನು ಹೊಂದಿರುವ ಮಧ್ಯಪ್ರದೇಶವು 2020–21ರಲ್ಲಿ 7.23 ಕೋಟಿ ರೂ.ಗಳಿಂದ 2024–25ರಲ್ಲಿ ಕೇವಲ 2.64 ಕೋಟಿ ರೂ.ಗಳಿಗೆ ಮಾರಾಟ ಕುಸಿದಿದೆ. ದೇಶದಲ್ಲಿ ನಾಲ್ಕನೇ ಅತಿ ಹೆಚ್ಚು ಕೇಂದ್ರಗಳನ್ನು ಹೊಂದಿರುವ ಬಿಹಾರದಲ್ಲಿ ಮಾರಾಟವು 2023–24ರಲ್ಲಿ ಗರಿಷ್ಠ ಮಟ್ಟವನ್ನು ತಲುಪಿತ್ತು. ಆದರೆ 2024–25ರಲ್ಲಿ 6.06 ಕೋಟಿ ರೂ.ಗಳಿಗೆ ಇಳಿಯಿತು. ಇದು ಇಷ್ಟು ದೊಡ್ಡ ಜನಸಂಖ್ಯೆಗೆ ಸಾಧಾರಣ ಅಂಕಿ ಅಂಶವಾಗಿದೆ. ಐದು ವರ್ಷಗಳಲ್ಲಿ ಮಹಾರಾಷ್ಟ್ರವು 8.35 ಕೋಟಿ ರೂ.ಗಳಿಂದ 26.54 ಕೋಟಿ ರೂ.ಗಳಿಗೆ ಬೆಳವಣಿಗೆ ದಾಖಲಿಸಿದೆ.

# ನಾಳೆಯಿಂದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವ ಆರಂಭ




**ಮಂಡ್ಯ:** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1066ನೇ ಜಯಂತಿ ಮಹೋತ್ಸವ ಸಮಿತಿ ವತಿಯಿಂದ ಡಿಸೆಂಬರ್ 15 ರಿಂದ 22 ರವರೆಗೆ ಜಯಂತಿ ಮಹೋತ್ಸವ ನೆರವೇರಲಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಆನಂದ್ ತಾಳಶಾಸನ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜಯಂತಿ ಮಹೋತ್ಸವ ಸುತ್ತೂರಿನ ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣಸ್ವಾಮಿಗಳು ಹಾಗೂ ಶ್ರೀ ಚನ್ನಬಸವಸ್ವಾಮಿಗಳ ದಿವ್ಯ ಸಮ್ಮುಖದಲ್ಲಿ ನೆರವೇರಲಿದ್ದು ಡಿ.15 ರಂದು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವಮೂರ್ತಿ ಸುತ್ತೂರು ಕ್ಷೇತ್ರದಿಂದ ಬೆಳಕವಾಡಿ ಮಾರ್ಗವಾಗಿ ಮಳವಳ್ಳಿಯನ್ನು ತಲುಪಿದ ನಂತರ ಪ್ರವಾಸಿ ಮಂದಿರದ ಬಳಿಯಿಂದ ಮಂಗಳವಾದ್ಯ ಹಾಗೂ ಜನಪದ ಕಲಾತಂಡಗಳೊಂದಿಗೆ ಶ್ರೀ ಷಡಕ್ಷರ ದೇವ ಅನುಭವಮಂಟಪಕ್ಕೆ ಕರೆತರಲಾಗುವುದು. ಡಿಸೆಂಬರ್ 16 ರಂದು ಧ್ವಜಾರೋಹಣ ವೇದಿಕೆ ಹಾಗೂ ದ್ವಾರಗಳ ಉದ್ಘಾಟನೆ ನೆರವೇರಲಿದ್ದು, ಮಧ್ಯಾಹ್ನ 3.15 ಕ್ಕೆ ಭಾರತದ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ರವರು ಜಯಂತಿ ಮಹೋತ್ಸವ ಉದ್ಘಾಟಿಸಲಿದ್ದಾರೆ. ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋತ್ ಅಧ್ಯಕ್ಷತೆ ವಹಿಸಲಿದ್ದು, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ವಿಶೇಷ ಆಹ್ವಾನಿತರಾಗಿ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಳವಳ್ಳಿ ಕ್ಷೇತ್ರದ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಭಾಗವಹಿಸುವರು. ಸಂಜೆ 5 ಕ್ಕೆ ಸಾವಯವ ಕೃಷಿ ಸಿರಿಧಾನ್ಯ ಮತ್ತು ಉತ್ಪನ್ನಗಳ ಬಗ್ಗೆ ಆರ್ಗ್ ಟ್ರೀ ಸಿಇಓ ಬಿ.ಮಹೇಶ್ ಉಪನ್ಯಾಸ ನಿಡುವರು ತಿಂಗಳಿ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿ ಅಧ್ಯಕ್ಷತೆ ವಹಿಸುವರು

ಡಿ.17 ರ ಸಂಜೆ 6:00 ಗಂಟೆಗೆ ಸ್ವಾಮಿ ಶ್ರೀ ಮಹಾಂತ ಸ್ವಾಮಿ, ಜ್ಞಾನಪ್ರಕಾಶ ಸ್ವಾಮಿ, ಶಿವಾನಂದಪುರಿಸ್ವಾಮಿ ಗಳ ಸಮ್ಮುಖದಲ್ಲಿ ಲೋಕಪಾಲ್ ಸದಸ್ಯರಾದ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಸ್ತು ಪ್ರದರ್ಶನ ಉದ್ಘಾಟನೆ ಮಾಡುವರು. ಮಾಜಿ ಶಾಸಕ ಕೆ.ಅನ್ನದಾನಿ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ಖ್ಯಾತ ಚಲನಚಿತ್ರ ಕಲಾವಿದ ಶಿವರಾಜಕುಮಾರ್ ವಿಚಾರ ಲಹರಿ ಕೃತಿ ಬಿಡುಗಡೆ ಮಾಡಿದರೆ,ವಿಧಾನ ಪರಿಷತ್ ಮಾಜಿ ಉಪ ಸಭಾಪತಿ ಶ್ರೀ ಶಿವರಾತ್ರಿಶ್ವರ ಪಂಚಾಂಗ ಬಿಡುಗಡೆ ಮಾಡುವರು. ನಂತರ ಭಾರತೀಯ ಸಂಸ್ಕೃತಿಯ ಮೌಲ್ಯಗಳು ಕುರಿತು ಸಂಪಾದಕ ವಿಶ್ವೇಶ್ವರ ಭಟ್ ಉಪನ್ಯಾಸ ನೀಡಲಿದ್ದಾರೆ.

ಇದೇ ರೀತಿ ಪ್ರತಿದಿನ ಹಲವು ಸ್ವಾಮೀಜಿಗಳು ಮತ್ತು ಗಣ್ಯರ ಸಮ್ಮುಖದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು ಡಿಸೆಂಬರ್ 21 ರ ಭಾನುವಾರ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರೋಪ ಭಾಷಣ ಮಾಡುವರು. ಕೇಂದ್ರ ಕಾರ್ಮಿಕ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಲವು ಸಚಿವರು ಮತ್ತು ಶಾಸಕರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ವಿವಿಧ ದಿನಗಳ ಕಾರ್ಯಕ್ರಮಗಳಲ್ಲಿ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿ, ಡಾ.ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿ, ಸೌಮ್ಯನಾಥಸ್ವಾಮಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮುಮ್ಮಡಿ ಶಿವರುದ್ರ ಸ್ವಾಮೀಜಿ,ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥಸ್ವಾಮೀಜಿ, ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್,ಗೃಹ ಸಚಿವ ಡಾ.ಜಿ.ಪರಮೇಶ್ವರ್, ಲೋಕಸಭಾ ಸದಸ್ಯರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ಸಿ.ಎನ್.ಮಂಜುನಾಥ್, ಸಚಿವರುಗಳಾದ ಹೆಚ್.ಸಿ.ಮಹದೇವಪ್ಪ ಈಶ್ವರ್ ಬಿ ಖಂಡ್ರೆ, ಲಕ್ಷ್ಮಿ ಹೆಬ್ಬಾಳ್ಕರ್, ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕರುಗಳಾದ ಕೆ.ಎಂ.ಉದಯ್, ಹೆಚ್.ಟಿ.ಮಂಜು ರವಿಕುಮಾರ್ ಗಣಿಗ, ಮಧು ಜಿ ಮಾದೇಗೌಡ, ಕೆ.ವಿವೇಕಾನಂದ ಸೇರಿದಂತೆ ಹಲವು ಮಾಜಿ ಸಚಿವರು,ಮಾಜಿ ಶಾಸಕರು, ಚಲನಚಿತ್ರ ಕಲಾವಿದರು ಭಾಗವಹಿಸಲಿದ್ದಾರೆ ಎಂದರು. ಪ್ರತಿದಿನ ಸಂಜೆ ಖ್ಯಾತ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ನಾಟಕ ಪ್ರದರ್ಶನಗಳು ನಡೆಯಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ವಿವಿಧ ತಾಲ್ಲೂಕು ಅಧ್ಯಕ್ಷರುಗಳಾದ ಬುಳ್ಳಪ್ಪ, ಶಿವಕುಮಾರ್, ನಾಗರಾಜು, ನಂಜುಂಡಸ್ವಾಮಿ ಹಾಜರಿದ್ದರು.

# ‘ದೇವಸ್ಥಾನಗಳು ಪ್ರತಿಯೊಬ್ಬರಿಗೂ ನೆಮ್ಮದಿ ಕೇಂದ್ರಗಳು’



**ಕೆ.ಆರ್.ನಗರ:** ದೇವಸ್ಥಾನಗಳು ಪ್ರತಿಯೊಬ್ಬರಿಗೂ ಕೂಡ ನೆಮ್ಮದಿ ಕೇಂದ್ರಗಳಾಗಿವೆ ಎಂದು ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ ಹೇಳಿದರು.

ಅವರು ತಾಲೂಕಿನ ಎಲೆಮುದ್ದನಹಳ್ಳಿ ಗ್ರಾಮದಲ್ಲಿ ಶ್ರೀ ಮಾಸ್ತಮ್ಮ ಮತ್ತು ಶ್ರೀ ಲಕ್ಷ್ಮಿ ದೇವಿ ಪ್ರತಿಷ್ಠಾಪನ ಮಹೋತ್ಸವ ಹಾಗೂ ನೂತನ ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಗ್ರಾಮಾಂತರ ಪ್ರದೇಶದ ಜನರು ದೇವಸ್ಥಾನಗಳ ನಿರ್ಮಾಣ ಕಾರ್ಯಕ್ಕೆ ಅತಿ ಹೆಚ್ಚು ಗಮನ ಹರಿಸುತ್ತಿರುವುದು ಎಲ್ಲೆಡೆ ಕಂಡುಬರುತ್ತಿದೆ. ಎಲ್ಲರೂ ಒಟ್ಟಾಗಿ ಸೇರಿ ದೇವರ ಕಾರ್ಯವನ್ನು ಮಾಡುವುದರಿಂದ ಪ್ರತಿಯೊಬ್ಬರಲ್ಲೂ ಪರಸ್ಪರ ಪ್ರೀತಿ, ವಿಶ್ವಾಸ, ಸಹಬಾಳ್ವೆ, ನಂಬಿಕೆ ಮೂಡಲು ಪ್ರಮುಖ ಕಾರಣವಾಗುತ್ತದೆ ಎಂದರು. ದೇವಾಲಯವನ್ನು ನಿರ್ಮಾಣ ಮಾಡುವುದು ಎಷ್ಟು ಮುಖ್ಯವೋ ಆ ದೇವಸ್ಥಾನದಲ್ಲಿ ಪ್ರತಿನಿತ್ಯ ಪೂಜಾ ಕಾರ್ಯಗಳನ್ನು ಮಾಡುವುದು ಅದಕ್ಕಿಂತ ಶ್ರೇಷ್ಠವಾದದ್ದು ಎಂದರು. ದೇವಸ್ಥಾನವನ್ನು ಸಮಿತಿಯವರು ತುಂಬಾ ಉತ್ತಮ ರೀತಿಯಲ್ಲಿ ನಿರ್ಮಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯಗಳು, ಅಭಿಷೇಕಗಳು, ಹೋಮಹವನಗಳು ನಡೆದು ಮಹಾಮಂಗಳಾರತಿಯನ್ನು ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗವನ್ನು ಮಾಡಲಾಯಿತು.

ಸಾಲಿಗ್ರಾಮ, ಕೆ.ಆರ್.ನಗರ, ಅರಕಲಗೂಡು, ಕೆ.ಆರ್.ಪೇಟೆ ತಾಲೂಕುಗಳಿಂದ ಆಗಮಿಸಿದ್ದ ದೇವರ ಕುಲದವರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು ದೇವಾಲಯದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ದೇವತಾ ಕಾರ್ಯದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ತಳಿರು ತೋರಣಗಳನ್ನು ಕಟ್ಟಿ, ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಭಕ್ತರುಗಳಿಗೆ ಅನ್ನ ಸಂತರ್ಪಣ ಕಾರ್ಯವನ್ನು ಮಾಡಲಾಯಿತು.

ದೇವತಾ ಕಾರ್ಯದಲ್ಲಿ ಮೂಡ ಮಾಜಿ ಅಧ್ಯಕ್ಷ ಎಚ್.ಎನ್.ವಿಜಯ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಜಿ.ಪಂ.ಮಾಜಿ ಸದಸ್ಯ ಎಂ.ಟಿ.ಕುಮಾರ್, ಮೂಳೆರೋಗ ತಜ್ಞ ವೈದ್ಯ ಡಾ.ಸಾ.ರಾ.ಧನುಷ್, ಮೈಸೂರು ಗ್ರಾಜುಯೇಟ್ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಜಗದೀಶ್, ಬೆಂಗಳೂರು ಮಾತಾಜಿ, ಮುಖಂಡರುಗಳಾದ ಸಂಕನಹಳ್ಳಿ ಗ್ರಾಮದ ಹೋಟೆಲ್ ನಂಜಪ್ಪ, ಎಸ್.ಎನ್. ಮೋಹನ, ಎಸ್.ಎನ್.ಮಹೇಂದ್ರ, ವಾಸು, ಎಸ್.ಬಿ.ಆನಂದ, ಯೋಗೇಶ್, ಎಸ್.ಎನ್. ಚಂದ್ರ, ರಂಗಶೆಟ್ಟಿ, ಉದಯ್, ಸತೀಶ್, ನಿವೃತ್ತ ಉಪನ್ಯಾಸಕ ನಂಜಪ್ಪ, ನಿವೃತ್ತ ಶಿಕ್ಷಕ ಕಾಳಪ್ಪಶೆಟ್ಟಿ, ಎಸ್.ಎನ್.ಸಿದ್ದಪ್ಪ, ಪಟೇಲ್ ರಾಜಪ್ಪ, ಎಲೆಮುದ್ದನಹಳ್ಳಿಯ

ಎಂ.ಎನ್.ರೇವಣ್ಣ, ಆನಂದ್, ಎಂ.ವಿ.ಲಿಂಗಪ್ಪ, ನಿವೃತ್ತ ಶಿಕ್ಷಕ ಗಂಗಾಧರಪ್ಪ, ರಮೇಶ್, ಲೋಕಶೆಟ್ಟಿ, ರಾಜಶೆಟ್ಟಿ, ಮಂಜುಶೆಟ್ಟಿ, ಹೊಸಅಗ್ರಹಾರದ ಅಣ್ಣಯ್ಯಶೆಟ್ಟಿ, ರಾಜಶೆಟ್ಟಿ, ದಡದಹಳ್ಳಿಯ ಶಾಂತಮ್ಮ, ಅಕ್ಕಿಹೆಬ್ಬಾಳು ರಮೇಶ್, ಕಾಂತರಾಜು, ಕಾನನಕೊಪ್ಪಲಿನ ಹನುಮಂತಶೆಟ್ಟಿ, ಬಸವರಾಜು, ಪ್ರಾಂಶುಪಾಲ ಕೃಷ್ಣಶೆಟ್ಟಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಧರ್ಮಾಧಿಕಾರಿಯು ದೇವಮಾನವರಾಗಿದ್ದಾರೆ: ಲೇಖಕ ಲಕ್ಷ್ಮೀಶ ತೋಳ್ಪಾಡಿ



**ಮೈಸೂರು:** ಯಾರನ್ನು ಬೇಕಾದರೂ ಕೊಂಡುಕೊಳ್ಳಬಲ್ಲೆ, ದುಡ್ಡಿನಿಂದ ಏನನ್ನೂ ಬೇಕಾದರೂ ಸಾಧಿಸಬಹುದು ಎಂದು ತಿಳಿದಿದ್ದರಿಂದಲೇ ಧರ್ಮಾಧಿಕಾರಿಯು ದೇವಮಾನವರಾಗಿದ್ದಾರೆ ಎಂದು ಲೇಖಕ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಸಮಾನ ಮನಸ್ಕರ ವೇದಿಕೆಯಿಂದ ಶನಿವಾರ ಧರ್ಮಸ್ಥಳ ಪ್ರಕರಣ ಒಂದು ಸಾಮಾಜಿಕ ಅವಲೋಕನ (ಭೂ ಹಗರಣ ಮತ್ತು ದೌರ್ಜನ್ಯಗಳು) ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು. ಅವರ ಈ ನಡೆಯನ್ನು ಸರಿಯಾಗಿ ಅರಿತದ್ದರಿಂದಲೇ ಪ್ರಧಾನಿಯು ರಾಜಕೀಯ ಸ್ಥಾನಮಾನವನ್ನೂ ನೀಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಅಧರ್ಮವನ್ನೇ ಧರ್ಮವೆಂದು ನಂಬಿಸುವ ದೇವಮಾನವರನ್ನು ವಿರೋಧಿಸುವ ಶಕ್ತಿಯನ್ನು ನಾಗರಿಕ ಸಮಾಜ ತೋರಬೇಕು. ಇಂದು ಕಾನೂನಿರುವುದು ಬಡವರಿಗೆ ಪಾಲಿಸಲು, ಶ್ರೀಮಂತರಿಗೆ ಉಲ್ಲಂಘಿಸಲು ಎಂಬಂತಾಗಿದೆ. ಧರ್ಮಸ್ಥಳದಲ್ಲಿ ನಡೆದಿರುವ ಕರ್ಮಕಾಂಡದ ಬಗ್ಗೆ ಯಾರಿಗೂ ಗೊತ್ತಿಲ್ಲದೇ ಇಲ್ಲ. ಆದರೂ ಗೊತ್ತಿಲ್ಲದಂತೆ ಎಲ್ಲರೂ ಇದ್ದಾರೆ. ದಕ್ಷಿಣ ಕನ್ನಡದಲ್ಲಿ ಪ್ರತಿಯೊಬ್ಬರೂ ತಿಳಿದಿದ್ದೂ ಸುಮ್ಮನಿದ್ದಾರೆ. ತಾಂತ್ರಿಕವಾಗಿ ಕಾನೂನಿನಿಂದ ತಪ್ಪಿಸಿಕೊಂಡ ಮಾತ್ರಕ್ಕೆ ಸಮಾವು ಮೌನವಾಗುವುದು ಸರಿಯೇ ಎಂದು ಪ್ರಶ್ನಿಸಿದರು.

ಈ ದೇವಮಾನವನೆಂಬ ನಾಶದ ಬೀಜವನ್ನು ಇಂದು ಧರ್ಮ, ಸಂಸ್ಕೃತಿ, ನಾಗರಿಕತೆ ಹೊತ್ತುಕೊಂಡಿದೆ. ಸಮಾಜದಲ್ಲಿ ನೊಂದವರು, ಅನ್ಯಾಯಕ್ಕೆ ಒಳಗಾದವರ ಸಂತೈಸಬೇಕಿದ್ದ ಧರ್ಮದ ಹೆಸರಿನಲ್ಲಿಯೇ ಅನಾಚಾರಗಳು ನಡೆಯುತ್ತಿವೆ. ಇದರಿಂದ ಭೂಮಿ ಕಳೆದುಕೊಂಡವರು, ಸತ್ತವರು, ನೊಂದವರು ಏನು ಮಾಡಬೇಕು. ಸೌಜನ್ಯಳದ್ದು ಪವಿತ್ರ ಸಾವು ಎನ್ನಲಾಗುತ್ತಿದೆ. ಇಂತಹ ಸಂಸ್ಕೃತಿ ನಾಶವಾಗದೇ ಹೊಸ ಸಂಸ್ಕೃತಿ ಹುಟ್ಟಲು ಸಾಧ್ಯವಿಲ್ಲ ಎಂಬುದು ಖಚಿತ ಎಂದರು.

ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್ ಅಧ್ಯಕ್ಷ ಸೋಮನಾಥ್ ನಾಯಕ್ ಮಾತನಾಡಿ, ಟಿಪ್ಪು ಸುಲ್ತಾನ್ ವಿರುದ್ಧ ಬ್ರಿಟಿಷರಿಗೆ ಸಹಕರಿಸಿ ಧರ್ಮಸ್ಥಳ ದೇವಸ್ಥಾನದ ಆಡಳಿತ ಪಡೆಯಲಾಗಿದೆ. ದೇವಸ್ಥಾನ, ಸುತ್ತಮುತ್ತಲಿನ ಜಾಗವನ್ನು ಖಾಸಗಿ ಆಸ್ತಿ ಎಂದು ಘೋಷಿಸಿಕೊಂಡು ವಾರ್ಷಿಕ ಸುಮಾರು 500 ಕೋಟಿ ಆದಾಯವಿದ್ದರೂ ತೆರಿಗೆ ನೀಡದೇ ಸರ್ಕಾರವನ್ನು ವಂಚಿಸಲಾಗಿದೆ. ದಲಿತರಿಗೆ ದೊರೆಯಬೇಕಿದ್ದ ಭೂಮಿಯನ್ನೂ ಕಬಳಿಸಲಾಗಿದೆ. ನಮ್ಮ ಆರೋಪಗಳಿಗೆ ದಾಖಲೆಯಿದ್ದು ಬಹಿರಂಗ ಚರ್ಚೆಗೂ ಸಿದ್ಧ. ಅವರಂತೂ ಉತ್ತರಿಸಿಲ್ಲ, ಜನರಾದರೂ ಎಚ್ಚೆತ್ತುಕೊಳ್ಳಲಿ ಎಂದರು.

ವಿಚಾರ ಸಂಕಿರಣಕ್ಕೆ ಕರ್ನಾಟಕ ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಪಿಯುಸಿಎಲ್, ಒಡನಾಡಿ ಸೇವಾ ಸಂಸ್ಥೆ, ಅಖಿಲ ಭಾರತ ಪ್ರಗತಿಪರ ಮಹಿಳಾ ಒಕ್ಕೂಟ, ಡೀಡ್ ಸಂಸ್ಥೆ ಹುಣಸೂರು, ಧ್ವನಿ ಮಹಿಳಾ ಒಕ್ಕೂಟ, ಮೈಸೂರು ಕೊಳಚೆ ನಿವಾಸಿಗಳ ಒಕ್ಕೂಟ, ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಕಾಲೇಜು ವಿದ್ಯಾರ್ಥಿ ಸಂಘಟನೆ, ಪ್ರಗತಿಪರ ಸಂಘಟನೆಗಳು ಸಹಯೋಗ ನೀಡಿದ್ದವು.

ಟ್ರಸ್ಟ್‌ನ ರಂಜನ್ ರಾವ್, ಸಾಮಾಜಿಕ ಹೋರಾಟಗಾರ ವಿಷ್ಣುಮೂರ್ತಿ, ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಬೆಟ್ಟಯ್ಯ ಕೋಟೆ, ಕರ್ನಾಟಕ ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು, ವಿಶ್ರಾಂತ ಕುಲಪತಿ ಸಬೀಹಾ ಭೂಮಿಗೌಡ, ಪ್ರೊ.ಕಾಳಚನ್ನೇಗೌಡ, ಒಡನಾಡಿ ಸಂಸ್ಥೆಯ ನಿರ್ದೇಶಕರಾದ ಸ್ಟ್ಯಾನ್ಲಿ, ಪರುಶು ಹಾಜರಿದ್ದರು.

# ಮೈಸೂರಿನಲ್ಲಿ ಅದ್ಧೂರಿ ಹನುಮ ಜಯಂತಿ





**ಮೈಸೂರು:** ಎಲ್ಲೆಡೆ ಕೇಸರಿ ಶಾಲು ಹನುಮನಿಗೆ ಜೈಕಾರ ಮತ್ತೊಂದೆಡೆ ಶಾಸಕರೂ ಸೇರಿ ಗಣ್ಯರ ಭರ್ಜರಿ ಕುಣಿತದೊಂದಿಗೆ ಹನುಮನ ಮೂರ್ತಿಗಳ ಮೆರವಣಿಗೆ ಅದ್ಧೂರಿಯಾಗಿ ಸಾಗುವ ಮೂಲಕ ಎಲ್ಲರ ಆಕರ್ಷಿಸಿತು.

ಮೈಸೂರು ಹನುಮಂತೋತ್ಸವ ಸಮಿತಿಯಿಂದ ಆಯೋಜಿಸಿದ್ದ ಹನುಮ ಜಯಂತಿ 7ನೇ ವರ್ಷದ ಜಯಂತಿ ಅಂಗವಾಗಿ ಆಯೋಜಿಸಿದ್ದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡ ಪೂಜೆ ಸಲ್ಲಿಸಿ ಹಾಗೂ ನಂದಿ ಧ್ವಜ ಕಂಬಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಬಳಿಕ ಭಕ್ತರೊಡನೇ ತಾವು ಸಹ ಕುಣಿದು ಹೆಜ್ಜೆಹಾಕಿ ಸಂಭ್ರಮಿಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಸಾಂಸ್ಕೃತಿಕ ನಗರಿಯಲ್ಲಿ ಸಂಜಯ್ ತಂಡ ಅದ್ಧೂರಿ, ಭಕ್ತಿ ಹಾಗೂ ವಿಶೇಷವಾಗಿ ಹನುಮನ ಉತ್ಸವವನ್ನು ಆಚರಿಸುತ್ತಿದ್ದಾರೆ. ಶ್ರೀರಾಮನ ಭಕ್ತ ಆಂಜನೇಯನಾಗಿದ್ದು, ರಾಮನ ಪಟ್ಟಾಭಿಷೇಕ ಮಾಡಲು ತನ್ನ ಶಕ್ತಿಯನ್ನು ತೋರಿದ್ದಾನೆಂಬುದು ಜಗತ್ತಿಗೆ ಗೊತ್ತಿದೆ.

> ಆಳಂದ ಮತಗಳ್ಳತನ ವಿಚಾರವಾಗಿ ಪ್ರತಿಕ್ರಿಯಿಸಿ, ಒಂದು ಗಾದೆ ಇದೆ ಹುಚ್ಚು ಬಿಡೋ ತನಕ ಮದುವೆ ಆಗಲ್ಲ, ಮದುವೆ ಆಗೋ ತನಕ ಹುಚ್ಚು ಬಿಡಲ್ಲ ಅಂತ. ಇದೇ ರೀತಿ ರಾಹುಲ್ ಗಾಂಧಿ ಪ್ರಧಾನಿ ಆಗೋವರೆಗೂ ಇಂಥ ಹುಚ್ಚು ಬಿಡಲ್ಲ.
>
> –ಪ್ರತಾಪಸಿಂಹ ಮಾಜಿ ಸಂಸದ

ಅಂತಹ ಆಂಜನೇಯನ ಜಯಂತೋತ್ಸವ ನಡೆಯುತ್ತಿರುವುದು ಸಂತಸದ ಸಂಗತಿ ಎಂದರು.

ಮಾಜಿ ಸಂಸದ ಪ್ರತಾಪಸಿಂಹ ಮಾತನಾಡಿ, ಹಿಂದುತ್ವ ಹೆಸರು ಬಂದಾಗ ಮುನ್ನಲೆಗೆ ಬರುವ ಹೆಸರು ಸಂಜಯ್ ಆಗಿದ್ದಾರೆ. ಭಕ್ತಿ, ನಿಷ್ಠೆಗೆ ಹೆಸರಾದ ಹನುಮಂತ ನಮ್ಮೆಲ್ಲರಲ್ಲೂ ರಾಷ್ಟ್ರಪ್ರೇಮವನ್ನು ಬೆಳಸಬೇಕು. ಮೈಸೂರಿನಲ್ಲಿ ಕುಸ್ತಿ ಪೈಲ್ವಾನರ ಸಂಖ್ಯೆ ಹೆಚ್ಚಾಗಿದೆ. ಭಕ್ತ ಪೈಲ್ವಾನ್ ಆಗಿದ್ದರೆ ದೇವರು ಹನುಮನೇ ಆಗಿರುತ್ತಾನೆ. ಅಂತಹ ಹನುಮಂತೋತ್ಸವವನ್ನು

> ಸಿಎಂ ಬದಲಾವಣೆ ವಿಚಾರ ನಿಮ್ಮ, ನಮ್ಮ ಕೈನಲ್ಲಿ ಇಲ್ಲ. ಅಧಿವೇಶನ ಸಂಧರ್ಭದಲ್ಲಿ ಇಂತಹ ಚರ್ಚೆ ಒಳ್ಳೆಯ ಬೆಳವಣಿಗೆ ಅಲ್ಲ. ಅಧಿವೇಶನ ನಡೆಸೋದು ರಾಜ್ಯದ ಅಭಿವೃದ್ಧಿಗಾಗಿ. ಅಧಿವೇಶನದಲ್ಲಿ ಅಧಿಕಾರ ಹಂಚಿಕೆ ಚರ್ಚೆ ಬಿಟ್ಟು ರಾಜ್ಯದ ಅಭಿವೃದ್ಧಿ ಬಗ್ಗೆ ಚರ್ಚೆ ಆಗಲಿ. ಎಲ್ಲಾ 224 ಶಾಸಕರೂ ಒಗ್ಗಟ್ಟಾಗಿ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ. ನಾನು ಬೇರೆ ಬೇರೆ ಕಾರಣಗಳಿಂದ ಅಧಿವೇಶನದಲ್ಲಿ ಭಾಗಿಯಾಗಿಲ್ಲ.
>
> -ಜಿ.ಟಿ.ದೇವೇಗೌಡ, ಶಾಸಕ

ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಹಿಂದೂಗಳ ಪವಿತ್ರ ದೇವರಲ್ಲಿ ಒಬ್ಬನು ಹನುಮನಾಗಿದ್ದಾನೆ. ಅಂತಹ ಮಹಾನ್ ಶಕ್ತಿಯ ಮೆರವಣಿಗೆ ಮಾಡುತ್ತಿರುವುದು ಶ್ಲಾಘನೀಯ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ಸೇರಿ ಅನೇಕರು ಉಪಸ್ಥಿತರಿದ್ದರು. ಮೈಸೂರು ಅರಮನೆಯ ಉತ್ತರ ದ್ವಾರದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಬೃಹತ್ ಮೆರವಣಿಗೆಯ ಶೋಭಾಯಾತ್ರೆ ಪ್ರಾರಂಭವಾಯಿತು. ಗುತ್ತದೆ. ಈ ಮೆರವಣಿಗೆಯಲ್ಲಿ ಸಾವಿರಾರು ಭಕ್ತರು "ಜೈ ಶ್ರೀ ರಾಮ್" ಮತ್ತು "ಜೈ ಹನುಮಾನ್" ಎಂದು ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಮೆರವಣಿಗೆಯು ಅಶೋಕ ರಸ್ತೆ, ಇರ್ವಿನ್ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಕೆ.ಆರ್. ಸರ್ಕಲ್, ಡಿ.ಡಿ. ಅರಸ್ ರಸ್ತೆ ಮತ್ತು ಚಾಮರಾಜ ಡಬಲ್ ರಸ್ತೆಯಂತಹ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ಗನ್‌ಹೌಸ್ ವೃತ್ತದ ಬಳಿ ಕೊನೆಗೊಂಡಿತು. ಮೆರವಣಿಗೆಯಲ್ಲಿ ಹನುಮಾನ್, ದತ್ತಾತ್ರೇಯ ಮತ್ತು ಭಾರತ ಮಾತೆ ಸೇರಿದಂತೆ ವಿವಿಧ ದೇವಾನುದೇವತೆಗಳ

# ಎಚ್–1ಬಿ ವೀಸಾ ಶುಲ್ಕ ಪ್ರಶ್ನಿಸಿ 19 ರಾಜ್ಯಗಳಿಂದ ಮೊಕದ್ದಮೆ: ಟ್ರಂಪ್‌ಗೆ ಹಿನ್ನಡೆ



**ವಾಷಿಂಗ್ಟನ್:** 13–ಎಚ್–1ಬಿ ವೀಸಾಗಳ ಮೇಲಿನ $100,000 ಶುಲ್ಕ ಹೆಚ್ಚಳಕ್ಕೆ ಸಂಬಂಧಿಸಿದಂತೆ ಟ್ರಂಪ್ ಆಡಳಿತದ ವಿರುದ್ಧ ಅಮೆರಿಕದ ಹತ್ತೊಂಬತ್ತು ರಾಜ್ಯಗಳು ಫೆಡರಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿವೆ. ಈ ನೀತಿಯು ಕಾನೂನನ್ನು ಉಲ್ಲಂಘಿಸುತ್ತದೆ ಮತ್ತು ಶಿಕ್ಷಣ, ಆರೋಗ್ಯ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಅಗತ್ಯ ನೇಮಕಾತಿಗಳಿಗೆ ಹಾನಿ ಮಾಡುತ್ತದೆ ಎಂದು ಅವರು ಆರೋಪಿಸಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ ಪ್ರಾರಂಭದೊಂದಿಗೆ, ಅವರ ಆಡಳಿತದ ನೀತಿಗಳು ಮತ್ತೊಮ್ಮೆ ಕಾನೂನು ಪರಿಶೀಲನೆಗೆ ಒಳಪಟ್ಟಿವೆ. ಈ ಬಾರಿ, ವಿವಾದದ ಕೇಂದ್ರಬಿಂದು ಎಚ್–1ಬಿ ವೀಸಾಗಳಿಗೆ ಸಂಬಂಧಿಸಿದ ಹೊಸ ವಲಸೆ ನೀತಿಯಾಗಿದ್ದು, ಅದರ ಅಡಿಯಲ್ಲಿ ಶುಲ್ಕವನ್ನು $100,000 ಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ಹತ್ತೊಂಬತ್ತು ಯುಎಸ್ ರಾಜ್ಯಗಳು ಒಗ್ಗೂಡಿ ಈ ನಿರ್ಧಾರದ ವಿರುದ್ಧ ನ್ಯಾಯಾಲಯಕ್ಕೆ ಹೋಗಲು ನಿರ್ಧರಿಸಿವೆ. ಇದು ಟ್ರಂಪ್ ಆಡಳಿತಕ್ಕೆ ತೊಂದರೆ ತಂದೊಡ್ಡಿದೆ.

ಈ ಮೊಕದ್ದಮೆಯಲ್ಲಿ ಕ್ಯಾಲಿಫೋರ್ನಿಯಾ, ಮ್ಯಾಸಚೂಸೆಟ್ಸ್, ಅರಿಜೋನಾ, ಕೊಲೊರಾಡೋ, ಕನೆಕ್ಟಿಕಟ್, ಡೆಲವೇರ್, ಹವಾಯಿ, ಇಲಿನಾಯ್ಸ್, ಮೇರಿಲ್ಯಾಂಡ್, ಮಿಚಿಗನ್, ಮಿನ್ನೇಸೋಟ, ನೆವಾಡಾ, ನಾರ್ತ್ ಕೆರೊಲಿನಾ, ನ್ಯೂಜೆರ್ಸಿ, ನ್ಯೂಯಾರ್ಕ್, ಒರೆಗಾನ್, ರೋಡ್ ಐಲ್ಯಾಂಡ್, ವರ್ಮೊಂಟ್, ವಾಷಿಂಗ್ಟನ್ ಮತ್ತು ವಿಸ್ಕಾನ್ಸಿನ್ ಸೇರಿವೆ. ಈ ಕಾನೂನು ಹೋರಾಟವು ಟ್ರಂಪ್ ಆಡಳಿತದ ವಲಸೆ ನೀತಿಯ ದಿಕ್ಕನ್ನು ರೂಪಿಸುವುದಲ್ಲದೆ, ಯುನೈಟೆಡ್ ಸ್ಟೇಟ್ಸ್‌ನಲ್ಲಿ ಕೌಶಲ್ಯಪೂರ್ಣ ವಿದೇಶಿ ಕಾರ್ಮಿಕರ ಭವಿಷ್ಯದ ಪಾತ್ರದ ಮೇಲೆ ಆಳವಾದ ಪರಿಣಾಮ ಬೀರಬಹುದು ಎನ್ನಲಾಗಿದೆ. ಹತ್ತೊಂಬತ್ತು ಡೆಮಾಕ್ರಟಿಕ್ ಆಡಳಿತದ ರಾಜ್ಯಗಳು ಟ್ರಂಪ್ ಆಡಳಿತವು ಈ ಸುಂಕ ಹೆಚ್ಚಳವನ್ನು ವಿಧಿಸುತ್ತಿದೆ ಎಂದು ಆರೋಪಿಸಿವೆ, ಅವು ಕಾನೂನುಬಾಹಿರ ಮಾತ್ರವಲ್ಲದೆ ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸಂಶೋಧನೆಯಂತಹ ನಿರ್ಣಾಯಕ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಿವೆ. ಎಚ್–1ಬಿ ವೀಸಾ ಕಾರ್ಯಕ್ರಮವು ಅಮೇರಿಕನ್ ಉದ್ಯೋಗದಾತರಿಗೆ ತಂತ್ರಜ್ಞಾನ, ವೈದ್ಯಕೀಯ, ಶಿಕ್ಷಣ ಮತ್ತು ಸಂಶೋಧನೆಯ ಬೆನ್ನೆಲುಬಾಗಿ ಪರಿಗಣಿಸಲಾದ ವಿಶೇಷ ಉದ್ಯೋಗಗಳಲ್ಲಿ ವಿದೇಶಿ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಕ್ಯಾಲಿಫೋರ್ನಿಯಾದ ಅಟಾರ್ನಿ ಜನರಲ್ ರಾಬ್ ಬಂಟಾ ಈ ನಿರ್ಧಾರವನ್ನು ಕಾನೂನುಬಾಹಿರ ಎಂದು ಕರೆದಿದ್ದಾರೆ ಹೊಸ $100,000 ಶುಲ್ಕವು ಶಿಕ್ಷಕರು, ವೈದ್ಯರು, ದಾದಿಯರು, ಸಂಶೋಧಕರು ಮತ್ತು ಇತರ ಅಗತ್ಯ ಕೆಲಸಗಾರರ ನೇಮಕಾತಿಗೆ ಅಡ್ಡಿಯಾಗುತ್ತದೆ ಎಂದು ಹೇಳಿದ್ದಾರೆ.

ಅವರ ಪ್ರಕಾರ, ಶುಲ್ಕವು ಸಾರ್ವಜನಿಕ ಮತ್ತು ಸರ್ಕಾರಿ ಸಂಸ್ಥೆಗಳಿಗೆ ದುಬಾರಿ ತಡೆಗೋಡೆಯಾಗಬಹುದು, ಇದು ಅಗತ್ಯ ಸೇವೆಗಳ ವಿತರಣೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಬಂಟಾ ಕಚೇರಿ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಈ ನೀತಿಯು ಉದ್ಯೋಗದಾತರ ಮೇಲೆ ಅನ್ಯಾಯದ ಆರ್ಥಿಕ ಹೊರೆಯನ್ನು ಹೇರುತ್ತದೆ ಎಂದು ಹೇಳಲಾಗಿದೆ.

ರಾಬ್ ಬಂಟಾ ಅವರು ಯಾವುದೇ ಅಧ್ಯಕ್ಷರು ಶಾಲೆಗಳು, ಆಸ್ಪತ್ರೆಗಳು ಮತ್ತು ವಿಶ್ವವಿದ್ಯಾಲಯಗಳನ್ನು ಅಸ್ಥಿರಗೊಳಿಸಲು ಅಥವಾ ಸಂವಿಧಾನ, ಕಾಂಗ್ರೆಸ್ ಅಥವಾ ಕಾನೂನನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಸಾಕಷ್ಟು ಅಧ್ಯಯನ ಮತ್ತು ಪರಿಣಾಮದ ಮೌಲ್ಯಮಾಪನವಿಲ್ಲದೆ, ವಿಶೇಷವಾಗಿ ಲಾಭರಹಿತ ಮತ್ತು ಸರ್ಕಾರಿ ಸಂಸ್ಥೆಗಳ ಮೇಲೆ ಅದರ ಪ್ರಭಾವವಿಲ್ಲದೆ ನೀತಿಯನ್ನು ಜಾರಿಗೆ ತರಲಾಗಿದೆ ಎಂದು ರಾಜ್ಯಗಳು ಆರೋಪಿಸಿವೆ.

# ಯಾರು ಕಾರಣ!

ನನಗೆ ಎಷ್ಟೋ ಸಲ ಅನಿಸುತ್ತದೆ, ವೃದ್ಧಾಶ್ರಮ ಹುಟ್ಟಲು ವಾತ್ಸಲ್ಯಮಯಿ ತಾಯಿ ಎನಿಸಿಕೊಂಡ ಹೆಣ್ಣು ಮಕ್ಕಳೇ ಕಾರಣ ಎಂದು! ಅದಕ್ಕೆ ಕಾರಣ ಏನೇ ಇರಲಿ ಸರಿಯಿರಲಿ,ತಪ್ಪಿರಲಿ ಆದರೆ ಅದಕ್ಕೆ ಕಾರಣ ಹೆಣ್ಣು!

ಇಲ್ಲಿ ನಿಜ ಹೇಳಿದರೆ ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವ ಅಪವಾದ ಖಂಡಿತಾ ಬರುತ್ತದೆ!??

ಆದರೂ ನಿಜವಾಗಿಯೂ ಹೇಳಬೇಕೆಂದರೆ ಹೆಣ್ಣಿಗೆ ಹೆಣ್ಣೇ ಶತ್ರು! ಇದು ಪ್ರತಿಶತ ನೂರಕ್ಕೆ ನೂರು ಸತ್ಯ ! ಏಕೆಂದರೆ ಹಿರಿಯ ವಯಸ್ಸಿನ ಅತ್ತೆ ಸೊಸೆಯನ್ನು ಮಗಳಂತೆ ಕಾಣುವುದಿಲ್ಲ, ಎಳೆತನ ಹೊಂದಿದ ಸೊಸೆ ಅತ್ತೆಯನ್ನು ತಾಯಿಯಂತೆ ಭಾವಿಸುವುದಿಲ್ಲ ಹೀಗಾಗಿ ಸಂಬಂಧಗಳು ಭಾರವಾಗಿ ಮನೆಯಲ್ಲಿ ಮೌನ ಸಮರ ಸೃಷ್ಟಿಯಾಗಿ ಹೇರಳವಾಗಿ ವೃದ್ಧಾಶ್ರಮ ತೆರೆದುಕೊಂಡಿವೆ!



ಮೊದಲೆಲ್ಲ ವೃದ್ಧಾಶ್ರಮಕ್ಕೆ ಹೋಗಲು ಅತ್ತೆ, ಸೊಸೆಯರ ವಿರಸವೇ ಜಾಸ್ತಿ ಕಾರಣವಾಗಿತ್ತು, ಆದರೆ ಈಗ ಹಾಗಲ್ಲ, ಮಕ್ಕಳ ಸ್ವಭಾವ ಕಾರಣವಾಗಿದೆ, ಇಲ್ಲಿ ಹೆಣ್ಣು, ಗಂಡು ಎನ್ನುವ ಬೇಧ ಭಾವವೇ ಇಲ್ಲ!

ತಾಯಿಗೂ ಕೂಡ ತನ್ನ ಮಕ್ಕಳ ಸ್ವಭಾವ ಹೊಂದಿಕೆಯಿಲ್ಲ, ಮಗಳಿಗೆ ತಾಯಿಯ ಗುಣ ಇಷ್ಟವಾಗುವುದಿಲ್ಲ, ಇಲ್ಲೂ ಎರಡೂ ಕಡೆಯೂ ಹೆಣ್ಣೇ ಕಾರಣ! ಇನ್ನು ಈಗೀನ ಮಕ್ಕಳಿಗೆ ಸಮಯದ ಅಭಾವ ಅದರ ಜೊತೆಗೆ ಅಡುಗೆ, ಕೆಲಸ ಮಾಡಲು ಸೋಮಾರಿತನ, ಅತಿಯಾದ ಅಶಿಸ್ತು ಜೀವನದ ಪದ್ಧತಿ ಹೀಗೆ ನಾನಾ ಕಾರಣಗಳು!

ತಮಗೆ ತಾವೇ ಸರಿಯಾಗಿ ಅಡುಗೆ ಮಾಡಿ, ಶಿಸ್ತುನ್ನು ಕಾಪಾಡಿಕೊಳ್ಳದವರು ಪಾಲಕರನ್ನು ನೋಡಿಕೊಳ್ಳುವುದಂತೂ ಕಷ್ಟಸಾಧ್ಯದ ಮಾತು! ಏಕೆಂದರೆ ಹಿರಿಯರಿಗೆ ಸಮಯ ಕೊಟ್ಟು ಅವರ ಕೆಲಸದಲ್ಲಿ ಸಹಾಯ ಮಾಡುವುದೇ ಇಲ್ಲಿ ಮುಖ್ಯ! ಕಿರಿಯರ ಆಹಾರ ಪದ್ದತಿಗೆ ಅನುಗುಣವಾಗಿ ಅವರು ಜೊತೆಗೆ ಇರುವುದು ಹಿರಿಯರಿಗೆ ಇತ್ತೀಚೆಗೆ ಅಸಾಧ್ಯವೆನಿಸಿದೆ!

ಇನ್ನು ಪರದೇಶದಲ್ಲಿದ್ದರಂತೂ ಮುಗಿಯಿತು, ಪಾಲಕರ ಜೀವನ ಯಾವಾಗಲೂ ವಾಟ್ಸಾಪ್ ವೀಡಿಯೋ ಕಾಲ್ ನಲ್ಲಿಯೇ ಮುಗಿದುಹೋಗುತ್ತದೆ !


ಆದರೆ ಒಂದು ಮಾತಂತೂ ಸತ್ಯ ಅತ್ತೆ ಸರಿಯಿರುವುದಿಲ್ಲವೋ ಅಥವಾ ಸೊಸೆ ಸರಿಯಿರುವುದಿಲ್ಲವೋ ಅಥವಾ ಮಗಳಿಗೆ ಪಾಲಕರ ಜವಾಬ್ದಾರಿ ಬೇಕಾಗುವುದಿಲ್ಲವೋ ಗೊತ್ತಿಲ್ಲ, ಆದರೆ ಹಿರಿಯರು ವೃದ್ಧಾಶ್ರಮ ಸೇರಲು ಹೆಣ್ಣೇ ಕಾರಣ ಎನ್ನುವುದಂತೂ ಅಪ್ಪಟ ಸತ್ಯ! ಇದರಲ್ಲಿ ಗಂಡಸರ ಪಾಲುಗಾರಿಕೆ ನೂರಕ್ಕೆ ಶೇಕಡಾ ಹತ್ತರಷ್ಟು ಮಾತ್ರ!

ಮನೆಯ ಎಲ್ಲಾ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸಾಧ್ಯವಿಲ್ಲದ ಗಂಡು ಆ ಸಮಯದಲ್ಲಿ ಒಬ್ಬ ಅಸಾಹಯಕ ವ್ಯಕ್ತಿ!


ಹೊರಗೆ ದುಡಿದು ಬೇಕಾದಷ್ಟು ಗಳಿಸುವ ಗಂಡು ಮನೆಯ ಪ್ರತಿಯೊಂದು ಜವಾಬ್ದಾರಿ ನಿರಂತರವಾಗಿ ವಹಿಸಿಕೊಂಡು ಹೋಗುವುದು ತುಂಬಾ ಕಷ್ಟ, ತಾತ್ಕಾಲಿಕವಾಗಿ ಮಾತ್ರ ಹರಸಾಹಸಪಟ್ಟು ಸ್ವಲ್ಪ ದಿನದ ಮಟ್ಟಿಗೆ ಸಾಧ್ಯವಾಗಿಸಬಲ್ಲ !

ಏಕೆಂದರೆ ಪ್ರತಿ ಮನೆಯಲ್ಲೂ ಮನೆಯ ಆಡಳಿತ ವಹಿಸಿಕೊಳ್ಳುವ ಅತ್ತೆ, ಸೊಸೆ, ತಾಯಿ,ಮಗಳು, ಅತ್ತಿಗೆ, ನಾದಿನಿ,ಓರಗಿತ್ತಿ, ಹೀಗೆ ನಾನಾ ರೀತಿಯ ಹೆಸರಿಟ್ಟುಕೊಂಡ ಹೆಣ್ಣುಮಕ್ಕಳೇ ಪ್ರತಿ ಕುಟುಂಬದ ಜೀವಾಳ ಹಾಗು ಮುಖ್ಯಪಾತ್ರಧಾರಿಗಳು!

ಹೀಗಾಗಿ ಕನ್ನಡದ ನೇರ ನುಡಿಯಿಂದ ಕರೆಯಿಸಿಕೊಳ್ಳುವ ವೃದ್ಧಾಶ್ರಮ ಈಗ ಇಂಗ್ಲೀಷ್ ಭಾಷೆಯ "ಸೀನಿಯರ್ ಸಿಟಿಜನ್" ಅಪಾರ್ಟ್ಮೆಂಟ್ ಗಳೆಂದು ಸ್ವೀಟಾಗಿ ಕರೆಯಿಸಿಕೊಳ್ಳುತ್ತಿವೆ! ಮಕ್ಕಳ ವೈಯಕ್ತಿಕ ಜೀವನದಲ್ಲಿ ಧಕ್ಕೆ ಬಾರದಂತೆ ಇರಲು ಪಾಲಕರು ಈ ನಡುವೆ ಸೂಕ್ಷ್ಮವಾಗಿ ತಿಳಿದು ತಾವಾಗಿಯೇ "ಸೀನಿಯರ್ ಸಿಟಿಜನ್" ಅಪಾರ್ಟ್ಮೆಂಟ್ ಮೊರೆ ಹೋಗುತ್ತಿದ್ದಾರೆ ಕೂಡ!



ಸ್ನೇಹಾ ಆನಂದ್



# ಅದ್ಭುತ ಕಾಯಕ ಜೀವಿ ನುಲಿಯ ಚಂದಯ್ಯ

ಕಾಯಕದಲ್ಲಿ ನಿರತನಾದಡೆ ಲಿಂಗ ಪೂಜೆಯನ್ನು ಮರೆಯಬೇಕು, ಗುರು ಜಂಗಮರ ಮರೆಯಬೇಕು ಎಂಬ ವಾಣಿಯಂತೆ ನಡೆಯುತ್ತಿದ್ದ ಪ್ರಖರ ಕಾಯಕ ನಿಷ್ಠೆಯುಳ್ಳವನು ಚಂದಯ್ಯ ಎಂಬ ಮನುಷ್ಯ. ಕಾಡಿನಿಂದ, ಹಳ್ಳದ ದಂಡೆಯಿಂದ ಹುಲ್ಲನ್ನು ತಂದು ಅದನ್ನು ಕೊಳೆ ಹಾಕಿ ನಾರನ್ನು ತೆಗೆದು ತೊಳೆದು ಹೊಸೆದು ಹಗ್ಗ, ಮಗಡ,ಮಿಣಿ,ಹುರಿ ಮುಂತಾದ ಒಕ್ಕಲುತನಕ್ಕೆ ಬೇಕಾಗುವ ವಸ್ತುಗಳನ್ನು ತಯಾರಿಸುವುದು ಆತನ ಕುಲಕಸುಬು.ಅಪ್ಪಟ ಲಿಂಗ ಭಕ್ತನಾದ ಆತ ಮಡಿವಾಳ ಮಾಚಿದೇವರ ಪರಮ ಆಪ್ತ. ಅಂತೆಯೇ ಶರಣ ಸಂಕುಲದಲ್ಲಿ ಒಂದಾಗಲೆಂದು ಬಸವಕಲ್ಯಾಣಕ್ಕೆ ಬಂದು ನೆಲೆಸಿದ ಆತ ತನ್ನ ಕಾಯಕದಲ್ಲಿ ನಿಷ್ಠೆ ಹೊಂದಿದವನಾಗಿ, ತೃಪ್ತ ಜೀವನವನ್ನು ನಡೆಸುತ್ತಿದ್ದನು.

ಆ ದಿನ ಮುಂಜಾನೆ ನಿತ್ಯ ವಿಧಿಗಳನ್ನು ಪೂರೈಸಿ. ಆಹಾರ ಸೇವಿಸಿದ ನಂತರ ತನ್ನ ಕಾಯಕಕ್ಕೆ ತೆರಳಿದ ಚಂದಯ್ಯ. ಹುಲ್ಲಿನಿಂದ ನಾರನ್ನು ಬೇರ್ಪಡಿಸಿ ದೊಡ್ಡದಾದ ಪಾತ್ರಗಳಲ್ಲಿ ಕೊಳೆ ಹಾಕುವಾಗ ಆತನ ಕೊರಳಲ್ಲಿ ಕಟ್ಟಿಕೊಂಡಿದ್ದ ಲಿಂಗವು ಆತನನ್ನು ಪರೀಕ್ಷಿಸಲೋಸುಗವೇ ಆತನ ಕೊರಳಿಂದ ಕಳಚಿ ದೊಡ್ಡ ಪಾತ್ರದಲ್ಲಿ ಬಿದ್ದುಬಿಟ್ಟಿತು. ಕೆಲ ನಿಮಿಷಗಳ ಕಾಲ ಅದನ್ನು ಹುಡುಕಾಡಿದ ಚಂದಯ್ಯನಿಗೆ ಲಿಂಗ ಸಿಗಲಿಲ್ಲ. ಇದೀಗ ಸಂದಿಗ್ಧದ ಪರಿಸ್ಥಿತಿ ಚಂದಯ್ಯನದು. ಲಿಂಗವನ್ನು ಹುಡುಕುವುದು ಮುಖ್ಯವೋ, ಕಾಯಕ ಮುಖ್ಯವೋ ಎಂಬ ಪ್ರಶ್ನೆ ಮೂಡಿದಾಗ ಪರಮ ಕಾಯಕಜೀವಿಯಾದ ಆತನಿಗೆ ಲಿಂಗವೇ ಮುಖ್ಯ ನಿಜ, ಆದರೆ ಲಿಂಗಕ್ಕಿಂತಲೂ ಕಾಯಕ ಹೆಚ್ಚು ಮುಖ್ಯವೆನಿಸಿತು. ಅಂತೆಯೇ ತನ್ನ ಕೆಲಸದಲ್ಲಿ ನಿರತನಾದ ಚಂದಯ್ಯ.

ಕೆಲಸದೆಡೆಗಿನ ಆತನ ಶ್ರದ್ದೆ ಅನನ್ಯವಾದದು. ಅದೆಷ್ಟೇ ಹೊತ್ತಾದರೂ ತನ್ನ ಕೆಲಸದಿಂದ ವಿಮುಖನಾಗದ ಚಂದಯ್ಯನನ್ನು ಕಂಡು ಲಿಂಗದೇವರು ಆಶ್ಚರ್ಯ ಚಕಿತರಾದರು. ತನ್ನೆಲ್ಲಾ ಕೆಲಸಗಳನ್ನು ಪೂರೈಸಿ, ಹಗ್ಗಕ್ಕೆ ಬೇಕಾಗುವ ನಾರನ್ನು ತನ್ನ ಹೆಗಲ ಮೇಲೆ ಹೊತ್ತು ಮನೆಯತ್ತ ಹೊರಟ ಚಂದಯ್ಯ.

ಭಕ್ತರಿಗೆ ದೇವರು ಬೇಕು ನಿಜ... ಆದರೆ ದೇವರಿಗೂ ಕೂಡ ಭಕ್ತರು ಬೇಕು.ಭಕ್ತರ ಸಾನಿಧ್ಯದಲ್ಲಿ ಇದ್ದರೆ ಮಾತ್ರ ಶಾಂತಿ, ಸಮಾಧಾನ ಮತ್ತು ತೃಪ್ತಿಯ ಭಾವ. ಚಂದಯ್ಯ ತನ್ನನ್ನು ಮರಳಿ ತೆಗೆದುಕೊಳ್ಳದೆ ಮನೆಯತ್ತ ತೆರಳುತ್ತಿರುವುದನ್ನು ಕಂಡು ಲಿಂಗದೇವರು ಮನುಷ್ಯರೂಪಿಯಾಗಿ ಆತನ ಹಿಂದೆ ಓಡೋಡುತ್ತಾ ಬಂದು, ಚಂದಯ್ಯ ನನ್ನನ್ನು ಬಿಟ್ಟು ಹೊರಟು ಹೋಗಬೇಡ, ನನ್ನನ್ನು ಮತ್ತೆ ನಿನ್ನ ಕೊರಳಲ್ಲಿ ಕಟ್ಟಿಕೋ ಎಂದು ಒತ್ತಾಯಿಸಿದನು. ಆದರೆ ಚಂದಯ್ಯ ಅದನ್ನು ಒಪ್ಪದೇ ನಿನಗೇನು ಕಡಿಮೆ ಮಾಡಿದ್ದೆ, ಶ್ರದ್ಧ ಭಕ್ತಿಯಿಂದ ಪೂಜಿಸುತ್ತಿರಲಿಲ್ಲವೇ ನೀನಾಗಿಯೇ ಕೊರಳಿಂದ ಬಿಚ್ಚಿ ಹೋದ ಮೇಲೆ, ಕಾಯಕವನ್ನು ಬಿಟ್ಟು ನಿನ್ನನ್ನು ಹುಡುಕಬೇಕೇ ಎಂದು ಪ್ರಶ್ನಿಸಿ ತನ್ನ ಪಾಡಿಗೆ ತಾನು ಹೊರಟನು. ಆದರೂ ಮನುಷ್ಯರೂಪಿ ಲಿಂಗಯ್ಯನು ಚಂದಯ್ಯನ ಉತ್ತರೀಯವನ್ನು ಹಿಡಿದುಕೊಂಡು,ತನ್ನನ್ನುಮತ್ತೆಕೊರಳಲ್ಲಿ ಕಟ್ಟಿಕೊಳ್ಳುವಂತೆ ಗೋಗರೆಯುತ್ತಾ ಆತನನ್ನು ಹಿಂಬಾಲಿಸಿದನು.

ಕಾಯಕದಲ್ಲಿ ನಿರತನಾದೊಡೆ
ಗುರುದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ಬಿಡಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು

ಎಂದು ಉತ್ತರಿಸಿ ಮುಂದೆ ಚಂದಯ್ಯ... ಹಿಂದೆ ಮನುಷ್ಯರೂಪಿ ಲಿಂಗಯ್ಯ ಹೊರಟರು. ಹೊಳೆಯ ದಂಡೆಯಲ್ಲಿ ಬಟ್ಟೆಗಳನ್ನು ಮಡಿ ಮಾಡುತ್ತಿದ್ದ ಮಡಿವಾಳ ಮಾಚಿದೇವರನ್ನು ಕಂಡ ಲಿಂಗಯ್ಯ ಚಂದಯ್ಯ ತನ್ನನ್ನು ಕಟ್ಟಿಕೊಳ್ಳದಿರುವುದನ್ನು ಕುರಿತು ದೂರು ಹೇಳಿದರು. ಪರಿಸ್ಥಿತಿಯನ್ನು ಅರಿತ ಮಾಚಿದೇವರು ಚಂದಯ್ಯನ ಮನವೊಲಿಸಿ, ಲಿಂಗಯ್ಯನನ್ನು ತನ್ನೊಡನೆ ಕರೆದೊಯ್ಯುವಂತೆ ಹೇಳಿದರು. ಅದಕ್ಕೆ ಒಪ್ಪಿದ ಚಂದಯ್ಯ ಲಿಂಗಯ್ಯನನ್ನು ತನ್ನ ಮನೆ ಮಗನಾಗಿ ಶರತ್ತಿನೊಂದಿಗೆ ಮತ್ತೆ ಕರೆ ತಂದನು. ಚಂದಯ್ಯನ ಷರತ್ತಿನ ಪ್ರಕಾರ ಪ್ರತಿದಿನವೂ ಚಂದಯ್ಯ ತಯಾರಿಸಿದ ಹಗ್ಗದ ಮಿಣಿಗಳನ್ನು ಲಿಂಗಯ್ಯ ಮಾರಿಕೊಂಡು ಬರಬೇಕು.



ಮರುದಿನ ಮುಂಜಾನೆ ಚಂದಯ್ಯ ಹಗ್ಗದ ಮಿಣಿಗಳನ್ನು ಲಿಂಗಯ್ಯನಿಗೆ ಒಪ್ಪಿಸಿ ಮಾರಿ ಬರಲು ಕಳುಹಿಸಿದನು. ಲಿಂಗಯ್ಯ ನೇರವಾಗಿ ಬಸವಣ್ಣನವರ ಮನೆಗೆ ಹೋಗಿ ಚಂದಯ್ಯನವರು ಕಳುಹಿಸಿರುವುದಾಗಿ ಹೇಳಿ ಹಗ್ಗವನ್ನು ನೀಡಿದನು. ಚಂದಯ್ಯನವರ ಹೆಸರನ್ನು ಕೇಳುತ್ತಲೇ ಬಸವಣ್ಣನವರು ಹಗ್ಗದ ಗುಣಮಟ್ಟವನ್ನು ಪರೀಕ್ಷಿಸದೆ (ವಾಸ್ತವದಲ್ಲಿ ಚಂದಯ್ಯನು ಹುರಿಗಟ್ಟಿದ, ಗಂಟಾದ ಹಗ್ಗವನ್ನು ಕೊಟ್ಟು ಕಳುಹಿಸಿದ್ದರು) ಹೊನ್ನ ನಾಣ್ಯಗಳನ್ನು ನೀಡಿದರು. ಒಂದು ಹಗ್ಗದ ತುಂಡಿಗೆ ಒಂದು ಹಾಗ (ಅಂದಿನ ನಾಣ್ಯ) ಮಾತ್ರ ಬೆಲೆಯಿದ್ದ ಹಗ್ಗಕ್ಕೆ ಚಿನ್ನದ ನಾಣ್ಯಗಳನ್ನು ಪಡೆದು ಬಂದ ಲಿಂಗಯ್ಯನನ್ನು ಕಾಯಕ ನಿಷ್ಠರಾದ ಚಂದಯ್ಯ ನಿಂದಿಸಿದರು.

ಉಪೇಕ್ಷಿತ ವಚನಕಾರರು

ಕೊರಮ ಜಾತಿಗೆ ಸೇರಿದ ನುಲಿಯ ಚಂದಯ್ಯ ಬಿಜಾಪುರ ಜಿಲ್ಲೆಯ ಶಿವಣಗಿ ಗ್ರಾಮದಲ್ಲಿ ಹುಟ್ಟಿದವನು.

ಈತನ ಕಾಲ ಮಾನ 1107 ರಿಂದ 1177. ಚಂದೇಶ್ವರ ಲಿಂಗ ಎಂಬ ಅಂಕಿತನಾಮದಲ್ಲಿ ಈತ ಬರೆದ ಸುಮಾರು 48ಕ್ಕೂ ಹೆಚ್ಚು ವಚನಗಳು ದೊರಕಿವೆ.

ಬಸವಣ್ಣನವರ ಪ್ರಭಾವ ವಲಯದ ಕಾಂತಿ ಶಕ್ತಿಯಿಂದ ತನ್ನೂರನ್ನು ತೊರೆದ ಚಂದಯ್ಯ ಬಸವಕಲ್ಯಾಣದಲ್ಲಿ ತನ್ನ ಕುಲಕಸುಬಾದ ಹಗ್ಗ ತಯಾರಿಸುವ ನುಲಿಯ ವೃತ್ತಿಯನ್ನು ಕೈಗೊಂಡು ಅಲ್ಲಿಗೆ ಉಳಿದುಕೊಂಡನು. ಅಸೀಮ ಕಾಯಕನಿಷ್ಠೆಯ ಚಂದಯ್ಯ ಅನುಭವ ಮಂಟಪದಲ್ಲಿ ಮಡಿವಾಳ ಮಾಚಿದೇವರಿಗೆ ಅತ್ಯಂತ ಆಪ್ತನಾಗಿದ್ದು ಇವರೀವ9ರು ಒಬ್ಬರಿಗೊಬ್ಬರು ಉದ್ದೇಶಿಸಿ ಬರೆದಂತಹ ವಚನಗಳು ಲಭ್ಯವಾಗಿವೆ.

ಮುಂದೆ ಕಲ್ಯಾಣದ ಕ್ರಾಂತಿಯಾದ ನಂತರ ವಚನ ಸಂಪತ್ತನ್ನು ಉಳಿಸುವ ಮಹಾಮಣಿಹದಲ್ಲಿ ಚನ್ನಬಸವಣ್ಣ ಮತ್ತು ಅಕ್ಕನಾಗಮ್ಮನವರ ಸಾರಥ್ಯದಲ್ಲಿ

ಕುಳವಿಯತ್ತ ನಡೆದ ಚಂದಯ್ಯ ಚನ್ನಬಸವಣ್ಣನವರ ಅಕಾಲ ಮರಣದ ನಂತರ ಅಕ್ಕ ನಾಗಮ್ಮನಿಗೆ ಬೆಂಗಾವಲಾಗಿ ನಿಂತರು.

ನುಲಿಯ ಚಂದಯ್ಯನವರ, ಇಡೀ ವಚನಗಳನ್ನು ಓದಿದಾಗ ಗುರು –ಲಿಂಗ–ಜಂಗಮ ಮತ್ತು ಕಾಯಕ ? ದಾಸೋಹ ಎನ್ನುವ ಅಂಶಗಳ ಬಗ್ಗೆ ಆಳವಾದ ಒಳಹುಗಳು ತಿಳಿಯುತ್ತದೆ. ತಾನು ಕಾಯಕ ನಿರತನಾಗಿ ಪ್ರತಿನಿತ್ಯದ ಅನ್ನವನ್ನು ತಾನೇ ದುಡಿದು ತಿನ್ನಬೇಕು ಎನ್ನುವ ಕಾಯಕ ಸಿದ್ಧಾಂತ ಅವರದಾಗಿತ್ತು. ಅದು ಆತನ ಇಷ್ಟದೈವ ಚಂದೇಶ್ವರ ಲಿಂಗಕ್ಕೆ ಒಪ್ಪುವುದು ಎಂದು ಚಂದಯ್ಯ ನಂಬಿದ್ದರು

ಕಾಯಕ ಮತ್ತು ದಾಸೋಹದ ಮೂಲಕ ಸಮಾಜಕ್ಕೆ ಬೆಳಕು ನೀಡಿದವರಲ್ಲಿ ನುಲಿಯ ಚಂದಯ್ಯರೂ ಒಬ್ಬರು, ಕಾಯಕ ದಾಸೋಹಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಇಷ್ಟಲಿಂಗದಲ್ಲಿ ಅತ್ಮೋನ್ನತಿ ಕಂಡುಕೊಂಡರು.

ಕಲ್ಯಾಣ ಕ್ರಾಂತಿಯ ನಂತರ ಅಕ್ಕ ನಾಗಮ್ಮ ಮತ್ತು ಚೆನ್ನಬಸವಣ್ಣನವರೊಡನೆ ನುಲಿಯ ಚಂದಯ್ಯ ಉಳಿವಿಗೆ ಬರುತ್ತಾರೆ. ಚೆನ್ನಬಸವಣ್ಣ ಲಿಂಗೈಕ್ಯರಾದ ನಂತರ ಅನೇಕ ಶಿವಶರಣರು ವಿವಿಧೆಡೆಗೆ ವಚನ ಸಂಪತ್ತನ್ನು ಪ್ರಚಾರ ಮಾಡಲು ಹಂಚಿಹೋಗುತ್ತಾರೆ. ಆಗ ಬಸವಣ್ಣನವರ ಸಹೋದರಿ ಅಕ್ಕ ನಾಗಮ್ಮರೊಂದಿಗೆ ಚಂದಯ್ಯನವರು ಕಾಯಕ ಧರ್ಮ ಪ್ರಚಾರ ಮಾಡುತ್ತಾ ಉಳವಿ, ಶಿವಮೊಗ್ಗ, ಎಣ್ಣೆಹೊಳೆ, ನಂದಿಗ್ರಾಮ, ಶಾಂತಿಸಾಗರ, ಬೆಂಕಿಕೆರೆ, ಇತರೆಡೆಗಳಲ್ಲಿ ಸಂಚರಿಸಿ ಹೊಳಲ್ಕೆರೆ ತಾಲ್ಲೂಕು ದುಮ್ಮಿ ಗ್ರಾಮಕ್ಕೆ ಬರುತ್ತಾರೆ. ಅಲ್ಲಿಯೇ ಎತ್ತಿನ ಹೊಳೆತೀರದಲ್ಲಿ ಅಕ್ಕ ನಾಗಮ್ಮ ಲಿಂಗೈಕ್ಯಳಾಗುತ್ತಾರೆ. ದುಮ್ಮಿ ಗ್ರಾಮದ ದುಮ್ಮಣ್ಣ ನಾಯಕನ ಪತ್ನಿ ಪದ್ಮಾವತಿಯು ಚಂದಯ್ಯನವರ ವಿಚಾರಧಾರೆಯನ್ನು ಮೆಚ್ಚಿ ಲಿಂಗದೀಕ್ಷೆ ಪಡೆಯುತ್ತಾಳೆ. ಅರಮನೆಯಲ್ಲಿ ಆಶ್ರಯ ನೀಡುತ್ತಾಳೆ. ಆದರೆ ಚಂದಯ್ಯನವರಿಗೆ ಅರಮನೆಯ ವಾತಾವರಣ ತನ್ನ ಕಾಯಕ ಧರ್ಮ ಮುಂದುವರಿಸಲು ಒಗ್ಗದ ಕಾರಣ ಆ ಆಶ್ರಯವನ್ನು ನಿರಾಕರಿಸುತ್ತಾರೆ. ನಂತರ ಆಕೆ ತನ್ನ ತವರೂರು ಪದ್ಮಾವತಿ ಪಟ್ಟಣದ ಕೆರೆಯ ದಡದಲ್ಲಿ ಶಿಲಾ ಮಂಟಪ ನಿರ್ಮಿಸಿ ನಿತ್ಯ ಕಾಯಕ ಮತ್ತು ದಾಸೋಹ ಮಾಡಲು ಕೇಳಿಕೊಳ್ಳುತ್ತಾಳೆ.

ಕೆರೆಯ ನೀರಿನ ಬಳಕೆಯ ವಿಷಯದಲ್ಲಿ ಕೆಲವರು ವಿರೋಧವನ್ನು ಮಾಡುತ್ತಾರೆ. ಆಗ ನುಲಿಯ ಚಂದಯ್ಯ ತನ್ನ ಊರುಗೋಲಿನಿಂದ ನೆಲವನ್ನು ಕುಕ್ಕುತ್ತಾರೆ. ಅಲ್ಲಿ ನೀರಿನ ಚಿಲುಮೆ ಏಳುತ್ತದೆ. ಅಲ್ಲಿ ಒಂದು ಬಾವಿಯನ್ನು ನಿರ್ಮಿಸಿ ಆ ನೀರನ್ನು ಚಂದಯ್ಯನವರು ತನ್ನ ಕಾಯಕಕ್ಕೆ ಬಳಸಿಕೊಳ್ಳುತ್ತಾರೆ. ಇದನ್ನು ?ಚಂದಯ್ಯನ ಬಾವಿ? ಎಂದು ಕರೆಯುತ್ತಾರೆ. ಆ ಬಾವಿ ಈಗಲೂ ಆ ಗ್ರಾಮದಲ್ಲಿದೆ.

ನುಲಿಯ ಚಂದಯ್ಯ ತನ್ನ ಜೀವನದ ಕೊನೆಯ ದಿನಗಳವರೆಗೂ ಈ ಊರಲ್ಲೇ ನೆಲೆಸುತ್ತಾರೆ. ನುಲಿಯ ಚಂದಯ್ಯ ಬಾಳಿ ಬದುಕಿ ಲಿಂಗೈಕ್ಯರಾದ್ದರಿಂದ ಪದ್ಮಾವತಿ ಪಟ್ಟಣವಾಗಿದ್ದ ಊರು ಜನರ ಬಾಯಲ್ಲಿ ?ನುಲಿಯಯ್ಯನೂರು? ಆಗಿ ಬಾಯಿಂದ ಬಾಯಿಗೆ ಬದಲಾಗುತ್ತಾ ಈಗ ?ನುಲೇನೂರು? ಎಂದು ಕರೆಯಲಾಗುತ್ತಿದೆ.

ನುಲಿಯ ಚಂದಯ್ಯನವರ ಅನನ್ಯ ಕಾಯಕ ನಿಷ್ಠೆ ಮತ್ತು ಕೆಲಸದೆಡೆಗಿನ ಶ್ರದ್ದೆ ಅನುಕರಣೀಯವಾದುದು. ಆ ಮಹಾ ಕಾಯಕ ಜೀವಿಗೆ ಶರಣು ಶರಣು.



ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

# ಹುಲಿಗಳಿವೆ ಎಚ್ಚರಿಕೆ

ಬಾಲ್ಯವೆಂದರೆ ಹಾಗೆ ಅಲ್ಲವೇ ಕಲಿಸಿಟ್ಟ ಹಸಿ ಅರಲಿನಂತೆ ಕಂಡಿದ್ದೆಲ್ಲಾ ಒಪ್ಪಿಕೊಳ್ಳುವ ಮರಲಿನಂತೆ.

ಪ್ರತಿದಿನದ ಬೆಳಕು ಕೂಡ ಒಂದು ಅದ್ಭುತ ಅನಾವರಣ ಚಿಟ್ಟೆಯ ಹಾರಾಟ, ಗುಬ್ಬಿಯ ಗೂಡು ಕಟ್ಟುವಿಕೆ ಮೊಗ್ಗು ಹೂವಾಗಿ ಅರಳಿದ್ದು,ಇಟ್ಟ ಪುಟ್ಟಬೀಜ ಟಿಸಿಲೊಡೆದು ಎರಡು ಎಲೆ ಮೂಡುವುದು ಎಲ್ಲಾ ಪ್ರಕೃತಿಯ ಸಹಜ ಘಟನೆಗಳು ಕೂಡ ಬಾಲ್ಯದಲ್ಲಿ ಒಂದು ಅದ್ಭುತ ವಿಸ್ಮಯ. ಎಷ್ಟೇ ಜಗಳವಾದರೂ ಮತ್ತೆ ಮರೆತು ಒಂದಾಗುವ ಗೆಳೆತನ ಕೆಟ್ಟದ್ದನ್ನು ಮರೆತುಬಿಡುವ ಹೊಸತನಕ್ಕೆ ನಾಂದಿಯಾಗುವ ಈ ಬಾಲ್ಯ

ಹೀಗೆ ಬಾಲ್ಯ ಎಂದರೆ ಸದಾಶಯ ಬಯಸುವ ಕಾಲ. ಆಗ ಶಾಲೆಗಳೆಂದರೆ ನಾವು ತೆರೆದುಕೊಳ್ಳುವ ಅದ್ಭುತ ಪ್ರಪಂಚ. ಗೆಳೆಯ ಗೆಳತಿಯರೇ ಜೀವನದ ಅಮೂಲ್ಯ ಆಸ್ತಿ. ಏನೇ ಬದಲಾದರೂ ಸ್ನೇಹ ಎಂದು ಬದಲಾಗದು ಎಂಬ ಭಾವನೆ . ಹಪಹಪಿಸುವ ಮನದ ಹಲವು ಒಡಂಬಡಿಕೆಗಳಿಗೆ ಉತ್ತರ ಕಂಡುಕೊಳ್ಳುತ್ತಿದ್ದು ಈ ಸ್ನೇಹಿತೆಯರ ಬಳಗದಲ್ಲಿಯೇ, ಹೀಗೆ, ಬಹುಶ ಅದು ಆರು ಅಥವಾ ಏಳನೇ ತರಗತಿ ಇಬಹುದು. ಅಪಕ್ವ ಮನಸ್ಸಿನ ಅತುಲಿತ ಆನಂದದ ಹಲವು ಬೆರಗುಗಳಿಗೆ ಕಣ್ತೆರೆಯುವ ಕಾಲ. ಗೆಳತಿಯೊಬ್ಬಳು ನನ್ನ ಸಮಾಜ ವಿಜ್ಞಾನ ವಿಷಯದ ನೋಟ್ ಬುಕ್ ಅನ್ನು ತನ್ನ ಮನೆಗೆ ಶನಿವಾರದಂದು ಕೊಂಡು ಹೋಗಿದ್ದಳು, ಅದನ್ನು ನೋಡಿ ಬರೆದುಕೊಂಡು ಮರಳಿ ಸೋಮವಾರ ಕೊಡುತ್ತೇನೆ ಎಂದವಳು, ಸೋಮವಾರ ಶಾಲೆಗೆ ರಜೆ ಹಾಕಿಬಿಟ್ಟಳು. ಆಗಿನ ಕಾಲದಲ್ಲಿ ನೋಟ್ಸ್ ಗಳಿಗೆ ಪಕ್ಕ ಎಂದು ರಫ್ ನೋಟ್ಸ್ ಗಳಿಗೆ ಕಚ್ಚಾ ಎಂದಲೂ ಅನ್ನುವ ಕಾಲ. ಟ್ಯೂಷನ್ಗಳ ಗೋಜು ಇರದಿದ್ದರೂ ಒಂದು ದಿನವೂ ಗುರುಗಳ ಹತ್ತಿರ ಬಯಿಸಿಕೊಳ್ಳದೆ ಅವರ ಕಣ್ಣಿನಲ್ಲಿ ಆದರ್ಶ ವಿದ್ಯಾರ್ಥಿ ಎಂದು ಆ ಸಾಲಿನಲ್ಲಿ ನಿಲ್ಲುವ ಹಪಹಪಿ ಯಾರಿಗಿರುವುದಿಲ್ಲ! ಅದರಲ್ಲೂ ವಿಶೇಷವಾಗಿ ಹುಡುಗಿಯರಿಗೆ. ತಪ್ಪು ಮಾಡದೇ ಇರಬೇಕು ಎನ್ನುವ ಒಂದು ಭಾವ. ಹಾಗಿದ್ದ ಕಾಲದಲ್ಲಿ ಮನೆ ಪಾಠವನ್ನು ಸರಿಯಾಗಿ ಬರೆದು ಗುರುಗಳಿಗೆ ಒಪ್ಪಿಸಿ ಒಂದು ಮೆಚ್ಚುಗೆ ನೋಟದಲ್ಲಿಯೇ ಉಳಿದುಬಿಡುತ್ತಿದ್ದೆ ಯಾರಿಂದಲೂ ಟೀಕೆ ಬರಬಾರದು ಜಾಣ ಹುಡುಗ, ಹುಡಗಿಯರ ಸಾಲಿಗೆ ನನ್ನದು ಒಂದು ಹೆಸರು ಇರಲಿ ಎಂದು . ಈ ಗೆಳತಿಯ ಹೆಸರು ವಿದ್ಯಾಯೆಂದಿಟ್ಟುಕೊಳ್ಳೋಣ, ಪಾಪ ತುಂಬಾ ಸಲುಗೆ ಇಂದಿರುವ ಸದಾ ಹಸನ್ಮುಖಿ ಹುಡುಗಿ. ಪ್ರತಿ ವಿಷಯವನ್ನು ಲಘುವಾಗಿ ಪರಿಗಣಿಸಿ ಎಲ್ಲವನ್ನು ಮರೆತು ನಗುನಗುತ್ತ ಇರುವಳು. ಆದರೆ ಅಂದು ಸೋಮವಾರ ಎಲ್ಲರ ಸಮಾಜ ವಿಜ್ಞಾನದ ನೋಟ್ಸ್ ಪರಿಶೀಲಿಸುತ್ತಿದ್ದ ಗುರುಗಳಿಗೆ ನಾನು ನೋಟ್ಸ್ ಕೊಡಲು ಆಗಲೇ ಇಲ್ಲ. ಸಮಯಕ್ಕೆ ಸರಿಯಾಗಿ ಹೋಂ ವರ್ಕ ಮಾಡಲಾರದವರನ್ನೆಲ್ಲ ಇಡೀ ಪಿರಿಯಡ್ ಮುಗಿಯುವವರೆಗೆ ಕ್ಲಾಸಿನಲ್ಲಿ ಎದ್ದು ನಿಲ್ಲಿಸುವ ಪರಿಪಾಠ. ನನ್ನ ಪಾಲಿಗೂ ಬಂದ ಶಿಕ್ಷೆ. ಎಂದೂ ಇಂತಹ ಶಿಕ್ಷೆಗೆ



ಗುರಿಯಾಗದವಳು ಅಂದು ಆ ಶಿಕ್ಷೆಯಿಂದ ಜಗತ್ತಿನ ಅತಿ ದೊಡ್ಡ ಅವಮಾನವೇ ಆದಂತೆ ಆಯಿತು. ಇಷ್ಟೇ ಅಲ್ಲ ಗುರುಗಳು ಕೂಡ


" ನೀನು ಮಾಡಿಲ್ಲವೇ ನಿನ್ನೆ ರವಿವಾರ ಖಾಲಿ ಕೂತು ಏನ ಮಾಡಿದಿ , ಬರ್ತಾ ಬರ್ತಾ ರಾಯರು ಕುದುರಿ ಕತ್ಯಾತು," ಎನ್ನುವ ಈ ಮಾತು ಗಂಟಲಿನ ನೋವು ಕಣ್ಣೀರು ಕಣ್ಣಿನಲ್ಲಿ ಪಸೆಯಾಗಲು ಬಹಳ ಹೊತ್ತು ಬೇಕಾಗಲಿಲ್ಲ. ಯಾವಾಗಲೂ ನೋವಿಗಿಂತ ಅವಮಾನ ತುಂಬಾ ಕಾಡುವುದು ಗುರುಗಳ ಮಾತಿಗೆ ಹುಡುಗರು ಖೊಳ್ಳೆಂದು ನಕ್ಕುಬಿಟ್ಟರು. ಶಿಕ್ಷೆಗೊಳಗಾದವಳನ್ನು ನೋಡಿ ಕೆಲವರಿಗೆ ಖುಷಿಯಾಗಿ ಇರಬೇಕೇನೋ, ಅದು ಸಣ್ಣ ವಿಷಯ ಆದರೂ ಬಾಲ್ಯದ ತಿಳುವಳಿಕೆಗೆ ಎಳೆಯ ಮನಸ್ಸಿಗೆ ಅದು ದೊಡ್ಡ ಅವಮಾನವೇ ಎನಿಸಿತು. ಮರುದಿನ ವಿದ್ಯಾ ಶಾಲೆಗೆ ಬಂದಳು ಆದ ಅವಮಾನಕ್ಕೆಲ್ಲ ಕಾರಣೀಭೂತಳು ಇವಳೇ ಎಂಬ ಸಿಟ್ಟಿನ ಜ್ವಾಲೆ ಬುಸು ಗುಟ್ಟಿ ಸಿಡಿಯುತ್ತಿತ್ತು. ಕನಿಷ್ಠ ಕಾರಣವನ್ನಾದರೂ ಕೇಳಬಹುದಿತ್ತು ಯಾಕೆ ಬಂದಿಲ್ಲ ಎಂದು, ನನ್ನ ನೋಟ್ಸ್ ಅನ್ನು ತನ್ನ ಕೈಯಲ್ಲಿ ಹಿಡಿದು, "ತಗೋ" ಎಂದು ಕೊಟ್ಟಳು. ಅತಿ ಸರಳ ಮತ್ತು ನಿರ್ಲಿಪ್ತ ಭಾವದಿಂದ ಇದ್ದಳು. ನಾನು ಹಸಿದ ಹುಲಿಯಂತೆ ಅವಮಾನದ ಕಿಡಿಯಿಂದ . ಯಾರಿಗೂ ಇನ್ನೊಮ್ಮೆ ಸಹಾಯ ಮಾಡಬಾರದು ಎಂದು ಕೊಂಕಿನ ಎರಡು ಮಾತುಗಳನ್ನು ಹೇಳಿದೆ. ಆಗಾಗ ಪುಸ್ತಕವನ್ನು ಓದುವ ಗೀಳಿನಿಂದ ಅಲ್ಲಲ್ಲಿ ಓದಿದ ಎರಡು ಗಾದೆ ಮಾತುಗಳನ್ನು ಸೇರಿ ಹೇಳಿದ್ದು ಕೇಳಿ ಕ್ಷಣ ಅವಳು ಮುಖ ಸಣ್ಣದು ಮಾಡಿದಳು. ಅವಳ ಆ ಕನಿಕರದ ಮುಖ ಕಂಡು ಆಕಾಶದಕ್ಕೆ ಏರಿದಂತಹ ಸಿಟ್ಟು ಭೂಮಿಗೆ ರಪ್ಪ ಅಂತ ಬಿದ್ದಿತ್ತು. ನಂತರ ಅವಳು ನಿಧಾನವಾಗಿ ಹೇಳಿದಳು, "ಇಲ್ಲ ನಿನ್ನೆ ನಾನು ದವಾಖಾನೆಗೆ ಹೋಗಿದ್ದೆ ಡಾಕ್ಟರಿಗೆ ತೋರಿಸಲಿಕ್ಕೆ!" ಸಿಟ್ಟು ಕಾಳಜಿ ರೂಪದಲ್ಲಿ ಪ್ರಕಟಗೊಂಡು ಯಾಕೆ ಏನಾಗಿತ್ತು ಅಂತ ಕೇಳಿದೆ. ಆಗ ಅವಳು ಒಂದು ಭಯಾನಕ ಕಾಯಿಲೆ ಕ್ಯಾನ್ಸರ ತನಗೆ ಇರುವುದಾಗಿ ಹೇಳಿದಳು. ಅದು ತನಗೆ ಇರುವುದಾಗಿ ಯಾರಿಗೂ ಹೇಳುವುದು ಬೇಡ ಎಂದು ಹೇಳಿದಳು.

ಛೆ!!ಅವಸರದಲ್ಲಿ ದುಡಿಕಿ ಬಿಟ್ಟಂತೆ ಅನಿಸಿತು. ಅವಾಗ ಅವಳಿಗೆ ಇರುವ ಕಾಯಿಲೆ ಮುಂದೆ ತನಗಾದ ಅವಮಾನ ಸಣ್ಣದೆನಿಸಿತು. ಹೀಗೆ ಅಲ್ಲವೇ ದೊಡ್ಡ ಸಮಸ್ಯೆ ಬಂದಾಗ ಇದ್ದ ಸಮಸ್ಯೆಗಳು ಸಣ್ಣವಾಗುವವು. ಅಂದಿನಿಂದ ಅವಳ ಜೊತೆ ಸ್ನೇಹ ಇನ್ನಷ್ಟು ನಿಕಟವಾಯಿತು. ಅದೇನೋ ಪಾಪ ಪ್ರಜ್ಞೆಯೋ ಅಥವಾ ಬಾಚಿಕೊಳ್ಳುವ ಮಮಕಾರವು ಆ ವಯಸ್ಸಿನ ಅಮಾಯಕತೆಯೋ ಅಂತೂ ದೇವರಿಗೆ ಪ್ರಾರ್ಥಿಸುವಾಗಲು ಕೂಡ ಅವಳಿಗೆ ವಾಸಿಯಾಗಲಿ ಎಂಬ ಬೇಡಿಕೆಯೊಂದು ಇರುತ್ತಿತ್ತು. ಹೀಗೆ ಗುರುಗಳು ಪಾಠ ಮಾಡುವಾಗ ಅವಳು ಪಕ್ಕ ಕುಳಿತಿರುವಾಗ ಅವಳ ಜೊತೆ ಆಟ ಆಡುವಾಗ, ಅವಳ ಜೊತೆ ಊಟ ಮಾಡುವಾಗ ಇಂದು ಈ ಕ್ಷಣಕ್ಕೆ ಜೊತೆಯಾಗಿರುವ ಈ ಜೀವ ಕೆಲವೇ ದಿನಗಳಲ್ಲಿ ನಮ್ಮಿಂದ ದೂರವಾಗುವದಲ್ಲ ಎಂಬ ಭಾವ ಕಾಡಿ ಒಮ್ಮೊಮ್ಮೆ ತೀರಾ ಮನಸ್ಸಿಗೆ ನೋವಾಗಿ ಬಿಡುತ್ತಿತ್ತು. ಇಲ್ಲೇ ಪಕ್ಕದಲ್ಲಿ ಕುಳಿತಿರುವಳು ಕೆಲವು ದಿನಗಳಲ್ಲಿ ಇಲ್ಲವಾಗಿ ಬಿಡುವಲ್ಲ ಎಂಬ ನೆನಪಾದರೆ ಹಿಂಸೆ ಅನಿಸಿತ್ತು. ಆದರೆ ಅವಳು ಮಾತ್ರ ಸಾವಿನ ಅಂಚಿನ ಅರಿವಿರದ ಪ್ರಯಾಣಿಕಳಂತೆ ನಿರುಮ್ಮಳವಾಗಿ ಸಹಜವಾಗಿಯೇ ಇರುತ್ತಿದ್ದಳು . ಬರಬರುತ್ತಾ ನನಗೋ ಅವಳ ಬಗ್ಗೆ ಹೆಚ್ಚಿನ ಆಸ್ತಿ ಶ್ರದ್ದೆ ಅವಳ ನೋಟ್ಸ್ ಬರೆಯಲಾಗದಿದ್ದರೂ ನಾನು ಬರೆದುಕೊಟ್ಟು ಪೂರ್ತಿಗೊಳಿಸುತ್ತಿದ್ದೆ. ಆದಷ್ಟು ಸಮಯ ಅವಳೊಂದಿಗೆ ಕಳೆಯುತ್ತಿದ್ದೆ ಇದರಿಂದ ನನ್ನ ಬೇರೆ ಖಾಸಾಗೆಳತಿಯರಿಗೂ ಇರಿಸುಮುರಿಸಾಗಿ " ಏನು ಅವಳ ಮೇಲೆ ಅಷ್ಟು ಹೆಚ್ಚಿನ ಪ್ರೀತಿ" ಅಂತ ಕೇಳುವರು.

ಮನದ 4 ಮಾತು

ಅದೊಂದು ಮಧ್ಯಾಹ್ನ ಊಟಕ್ಕೆ ಬಿಟ್ಟ ಸಮಯ ಊಟವಾದ ಮೇಲೆ ಉಳಿದ ಹತ್ತು ನಿಮಿಷದಲ್ಲಿ ಹಾಗೆ ಎಲ್ಲರೂ ಹರಟುತ್ತಾ ಕ್ಲಾಸಲ್ಲಿರೋ ಡೆಸ್ಕಿಗಳಿಗೆ ಆನಿಕೊಂಡು ಕುಂತು ನಿಂತು ಮಾತಾಡುತ್ತಿರುವ ಸಮಯ ಕುಶಾಲಿನಗಳಿಗೆ, ಅದ್ಯಾವುದೋ ಕಾರಣಕ್ಕೆ ವಿದ್ಯಾಳಿಗೂ ಮತ್ತು ಇನ್ನೊಬ್ಬ ಗೆಳತಿಗೆ ಜಯಾ ಮಾತು ಮಾತಿನಲ್ಲಿ ಜಗಳ ಪ್ರಾರಂಭವಾಗಿ ಬಿಟ್ಟಿತು. ಅದು ತೀರಾ ವಿಕೋಪಕ್ಕೆ ಹೋಗಿ ಇಬ್ಬರು ಒಬ್ಬರಿಗೊಬ್ಬರು ಸಿಟ್ಟು ಮಾಡಿ ಮಾತನಾಡಲಾರಂಭಿಸಿದರು . ಇನ್ನೊಬ್ಬ ಗೆಳತಿಯನ್ನು ಸುಮ್ಮನಿರಿಸಲು ನಾನು ಹರಸಾಹಸ ಪಟ್ಟೆ ಆಗ ಅವಳು ತಪ್ಪು ವಿದ್ಯಾಳದು ಎಂದು ಗೊತ್ತಿದ್ದರೂ ನೀನು ಪಕ್ಷಪಾತ ಮಾಡಿ ನಡೆದುಕೊಳ್ಳುವುದು ಸರಿಯಲ್ಲ ಎಂಬ ಭಾವದಿಂದ " ತಪ್ಪು ಯಾರದು ಅಂತ ಗೊತ್ತಿದ್ದ ಮೇಲೆ ಒಂದು ಖರೆ ಮಾತಾಡಬೇಕು ಇಲ್ಲ ಸುಮ್ನೆ ಇದ್ದುಬಿಡಬೇಕು. ಗೊತ್ತಿದ್ದು ಒಬ್ಬರನು ಇನ್ನೊಬ್ಬರ ಮೇಲೆ ಎತ್ತಿ ಕಟ್ಟಬಾರದು.ಛೀ,,!" ಎಂದಳು. ಅವಳ ಮಾತಿನಿಂದ ನೋವಾಯ್ತು. ಆಗ ನಾನು ತಕ್ಷಣ ಜಯಾಳನ್ನು ಪಕ್ಕಕ್ಕೆ ಸರಿಸಿ ನೋಡು ಕೇವಲ ಸರಿ ತಪ್ಪು ಒಂದೇ ಅಲ್ಲ ಅವಳಿಗೆ ಇಂತಿಂಥ ಕಾಯಿಲೆ ಇದೆ ಅವಳನ್ನು ನೋಯಿಸುವುದು ಸರಿಯಲ್ಲ ಅದಕ್ಕೆ ಹಾಗೆ ಹೇಳಿದ್ದು ಎಂದು ಹೇಳಿದೆ. ಆ ವಿಷಯವನ್ನು ಕೇಳಿದ ತಕ್ಷಣ ಜಯಾ ಸುಮ್ಮನಿರದೆ ತನ್ನ ಅಗಲ ಕಣ್ಣುಗಳನ್ನು ಇನ್ನಷ್ಟು ಅಗಲಿಸಿ ,,, "ಲೇ ವಿದ್ಯೆ ನಿನಗೆ ಕ್ಯಾನ್ಸರ್ ಅದನಾ?" ಅಂದಳು. ಅದಕ್ಕೆ ಇವಳು ನಿರ್ಲಿಪ್ತ ಭಾವದಿಂದ ಇಲ್ಲ ಎಂದು ಹೇಳಿದಳು. ನಾನು ತಕ್ಷಣ ,"ನನ್ನ ಮುಂದೆ ಹಾಗೆ ಹೇಳಿದ್ದೆ!" ಅಂತ ಕೇಳಿದೆ. "ಇಲ್ಲ ನೀನು ಅವತ್ತು ಬಹಳ ಸಿಟ್ಟು ಮಾಡ್ಕೊಂಡಿದ್ದೆ, ಅದಕ್ಕೆ ಹಂಗ ಹೇಳಿದೆ," ಅಂತ ಹೇಳಿ ನಕ್ಕುಬಿಟ್ಟಳು. ಆಗ ನಾನು ತಕ್ಷಣ ," ನಾನು ಖರೆ,,, (ನಿಜ) ಅನ್ಕೊಂಡಿದ್ದೆ ಅಂತ ಅಂದೆ. ಜಗಳಕ್ಕಾಗಿ ಗುಂಪು ಗೂಡಿದವರೆಲ್ಲ ಖೊಳ್ಳ ಎಂದು ನಕ್ಕು ಬಿಟ್ಟರು. ಎಲ್ಲರೂ ಸೇರಿ ನನ್ನನ್ನು ಮೂರ್ಖ ಮಾಡಿದರು ಎಂಬಂತೆ ಅನಿಸಿತು. ವಿದ್ಯಾಳನ್ನೊಮ್ಮೆ ಏಕಾಂತದಲ್ಲಿ ತುಂಬಾ ನೋವಿನಿಂದ ಕೇಳಿದೆ,, "ನಿನಗೆ ಇಂತಹದೊಂದು ಕಾಯಿಲೆ ಇದೆ ಅಂತ ನನ್ನ ಮುಂದೆ ಸುಳ್ಳು ಯಾಕೆ ಹೇಳಿದೆ?" ಅಂತ. ಆಗ ಅವಳು "ನಿನ್ಗೇನು ಸಮಸ್ಯೆ? ನನಗೆ ಕಾಯಿಲೆ ಇಲ್ಲ ಅಂತ ಬೇಸರವೇನು? ನೀ ನಿಜವಾದ ಗೆಳತಿ ಆಗಿದ್ದರೆ ನನಗೆ ಈ ಕಾಯಿಲೆ ಇಲ್ಲ ಎಂದು ತಿಳಿದಮ್ಯಾಲ ಖುಷಿ ಪಡಬೇಕಾಗಿತ್ತು" ಅಂತ ಹೇಳಿದಳು. ಅವಮಾನದ ಇನ್ನೊಂದು ಬದಿ. ಹೀಗೆ ಜೀವನದಲ್ಲಿ ಹಲವು ಬಾರಿ ಇಂತಹ ಮೋಸಗಳು ಆಗಿವೆ. ಯಾರನ್ನು ಏನೋ ಅಂದುಕೊಂಡು ಎತ್ತರಕ್ಕೆ ಇಟ್ಟಿರುತ್ತೇರವೆ. ಹತ್ತಿರ ಹೋಗಿ ನೋಡಿದರೆ ಬುಡದಲ್ಲಿ ಬರೆ ಗೊಬ್ಬರವಾಗಿತ್ತು. ಹಾಗೆಲ್ಲ ಆದಾಗ ಅಂದುಕೊಳ್ಳುವುದು ನಮ್ಮನ್ನು ಮೋಸ ಮಾಡಿದಾಗ ಆ ಮೋಸ ಮಾಡಿದವರ ತಪ್ಪಿಗಿಂತ ಅವರನ್ನು ನಂಬಿದ್ದರಲ್ಲಿ ನಮ್ಮ ಮೂರ್ಖತನ ಹೆಚ್ಚಿದೆಯಾ ಅಂತ. ಯಾವುದೇ ವಿಷಯವನ್ನು ಒರೆಗೆಹಚ್ಚಿ ನೋಡದೆ ಹೀಗೆ ನಂಬಿಬಿಡುವುದು ಒಮ್ಮೊಮ್ಮೆ ನಮ್ಮದೇ ಮೂರ್ಖತನ. ನಾನು ಹುಲಿಯನ್ನು ತಿನ್ನುವುದಿಲ್ಲ ಅದಕ್ಕೆ ಹುಲಿಯೂ ನನ್ನನ್ನು ತಿನ್ನಬಾರದು ಎಂಬುವ ನಮ್ಮ ನ್ಯಾಯ ಯಾವ ಕೋರ್ಟಿನಲ್ಲೂ ಸಾಬೀತು ಪಡಿಸಲಾಗುವುದಿಲ್ಲ.

ಅಲ್ಲವೇ!? ಹೀಗೆ ಜೀವನದಲ್ಲಿ ಹುಲಿಗಳು ಇದ್ದಾರೆ ಎಚ್ಚರಿಕೆ!!.



ಸಾಕ್ಷಿ ಶ್ರೀಕಾಂತ
ತಿಕೋಟಿಕರ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,